aṅgaḷaṁ (ḷiṁ?), nīladupparigegaḷa mēle māṇikyada kalaśaṅgaḷindoppuvatigōpuraṅgaḷiṁ, vajradhāreya bhittigaḷoḷ meṟeva bahuvidhada citraṅgaḷiṁ, kaṇgoppuva poñjagaligaḷ virājisuvatinavaratnaṅgaḷoḷ kūḍida raṅgamaṇṭapadiṁ, pacceya kaṁbaṅgaḷiṁ, puṣyarāgada tolegaḷindeseva śaśigalgaḷēṟujantegaḷindaivaṇṇada lōvegaḷiṁ, tōrpa baḷḷimiñcugaḷandadoḷirpasūryakāntadaṅgaja hastaṅgaḷiṁ, nīlada nelagaṭṭugaḷindaccugaḷ sanda konnavāḍaṅgaḷa sālgaḷindavaṟoḷ ninda amṛtada koḍaṅgaḷiṁ, mattaṁ kiṟuvāḍadoḷ gandhavaṭṭalugaḷiṁ, mattaṁ permāḍaṅgaḷoḷ pūpeṭṭigegaḷiṁ, bhasitada bharaṇigaḷiṁ, rudrākṣeya mālegaḷiṁ dēhāradupakaraṇaṅgaḷa eḍemāḍuva śivaśaraṇara pratibiṁbaṅgaḷu maṇistaṁbhaṅgaḷoḷ bhittigaḷoḷ mēldole kavāṭaṅgaḷoḷ sahasramadāgi tōṟalu, kaṇḍatiharuṣaṅgoḷutiha śivasukhigaḷa pacceya nela samadoḷu pādamaṁ toḷedure pari (va?) vāriyu maṟesire bīḷuva mugdharaṁ kaṇḍuṟe gahagahisuva śaraṇarumavare maraḷdeddā pacceya nelanaṁ kāṇuta modalā jalamende niṟiviḍidurugisuttaitappavaraṁ kāṇuta kaivoydincaradiṁ naguvati muktāṅganeyaruṁ, mattaṁ bhavanada dvāravaṭṭadoḷ rudrākṣeya sūsakagaḷa, muttina tōraṇaṅgaḷa, ratnada goṇḍeyagaḷa, thaḷathaḷisuva poṅgavāṭaṅgaḷa, kannaḍi kalaśaṅgaḷa piḍidāratiyanettuva kannikeyara, mttaṁ bhavanada ikkeladoḷ madhyadoḷ maṇṭapāgradoḷ śivaliṅgārcaneya māḍuva Basavana stutisuva, vacanavanōduva, gadyamaṁ kēḷuva, arthamaṁ pēḷuva, hāḍuva, ādyara anubhāvamaṁ lālisuta rahasyavanuccaripara, hāḍuva gānara, āḍuva pātrada, koṇḍāḍuva bhaṭṭāḷigaḷiṁ meṟeva Basavēśvarana hemmaneyaṁ Prabhudēvaru kāṇutta haruṣandaḷevuta, ānandaśaradhiya kūḍuta, nalinalidāḍuta ikkeladoḷ meṟevatibhadramaṇṭapagaḷa ā bhittiya ā tenegaḷa ā gōpuraṅgaḷa ā kalaśamanā tōraṇaṅgaḷanīkṣisuttire, stutisutta ughē enutiha puṣpāñjaliyaṁ māḍuva, āratiyanettuva śivabhaktara rudrakannikeyara atyanta stōtramaṁ māḍuva, nijaghōṣadoḷ śūnyasiṁhāsanamanaḍardu mēle mūrtigoḷuva prastāvada vacana:

This is how it was: The vacana which tells how Prabhudēva entered Lord Basavarāja's palace and, seeing Basavēśvara's Great House sparkling with gem-spikes on walls of gold covered all over

with glowing splendours of paintings; with assembly-halls at various points; with lofty towers shining with ruby pinnacles set on storeys of sapphire; its walls diamond-edged and bright with various kinds of paintings; with a stage bedecked with nine kinds of wondrous gems and glowing with lovely gold pedestals; with emerald pillars, beams of topaz, high rafters of beautiful moonstone and sloping affixures of five colours; with props for sunstone eaves that looked like flashing chain-lightning; with pavements made of sapphire, and rows of *konnavada* fixed in axles with pots of nectar placed in them; also, with cups of sandal-paste placed in small niches, and flower-baskets in big ones; with caskets of white ashes and rosaries of Rudrākṣha beads; and the happy ones delighting at the sight of the Śivaśaraṇas as they served the necessaries for worship, reflected a thousand times in the gem pillars, the walls, the upper beams and door panels; and then the śaraṇas bursting into peals of laughter to see unwary persons slipping in the water as it flowed over the even pavement of emerald after the washing of the feet; and the maids of liberation sweetly smiling and clapping as they watched those simple ones who, getting up again and now mistaking the emerald pavement itself for water, stepped in the fancied water with stooping backs and lifting the folds of their garments; and seeing, moreover, the bead trinkets in the gateway of the house; with pearl festoons, gem tassels and glittering doors of gold; with maids waving platters of light with pots and mirrors on them; and also seeing those who were engaged in worship of Śivaliṅga on both sides and in the middle of the house and the forepart of the assembly-hall: some singing praises of Basava, some reciting vacanas, some listening to prose readings; some explaining the meaning, or singing; some listening attentively to accounts of the Experiences of the Ancients and explaining their estoreric sense; musicians singing, others playing roles, panegyrists singing glories; and when Prabhudēva saw this, he was delighted and danced for joy till he was dissolved in an ocean of bliss, and gazing at the festoons, the pots and the towers, the spikes and the walls and the auspicious halls blazing on both sides, mounted the Throne of the Absolute and sat thereon, amidst shouts of high applause from the Śiva devotees, while heavenly maids waved lamps and offered flowers in handfuls and shouted 'Hurrah' in praise of him.

೧

ಮಲೆತು ಮೆಟ್ಟುತ್ತ, ತನುವನೊಲೆವುತ್ತ,
ತಲೆದೂಗಿ ಮನವನಲ್ಲಾಡಿದ
ಭುವನ ಭವನೇಶ್ವರನ ಹಿಂದು ಮುಂದ ನೋಡುತ್ತ
ನಗುತ್ತ ಮುತ್ತಿನ ತೋರಣಕ್ಕೆ ಹಾರೈಸಿ
ಬಸವನರಮನೆಯ ಪೊಕ್ಕನು ಕಲಿದೇವರ ದೇವನು.

maletu meṭṭutta, tanuvanolevutta,
taledūgi manavanallāḍida
bhuvana bhavanēśvarana hindu munda nōḍutta
nagutta muttina tōraṇakke hāraisi
basavanaramaneya pokkanu Kalidēvaradēvanu.

Solemnly treading, swinging himself,
Nodding his head and looking back and forth
Upon the Lord of the world's mansion, moved at heart,
Smiling, and reaching for the pearl-festoons,
God Kalidēva walked
Into Basavaṇṇa's palace.

ಮತ್ತಂ ಶೂನ್ಯಸಿಂಹಾಸನದ ಮೇಲೆ ಮೂರ್ತಿಗೊಂಡ ಪ್ರಸ್ತಾವದ ವಚನ:

mattaṁ śūnyasiṁhāsanada mēle mūrtigoṇḍa prastāvada vacana:

Again, the vacana which tells how he (Prabhudēva) sat on the Throne of the Absolute:

೨

ಬಲಕ್ಕೆ ಮುರಿದನು.
ಪೌಳಿಯ ಉತ್ತರ ಬಾಗಿಲಲ್ಲಿ ತಲೆವಾಗಿ ಹೊಕ್ಕ,
ಗತಿಯ ಪವಣಿನಲ್ಲಿ.
ಧವಳಾರಮಪ್ಪ ಪಶ್ಚಿಮದ್ವಾರದಿಂ
ತ್ರಿವಿಧಗತಿಯ ಶೂನ್ಯಸಿಂಹಾಸನದ ಮೇಲೆ
ಮುಕ್ತಕೇಶದ ಪರಮ ಗುರುರಾಜನೇಱಿದ ಕಲಿದೇವರ ದೇವನು.

balakke muridanu.
pouḷiya uttara bāgilalli talevāgi hokka,
gatiya pavaṇinalli.
dhavaḷāramappa paścimadvāradiṁ
trividhagatiya śūnyasiṁhāsanada mēle
muktakēśada paramagururājanēṟida Kalidēvara devanu.

He turned to the right.
Bending his head, he went with measured gait
Through the courtyard's northern door.
Through the western entrance, which itself
Was the white hall,
The loose-haired Sovereign Guru,
God Kalidēva,
Mounted the Throne of the Absolute
With the triple access.

ಶೂನ್ಯಸಿಂಹಾಸನದ ಮೇಲೆ ಪ್ರಭುದೇವರು ಮೂರ್ತಿಗೊಳಲು, ಬಸವರಾಜ ದೇವರು ನಮಸ್ಕರಿಸಿದ ವಚನ:

śūnyasiṁhāsanada mēle Prabhudēvaru mūrtigoḷalu, Basavarāja-dēvaru namaskarisida vacana:

The vacana which tells how Lord Basavarāja bowed in salutation to Prabhudēva when he sat on the Throne of the Absolute:

೩

ಬಟ್ಟಬಯಲಲ್ಲಿ ಒಂದು ತಲೆಯಿಲ್ಲದ ಆನೆ ಇದ್ದಿತ್ತು.
  ಆನೆ ಬಂದು ಆನೆ ನುಂಗಿ ತಾನೆ ಅಳಿಯಿತ್ತು.
ಅಂತರವಿಲ್ಲದ ಒಳಗು, ಅವಲಂಬವಿಲ್ಲದ ಹೊಱಗು ನೋಡಾ.
ದಳವಿಲ್ಲದ ಕುಸುಮದ ಗದ್ದುಗೆಯಲ್ಲಿ ಒಡಲಿಲ್ಲದ ಘನವು ಮೂರ್ತಿಗೊಂಡರೆ,
  ವಿಚಿತ್ರವಾಯಿತ್ತು ಜಗವೆಲ್ಲಾ !
ಕೂಡಲಸಂಗಮದೇವರ ಶರಣ ಪ್ರಭುದೇವರ ಶ್ರೀಪಾದಕ್ಕೆ
  ಆನು ನಮೋ ನಮೋ ಎಂಬೆನು.

baṭṭabayalalli ondu taleyillada āne iddittu.
  āne bandu āne nuṅgi tāne aḷiyittu.
antaravillada oḷagu, avalambavillada hoṛagu nōḍā.
daḷavillada kusumada gaddugeyalli oḍalillada ghanavu mūrtigoṇḍare,
  vicitravāyittu jagavellā!
Kūḍalasaṅgamadēvara śaraṇa Prabhudēvara śrīpādakke
  ānu namō namō embenu.

There was in the perfect Void
A headless elephant.
The elephant came and, swallowing
Another elephant, was itself destroyed.
Behold the Inner without difference,
The Outer without support.
When the bodiless Supreme assumes his seat
Upon the Throne of a petal-less flower,
It is a wonder to all the worlds!
I say Hail, O hail! to the holy feet
Of Prabhudēva, Lord Kūḍala Saṅgama's
Śaraṇa!

ಅಲ್ಲಿ ಹಡಪದಪ್ಪಣ್ಣಗಳ ವಚನ:

alli Haḍapaḍappaṇṇagaḷa vacana:

Haḍapadappa's vacana in this context:

೪

ನೆಲನ ಹೊದ್ದದು. ಆಕಾಶವ ಮುಟ್ಟದು. ಎಡೆಯಲೊಂದು ರೂಪಿಲ್ಲ.
ಭಾವವೆಂಬ ಜ್ಞಾನವೆ ನಿವಾಸ.
ನಿಲವೆ ಭಿತ್ತಿ. ನಿರಹಂಕಾರವೆ ಶಿಖರಿ. ಮಹದಹಂಕಾರವೆ ಶೃಂಗಾರಕಳಶ.
ಸಹಸ್ರಪತ್ರದ ನವಕಮಲಸಿಂಹಾಸನದ ನಿತ್ಯವೆ ಮಲಗು.
ನಿಜವೆಂಬ ವಿಸ್ತರದಲ್ಲಿ
ನಿತ್ಯನಿರಾಳವೆಂಬ ಮಹಾಘನವು ಬಂದು ಮೂರ್ತಿಗೊಳ್ಳಲು,
ಕಾಯದ ಕಂಗೆ ಕಾಣಬಾರದು;
ಮನದ ಮುಂದೆ ಅಳವಡದು; ಭಾವದ ಬಗೆಗೆ ಮೈದೋಱದು.
ಬಸವಪ್ರಿಯ ಕೂಡಲಚನ್ನಸಂಗಯ್ಯನಲ್ಲಿ
ಪ್ರಭುದೇವರ ಶ್ರೀಪಾದಕ್ಕೆ ನಮೋ ನಮೋ ಎಂಬೆನು.

nelana hoddadu. ākāśava muṭṭadu. eḍeyalondu rūpilla.
bhāvavemba jñānave nivāsa.
nilave bhitti. nirahaṁkārave śikhari. mahadahaṅkārave śṛṅgārakaḷaśa.
sahasrapatrada navakamalasiṁhāsanada nityave malagu.

nijavemba vistaradalli
nityanirāḷavemba mahāghanavu bandu mūrtigoḷḷalu,
kāyada kaṅge kāṇabāradu;
manada munde aḷavaḍadu; bhāvada bagege maidōṟadu.
Basavapriya Kūḍalacennasaṅgayyanalli
Prabhudēvara śrīpādakke namō namō embenu.

He does not touch the earth;
He does not touch the sky;
He has no spatial form;
The knowledge that he's the Spirit, his home;
His majesty are the walls;
His egolessness, its dome;
And his transcendent sense of self
Its stately pinnacle;
His pillow, the eternity
Of the fresh thousand-petalled Lotus throne . . .
When the Great Absolute,
Eternally serene,
Comes to the vastness of Reality
And takes his seat,
He dazzles the body's eye;
You cannot grasp him with your mind;
He does not manifest himself
Unto your heart.
In Basavapriya Kūḍala Cennasaṅga,
I say Hail, O hail!
To Prabhudēva's holy feet!

ಅಲ್ಲಿ ಸೊಡ್ಡಳಬಾಚರಸರ ವಚನ:

alli Soḍḍaḷabācarasara vacana:

Soḍḍaḷa Bācarasa's vacana in this context:

೫

ಆಕಾರವಿಲ್ಲದ ನಿರಾಕಾರದ ಮಠಕ್ಕೆ
ನಿರಾಳವೆಂಬ ಗಂಡ ಬಂದು ಕುಳ್ಳಿರಲು,
ಮೂವರು ಹೆಮ್ಮಕ್ಕಳು ಸೇವೆಯ ಮಾಡುವರು.
ಇಬ್ಬರು ಸಂಗವ ಮಾಡುತ್ತಿರ್ಪರು.
ಒಬ್ಬಾಕೆ ಪುರುಷನ ನುಂಗಿಕೊಂಡಿಪ್ಪಳು.

ಇವರಱುವರ ಕೂಡೆ ಹೊಯಿಕೈಯಾಗಿ ಇಪ್ಪನ ಕಂಡು
ಆನು ಪ್ರಭುವೆಂದಱಿದು, ಆತನ ನಿಜ ಪಾದಕ್ಕೆಱಗಿ,
ಎನ್ನ ಭವವ ಹಱಿದೆನು.
ಮಹಾದಾನಿಸೊಡ್ಡಳನ ಕಂಡ ಕಡುಸುಖವ ಉಪಮಿಸಬಾರದು.

ākāravillada nirākārada maṭhakke
nirāḷavemba gaṇḍa bandu kuḷḷiralu,
mūvaru hemmakkaḷu sēveya māḍuvaru.
ibbaru saṅgava māḍuttirparu.
obbāke puruṣana nuṅgikoṇḍippaḷu.
ivararuvara kūḍe hoyikaiyāgi ippana kaṇḍu
ānu Prabhuvendaṟidu, ātana nijapādakkeṟagi,
enna bhavava haṟidenu.
Mahādānisoḍḍaḷana kaṇḍa kaḍusukhava upamisabāradu.

To the matha of the Formless without form
When the Lord came, called The Serene,
And took his seat,
Three damsels did him service . . .
Two kept him company,
One swallowed the Lord.
Seeing him live long with the six hand in hand,
I knew it to be Prabhu and lay
Prostrate before his feet,
And broke my wheel of births.
The great joy at the sight
Of Mahadāni Soḍḍaḷa
Is past compare!

ಇದಕ್ಕೆ ಬಸವರಾಜದೇವರ ವಚನ:

idakke Basavarājadēvara vacana:

Lord Basavarāja's vacana thereon:

೬

ಎನ್ನ ಗಂಡ ಬರಬೇಕೆಂದು
ಆನು ಎನ್ನಂತರಂಗವೆಂಬ ಮನೆಯು ತೆಱಹು ಮಾಡಿ,
ಅಷ್ಟದಳವೆಂಬ ಓವರಿಯೊಳಗೆ ನಿಜನಿವಾಸವೆಂಬ ಹಾಸುಗೆಯು ಹಾಸಿ,
ಧ್ಯಾನವೆಂಬ ಮೇಲುಕಟ್ಟಂ ಕಟ್ಟಿ, ಜ್ಞಾನವೆಂಬ ದೀಪವ ಬೆಳಗಿ,

ನಿಃಕ್ರೀಯೆಂಬ ಉಪಚಾರಂಗಳ ಹರಹಿಕೊಂಡು,
ಪಶ್ಚಿಮದ್ವಾರವೆಂಬ ಬಾಗಿಲ ತೆಗೆದು,
ಕಂಗಳೆ ಪ್ರಾಣವಾಗಿ ಬರವ ಹಾರುತ್ತಿರ್ದೆನಯ್ಯಾ ನಾನು !
ಬಾರನೆಂದು ಉಮ್ಮಳಿಸಿಹಳೆಂದು ತಾನೆ ಬಂದು,
ಎನ್ನ ಹೃದಯಸಿಂಹಾಸನದ ಮೇಲೆ
ಮೂರ್ತಿಗೊಂಡರೆನ್ನ ಮನದ ಬಯಕೆ ಸಯವಾಯಿತ್ತು.
ಹಿಂದೆ ಹನ್ನೆರಡು ವರುಷದಲ್ಲಿದ್ದ ಚಿಂತೆ
ಇಂದು ನಿಶ್ಚಿಂತೆಯಾಯಿತ್ತು.
ಕೂಡಲಸಂಗಮದೇವರು ಕೃಪಾಮೂರ್ತಿಯಾದ ಕಾರಣ
ನಾನು ಬದುಕಿದೆನು !

enna gaṇḍa barabēkendu
ānu ennantaraṅgaveṁba maneya teṟahu māḍi,
aṣṭadaḷaveṁba ōvariyoḷage nijanivāsaveṁba hāsugeya hāsi,
dhyānaveṁba mēlukaṭṭaṁ kaṭṭi, jñānaveṁba dīpava beḷagi,
niḥkrīyeṁba upacāraṅgaḷa harahikoṇḍu,
paścimadvāraveṁba bāgila tegedu,
kaṅgaḷe prāṇavāgi barava hāruttirdenayyā nānu!
bāranendu ummaḷisihaḷendu tāne bandu,
enna hṛdaya siṁhāsanada mēle
mūrtigoṇḍarenna manada bayake sayavāyittu.
hinde hanneraḍu varuṣadallidda cinte
indu niścinteyāyittu.
Kūḍalasaṅgamadēvaru kṛpāmūrtiyāda kāraṇa
nānu badukidenu!

So that my Lord should come
I emptied the mansion of my heart;
Within the inner chamber which they call
The eight-petalled lotus, I spread
The bed which is my real home; I tied
Meditation for a canopy;
Waved knowledge for a lamp; spread out
Non-action for the ritual aids;
Opened the door called western gate;
And, life itself turned eyes, I have
Awaited his arrival! Lest I grieve
At his not coming, he did come,

And when he took his seat
On my heart's throne, my heart's desire
Found its fulfilment. The care
Of twelve past years
Has been today dispelled. Because
Lord Kūḍala Saṅgama is
The incarnation of Grace itself,
I have been saved!

ಮತ್ತಂ ಬಸವರಾಜದೇವರು ಪಾದಾರ್ಚನೆಯಂ ಮಾಡುವ ಪ್ರಸ್ತಾವದ ವಚನ:

mattaṁ Basavarājadēvaru pādārcaneyaṁ māḍuva prastāvada vacana:

Again: the vacana which tells how Lord Basavarāja worships his (Prabhudēva's) feet:

೭

ಎನ್ನ ಮನವು ನಿಮ್ಮ ಚರಣವ ಕಂಡ ಬಳಿಕ,
ಬೆರಸಿಯಲ್ಲದೆ ಅಗಲಿ ಸೈರಿಸಲಾಱೆನಯ್ಯಾ.
ತ್ರಾಹಿ ತ್ರಾಹಿ ! ಘನಮಹಿಮ,
ನಿಮ್ಮ ಪಾದಾರ್ಚನೆಗೆ ಎನ್ನ ಪರಮಾನಂದಜಲವ ತುಂಬುವೆನಯ್ಯಾ.
ಪೂಜೆಯ ಮಾಡುವರೆ ಎನ್ನ ಹೃದಯಕಮಲವನರ್ಚಿಸುವೆ.
ಆ ರತಿಯಿಂದ ಆರತಿಯನೆತ್ತುವೆನೆನ್ನ
ಮಹಾಪ್ರಕಾಶಧೂಪವ ಬೀಸುವನೆನ್ನ ಸ್ವಾನುಭಾವದ ಗಂಧವನೀವೆ.
ಈ ತೆಱನಲ್ಲದೆ ಅಷ್ಟವಿಧಾರ್ಚನೆ ಷೋಡಶೋಪಚಾರವೆಂಬುದಕ್ಕೆ
ಬೇಱೆ ತೆಱಹ ನಾ ಕಾಣೆನಯ್ಯಾ.
ಕೂಡಲಸಂಗಮದೇವಯ್ಯಾ,
ಪ್ರಭುವೆನ್ನ ಪ್ರಾಣಲಿಂಗವೆಂಬುದು
ಎನಗಿಂದು ಕಾಣಬಂದಿತ್ತು ನೋಡಯ್ಯಾ !

enna manavu nimma caraṇava kaṇḍa baḷik ı,
berasiyallade agali sairisalāṟenayyā.
trāhi trāhi! ghanamahima,
nimma pādārcanege enna paramānandajalava tumbuvenayyā.
pūjeya māḍuvare enna hṛdayakamalavanarcisuve.
ā ratiyinda āratiyanettuvenenna
mahāprakāśadhūpava bīsuvanenna svānubhāvada gandhavanīve

ī teṟanallade aṣṭavidhārcane ṣōḍaśōpacāraveṁbudakke
bēṟe teṟaha nā kāṇenayyā.
Kūḍalasaṅgamadēvayyā,
Prabhuvenna prāṇaliṅgaveṁbudu
enagindu kāṇabandittu nōḍayyā!

E'er since my mind has seen Thy feet
I cannot bear this parting, I must unite.
Protect me, O gracious one!
For worshipping Thy feet,
I fill the water of my supreme bliss.
Whenever I worship, the lotus of my heart
Is what I worship; for love I wave the lamp,
And swing the censer of Enlightenment;
My Self-experience
I offer for the sandal-paste.
I see no scope, apart from this, O Lord,
For eightfold worship and
Sixteenfold discipline.
Mark you, Kūḍala Saṅgama Lord,
Today I've come to know
That Prabhu is my Prāṇaliṅga Itself!

ಮತ್ತಂ ದರ್ಶನದ ಸುಖಾನಂದದ ವಚನ:

mattaṁ darśanada sukhānandada vacana:

Again: the vacana expressing joy at seeing him (Prabhudēva):

೮

ನಿಮ್ಮ ನೋಟವನಂತ ಸುಖವು! ನಿಮ್ಮ ಕೂಟ ಪರಮಸುಖವು!
ಅಷ್ಟಕೋಟಿ ರೋಮಂಗಳೆಲ್ಲಾ ಕಂಗಳಾಗಿ ನೋಡುತ್ತಿರ್ದೆನು!
ಕೂಡಲಸಂಗಮದೇವಯ್ಯಾ,
ನಿಮ್ಮ ನೋಡಿ ನೋಡಿ ಎನ್ನ ಮನದಲ್ಲಿ ರತಿ ಹುಟ್ಟಿ
ನಿಮಿರ್ದವೆನ್ನ ಕಳೆಗಳು.

nimma nōṭavananta sukhavu! nimma kūṭa paramasukhavu!
aṣṭakōṭi rōmaṅgaḷellā kaṅgaḷāgi nōḍuttirdenu!
Kūḍalasaṅgamadēvayyā,
nimma nōḍi nōḍi enna manadalli rati huṭṭi
nimirdavenna kaḷegaḷu.

Infinite the bliss of seeing Thee,
Supreme the bliss of meeting Thee.
I gaze at Thee, with all
My billion hairs transformed to eyes!
O Kūḍala Saṅgama Lord,
As, gazing and gazing at Thee,
Love burgeoned in my heart,
The many marks of love stood out!

೬

ಮತ್ತಂ,

ಎನ್ನ ವಚನದಲ್ಲಿ ನಾಮಾಮೃತ ತುಂಬಿ,
ಎನ್ನ ನಯನದಲ್ಲಿ ಮೂರುತಿ ತುಂಬಿ,
ಎನ್ನ ಮನದಲ್ಲಿ ನಿಮ್ಮ ನೆನಹು ತುಂಬಿ,
ಎನ್ನ ಕಿವಿಯಲ್ಲಿ ನಿಮ್ಮ ಕೀರ್ತಿ ತುಂಬಿ,
ಕೂಡಲಸಂಗಮದೇವಾ,
ನಿಮ್ಮ ಚರಣಕಮಲದೊಳಗಾನು ತುಂಬಿ.

mattaṁ,

enna vacanadalli nāmāmṛta tuṁbi,
enna nayanadalli mūruti tuṁbi,
enna manadalli nimma nenahu tuṁbi,
enna kiviyalli nimma kīrti tuṁbi,
kūḍalasaṅgamadēvā,
nimma caraṇakamaladoḷagānu tuṁbi.

Again:

Lord, I am a bee
In the lotus of Thy feet;
Lo, my tongue is sweet,
With nectar of Thy name;
My eyes are all aflame
With beauty of Thy face;
The very thought of Thee
Haunts all my nights and days;
My ears are filled, you see,
With music of Thy praise!

೧೦

ಮತ್ತಂ,
ಕಂಡ ಕನಸುನಿಧಾನವ ಕಂಡೆನಯ್ಯಾ !
ಬಿಡಲಾಱದ ನಿಧಾನವ ಕಂಡೆನಯ್ಯಾ !
ಕೂಡಲಸಂಗಯ್ಯನೆಂಬ ನಿಧಾನವ ಕಂಡು ಬಿಡಲಾಱೆನಯ್ಯಾ !

mattaṁ,
kaṇḍa kanasunidhānava kaṇḍenayyā!
biḍalāṟada nidhānava kaṇḍenayyā!
Kūḍalasaṅgayyanemba nidhānava kaṇḍu biḍalāṟenayyā!

Again:

I've found the treasure that I saw in dream!
I've found the treasure that must not be lost!
Now that I found
The treasure Kūḍala Saṅga,
I cannot let it go!

೧೧

ಮತ್ತಂ,
ಕಾಣಬಾರದ ವಸ್ತು ಕೈಗೆ ಸಾರಿತ್ತಯ್ಯಾ.
ಆನಂದದಿಂದ ಆಡುವೆ, ಹಾಡುವೆ.
ಎನ್ನ ಕಣ್ಣು ತುಂಬಿ ನೋಡುವೆ.
ಎನ್ನ ಮನವೊಲಿದು ಭಕ್ತಿಯ ಮಾಡುವೆ,
ಕೂಡಲಸಂಗಯ್ಯಾ ನಿನಗೆ !

mattaṁ,
kāṇabārada vastu kaige sārittayyā.
ānandadinda āḍuve, hāḍuve.
enna kaṇṇu tuṁbi nōḍuve.
enna manavolidu bhaktiya māḍuve,
Kūḍalasaṅgayyā ninage!

Again:

The thing that never could be seen
Has come unto my hands:
I sing and dance with joy,
I am all eyes!
O Kūḍala Saṅgama Lord, with loving heart
I dedicate my piety to Thee!

೧೨

ಮತ್ತಂ,

ಆಡಿ ಕಾಲು ದಣಿಯವು, ನೋಡಿ ಕಂಗಳು ದಣಿಯವು.
ಹಾಡಿ ಮನ ದಣಿಯದಿನ್ನೇವೆನಿನ್ನೇವೆನಯ್ಯಾ?
ನಿಮ್ಮುವ ಕೈಮುಟ್ಟಿ ಪೂಜಿಸಿ,
ಮನದಣಿಯಲೊಲ್ಲದಿನ್ನೇವೆನಿನ್ನೇವೆ?
ಕೂಡಲಸಂಗಮದೇವಾ,
ನಿಮ್ಮ ಉದರವ ಬಗಿದು ಹೊಗುವ ಭರವೆನಗೆ.

mattaṁ,
āḍi kālu daṇiyavu. nōḍi kaṅgaḷu daṇiyavu.
hāḍi mana daṇiyadinnēveninnēvenayyā?
nimmuva kaimuṭṭi pūjisi
manadaṇiyalolladinnēveninnēve?
Kūḍalasaṅgamadēvā,
nimma udarava bagidu hoguva bharavenage.

Again:
My legs tire not with dancing,
My eyes tire not with gazing,
My heart tires not with singing:
What more is there, O Lord, what more?
My heart tires not with worshipping
Thee face to face:
What else is there, O Lord, what else?
What I'd love most to do,
O Kūḍala Saṅgama Lord,
Is burst Thy belly and enter it!

ಇಂತು ಪ್ರಭುದೇವರು ಶೂನ್ಯಸಿಂಹಾಸನದ ಮೇಲೆ ಮೂರ್ತಿಗೊಂಡಿರಲು, ಬಸವರಾಜದೇವರು ಪರಮಾನಂದಯುಕ್ತವಾದ ಸದ್ಭಕ್ತಿಯಿಂದ ಪ್ರಭುದೇವರ ಪೂಜಿಸಿ, ಆಡಿ ಹಾಡಿ ಓಲಾಡುತ್ತಿರಲು, ಇತ್ತಲು ಆರೋಗಣೆಗೆ ಬಂದು ಕುಳ್ಳಿರ್ದ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮವೆಲ್ಲವೂ ಕ್ರೋಧದಿಂದ ಬಸವರಾಜದೇವರ ಮೇಲೂ ಪ್ರಭುದೇವರ ಮೇಲೆಯೂ ಡಂಗುರವನಿಕ್ಕಿ ಎದ್ದು ಹೋದ ಪ್ರಸ್ತಾವದ ವಚನ:

intu Prabhudēvaru śūnyasiṁhāsanada mēle mūrtigoṇḍiralu, Basavarājadēvaru paramānandayuktavāda sadbhaktiyinda Prabhudēvara pūjisi, āḍi hāḍi ōlāḍuttiralu, ittalu ārōgaṇege bandu kuḷḷirda

lakṣada mēle tombattārusāvira jaṅgamavellavū krōdhadinda Basavarājadēvara mēlū Prabhudēvara mēleyū ḍaṅguravanikki eddu hōda prastāvada vacana:

The vacana which tells how, when Prabhudēva had thus sat on the Throne of the Absolute, and Lord Basavarāja had worshipped him with sincere devotion coupled with supreme joy, singing, dancing and swaying to and fro, on the other side the one lakh and ninety-six thousand Jaṅgamas who had come and were sitting at dinner, all began from anger to beat the gong in the face of both Lord Basavarāja and Prabhudēva, and getting up, went away:

೧೩

ಅರಳುಗಂಗಳವರಿಗೆ ಹರಳುಗಂಗಳವರು ಸೈರಿಸದಂತೆ,
ತುಱುಬುಳ್ಳವರಿಗೆ ಹಱಿಮಂಡೆಯವರು ಸೈರಿಸದಂತೆ,
ಅರಸನ ಕಂಡು ಪುರುಷನ ಮಱೆದಂತೆ
ಮಾಡಿದನೀ ವ್ರತಗೇಡಿ ಬಸವನು.
ಮಹೇಂದ್ರಜಾಲಿಕನೊಬ್ಬನ ಪ್ರಭುವೆಂದು ಕುಳ್ಳಿರಿಸಿಕೊಂಡು,
ತನ್ನ ಪ್ರಾಣಲಿಂಗವೆಂದು ನಮ್ಮ ತಿರುಗಿ ನೋಡಲೊಲ್ಲ.
ಆತನಲ್ಲಿ ಏನು ಲೇಸಕಂಡನು? ನಮ್ಮಲ್ಲಿ ಏನು ಹೊಲ್ಲಹವ ಕಂಡನು?
ಕಂಚನೊಲ್ಲದೆ ಬಿಟ್ಟು ಹಂಚ ಹಿಡಿದನು.
ಅನಾಚಾರಿಯವನೊಬ್ಬ, ವ್ರತಗೇಡಿ ಬಸವನೊಬ್ಬ.
ಇವರಿಬ್ಬರೂ ದೇವಲೋಕ ಮರ್ತ್ಯಲೋಕಕ್ಕೆ ಹೊಱಗು.
ಇವಂದಿರ ಮುಖವ ನೋಡಲಾಗದು
ಎನ್ನುತ ಹೋದರು ಕಲಿದೇವನ ಶರಣರು.

araḷugaṅgaḷavarige haraḷugaṅgaḷavaru sairisadante,
tuṟubuḷḷavarige haṟimaṇḍeyavaru sairisadante,
arasanakaṇḍu puruṣana maṟedante
māḍidanī vratagēḍi Basavanu.
mahēndrajālikanobbana Prabhuvendu kuḷḷirisikoṇḍu,
tanna prāṇaliṅgavendu namma tirugi nōḍalolla.
ātanalli ēnu lēsakaṇḍanu? nammalli ēnu hollahava kaṇḍanu?
kañcanollade biṭṭu hañca hiḍidanu.
anācāriyavanobba, vratagēḍi Basavanobba.
ivaribbarū dēvalōka martyalōkakke hoṟagu.
ivandira mukhava nōḍalāgadu
ennuta hōdaru Kalidēvana śaraṇaru.

"As those with pebbly eyes can't bear the sight
Of those with flower-like eyes;
As those with bald heads cannot bear the sight
Of those who wear a bun of hair;
As one who, seeing a king, forgets her lord,
This breaker of vows, Basava, has done
In making a mighty sorcerer sit
As though he were Prabhu himself;
Thinking he is Prāṇaliṅga Itself,
He never so much as looked at us!
What wonder did he find in him?
What baseness did he find in us?
He let the copper go, and clung to earthenware!
One is a worthless man,
Basava, the other, a breaker of vows.
Both of them are outside
The mortal and immortal worlds."
Thus said Kalidēva's śaraṇas,
"Their faces are hateful to the sight,"
And went away.

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ:

idakke Prabhudēvara pratyuttara:

Prabhudēva's rejoinder thereto:

೧೪

ಅಯ್ಯಾ, ಸಾತ್ವಿಕ ಶರಣರ ನುಡಿ ಹುಸಿಯೆ?
ಅದು ದಿಟ, ಅದು ದಿಟ.
ಒಳಗೆಂಬುದೇ ದೇವಲೋಕ. ಹೊಱಗೆಂಬುದೇ ಮರ್ತ್ಯಲೋಕ.
ಈ ಎರಡು ಲೋಕಕ್ಕೆ ಹೊಱಗಾಗಿ ನಾವಿರಲು,
ಈ ಎರಡು ಲೋಕದೊಳಗೆಯೂ ತಾವೆ ಇರಲಿ ಗುಹೇಶ್ವರಾ !

ayyā, sātvika śaraṇara nuḍi husiye?
adu diṭa, adu diṭa.
oḷagembudē dēvalōka. hoṟagembudē martyalōka.
ī eraḍu lōkakke hoṟagāgi nāviralu
ī eraḍu lōkadoḷageyū tāve irali Guhēśvarā!

Can a śaraṇa's word, good Sir,
Prove false?
It is the truth, the very truth!
The world of gods is what's within;
The mortal world is what's without.
Since we are away
From those two worlds,
Let them, Guhēśvara, be there!

ಮತ್ತಂ ಪ್ರಭುದೇವರುದ್ದಂಡಿಸುತ್ತ ಎದ್ದುಹೋದ ಜಂಗಮವ ವಿಡಂಬಿಸುವ ಪ್ರಸ್ತಾವದ ವಚನ:

mattaṁ Prabhudēvaruddaṇḍisutta eddu hōda jaṅgamava viḍaṁbisuva prastāvada vacana:

Again: the vacana which tells how Prabhudēva ridiculed the Jaṅgamas, who, after behaving insolently towards him, got up and went away:

೧೫

ಅಂಗಜಂಗುಳಿಗಳೆಲ್ಲಾ ಅಶನಕ್ಕೆ ನೆರೆದರು.
ಲಿಂಗದ ಹವಣನಿವರೆತ್ತ ಬಲ್ಲರು?
ಕಾಯಜೀವಿಗಳು ಕಳವಳಧಾರಿಗಳು,
ದೇವರ ಸುದ್ದಿಯನಿವರೆತ್ತ ಬಲ್ಲರು?
ಮದ್ಯಪಾನವನುಂಡು ಮದವೆದ್ದ ಜೋಗಿಯಂತೆ ನುಡಿವರು.
ಗುಹೇಶ್ವರನ ನಿಲವನಿವರೆತ್ತ ಬಲ್ಲರು?

aṅgajaṅguḷigaḷellā aśanakke neredaru.
liṅgada havaṇanivaretta ballaru?
kāyajīvigaḷu kaḷavaḷadhārigaḷu,
dēvara suddiyanivaretta ballaru?
madyapānavanuṇḍu madavedda jōgiyante nuḍivaru.
Guhēśvarana nilavanivaretta ballaru?

They all are but a horde of flesh,
Assembled for the sake of food.
How could they know of Liṅga's worth?
How can they know the news of God,
Who live within the flesh and bear
The frets and fevers of this world?
They talk like drunken monks
Whose liquor has gone to their heads:
How can they know Guhēśvara's majesty?

ಆ ಪ್ರಸ್ತಾವದೊಳು ಚಿಕ್ಕದಣ್ಣಾಯಕರು ವಿಡಂಬಿಸುವ ಪ್ರಸ್ತಾವದ ವಚನ:

ā prastāvadoḷu Cikkadaṇṇāyakaru viḍaṁbisuva prastāvada vacana:

The vacana in which Cennabasavaṇṇa on this occasion ridicules (the Jaṅgamas):

೧೬

ಅತಿಮಥನವೆಂಬ ಶೂನ್ಯಸಿಂಹಾಸನವನೇಱಿಕೊಂಡು
    ನಾವೆ ಹಿರಿಯರು, ನಾವೆ ದೇವರೆಂಬರು. ತಮ್ಮ ತಾವಱಿಯರು.
ಅದ್ಭುತ ಮನಭುಂಜಕರ ಮೆಚ್ಚ
    ನಮ್ಮ ಕೂಡಲಚೆನ್ನಸಂಗಯ್ಯನು.

atimathanaveṁba śūnyasiṁhāsanavanēṟikoṇḍu
    nāve hiriyaru, nāve dēvareṁbaru. tamma tāvaṟiyaru.
adbhuta manabhuñjakara mecca
    namma Kūḍalacennasaṅgayyanu.

We are the elders, we the gods, they say;
Once having climbed the hollow throne
Of this world's giddy whirl,
They do not know themselves.
Lord Kūḍala Cennasaṅga spurns
The wondrous ones who feed
On their own hearts!

೧೭

ಮತ್ತಂ,
    ಪಥವನಱಿಯದೆ ಮಂಡೆಯ ಬೋಳಿಸಿಕೊಂಡಾತ ಜಂಗಮವಲ್ಲ.
        ಸತ್ತರೆ ತೆಗೆವರಿಲ್ಲೆಂದು ಕಟ್ಟಿಕೊಂಡಾತ ಭಕ್ತನಲ್ಲ.
    ತನು ಮನ ಧನ ಎನ್ನದಲ್ಲ,
        ಲಿಂಗದ ಒಡವೆ ಲಿಂಗಕ್ಕೆಂದು ಮಾಡುವಾತ ಭಕ್ತ.
    ತನುಗುಣ ವಿರಹಿತನಾಗಿ
        ಲಿಂಗದಲ್ಲಿ ಸಯವಾಗಿ ಬಂದು ನಿಂದಾತನೆ ಜಂಗಮ.
    ಅಂಥ ಭಕ್ತನು, ಅಂಥ ಜಂಗಮವು,
        ಕೂಡಲಚೆನ್ನಸಂಗಯ್ಯನಲ್ಲಿ ಬಸವನು ಪ್ರಭುವಲ್ಲದಿಲ್ಲ.
        ಉಳಿದವರೆಲ್ಲಾ ಲಾಂಛನಧಾರಿಗಳು.

mattaṁ,

pathavanaṟiyade maṇḍeya bōḷisikoṇḍāta jaṅgamavalla.
sattare tegevarillendu kaṭṭikoṇḍāta bhaktanalla.
tanu mana dhana ennadalla,
līṅgada oḍave liṅgakkendu māḍuvāta bhakta.
tanuguṇa virahitanāgi
liṅgadalli sayavāgi bandu nindātane jaṅgama.
antha bhaktanu antha jaṅgamavu,
Kūḍalacennasaṅgayyanalli Basavanu Prabhuvalladilla.
uḷidavarellā lāñchanadhārigaḷu.

Again:

The man who shaves his head and yet
Is ignorant of the path,
Is not a Jaṅgama;
The man who ties a liṅga, lest
They should not bury him when dead,
Is not a devotee. The devotee
Is one who acts in the conviction that
His body, mind and wealth are none of his,
And that the things of God are meant for God.
The Jaṅgama is one who, casting off
The traits of body, comes and stands
As one with Liṅga.
In Lord Kūḍala Cennasaṅga,
Save Basava and Prabhu, none else are
Such Jaṅgamas and devotees:
All wearers of the garb—the rest of them!

೧೮

ಮತ್ತಂ,

ಬಱಿಯ ಬೋಳುಗಳೆಲ್ಲಾ ಜಂಗಮವೆ?
ವೇಷಧಾರಿಗಳೆಲ್ಲಾ ಜಂಗಮವೆ?
ಜಡಜೀವಿಗಳೆಲ್ಲಾ ಜಂಗಮವೆ?
ನಿರ್ಗಮನವೆ ಜಂಗಮ. ನಿಸ್ಸೀಮ ಜಂಗಮ. ನಿಜೈಕ್ಯನೆ ಜಂಗಮ.
ಇಂಥ ಜಂಗಮದ ಸುಳುಹ ಕಾಣದೆ,
ಕೂಡಲಚೆನ್ನಸಂಗಮದೇವ
ತಾನೆ ಪ್ರಭುವೆಂಬ ಜಂಗಮವಾದ.

mattaṁ,

bar̤iya bōḷugaḷellā jaṅgamave?
vēṣadhārigaḷellā jaṅgamave?
jaḍajīvigaḷellā jaṅgamave?
nirgamanave jaṅgama. nissīma jaṅgama. nijaikyane jaṅgama.
intha jaṅgamada suḷuha kāṇade,
Kūḍalacennasaṅgamadēva
tāne Prabhuvemba jaṅgamavāda.

Again:

Are those who merely have a shaven head
All Jaṅgamas?
Are those who wear the proper garb
All Jaṅgamas?
Are those who go about with earthy souls
All Jaṅgamas?
He who is without motion is Jaṅgama;
He who is without limit is Jaṅgama;
He who is one with Reality
Is Jaṅgama . . . Because he did not see
The stirring of such Jaṅgama,
Lord Kūḍala Cennasaṅgama Himself
Took on the form of a Jaṅgama,
Prabhu by name.

೧೯

ಮತ್ತಂ,

ಧರೆಯ ಮೇಲೆ ಸುಳಿದಾಡುವ ಲಾಂಛನಧಾರಿಗಳೆಲ್ಲರೂ
ಹದಿನೆಂಟು ಜಾತಿಯ ಮನೆಯಲುಂಡು ಕೆಟ್ಟರಯ್ಯಾ !
ಗಿರಿಯಲ್ಲಿಪ್ಪ ಜಡೆಯ ಧಾರಿಗಳೆಲ್ಲರೂ
ಫಲವೃಕ್ಷಂಗಳನುಂಡು ಕೆಟ್ಟರಯ್ಯಾ !
ತಱಗೆಲೆಯ ಮೆಲಿದು ತಪಸ್ಸಿಪ್ಪವರೆಲ್ಲರೂ
ವಾಯುಭಕ್ಷಣವನುಂಡು ಕೆಟ್ಟರಯ್ಯಾ !
ಅಱಕೆಯ ಇಂದ್ರಿಯಂಗಳಂ ಕಟ್ಟಿ, ಕುಱುಹಿನ ರಾಜ್ಯಕ್ಕೆ ಬಂದು
ನರಕಕ್ಕಿಳಿವವರ ಹಿರಿಯರೆಂದೆನ್ನದೆನ್ನ ಮನವು.
ಇದು ಕಾರಣ ಕೂಡಲಚೆನ್ನಸಂಗಯ್ಯನೊಲ್ಲದಿದ್ದರೆ
ಅವರ ಬೆನ್ನಲ್ಲಿ ಹೋಗಲಿ. ನಾನು ಪ್ರಭುದೇವರ ಬಿಡೆನು.

mattaṁ,

dhareya mēle suḷidāḍuva lāñchanadhārigaḷellarū
hadineṇṭu jātiya maneyaluṇḍu keṭṭarayyā!
giriyallippa jaḍeyadhārigaḷellarū
phalavṛkṣaṅgaḷanuṇḍu keṭṭarayyā!
taṟageleya melidu tapassippavarellarū
vāyubhakṣaṇavanuṇḍu keṭṭarayyā!
aṟakeya indriyaṅgaḷaṁ kaṭṭi, kuṟuhina rājyakke bandu
narakikkiḷivavara hiriyarendennadenna manavu.
idu kāraṇa Kūḍalacennasaṅgayyanolladiddare
avara bennalli hōgali. nānu Prabhudēvara biḍenu.

Again:

All those who wear the emblems of the Faith
And fever on the surface of the earth
Have eaten in the houses of eighteen castes
And have been damned!
All who wear matted hair and live
On mountains, have lived on fruits and herbage, and
Been damned!
All who did penance, chewing dried-up leaves,
Have fed themselves on air and have
Been damned!
My mind declines to call them Elders
Who, binding fast their roving senses, have
Come to the realm of symbols and
Descended into hell. Therefore,
If Lord Kūḍala Cennasaṅga please him not,
Let him go after them : I will not leave
Prabhudēva!

ಆ ಪ್ರಸ್ತಾವದೊಳು ಸೊಡ್ಡಳಬಾಚರಸರ ವಚನ:

ā prastāvadoḷu Soḍḍaḷabācarasara vacana:

Soḍḍaḷa Bācarasa's vacana in this context:

೨೦

ವಿಪಿನದೊಳು ಮದಕರಿಯ ಹಿಂಡು ಆನಂದಲೀಲೆಯೊಳಾಡುತ್ತಿರಲು,
ಕೇಸರಿ ಬರಲು ಮದಕರಿಗಳೆಲ್ಲಾ ಕೆದಱಿ ಓಡುವ ತೆಱನಂತೆ,
ಸಾಕಾರ ಸೊಡ್ಡಳಾ,
ನಿಮ್ಮ ಶರಣ ಪ್ರಭುದೇವರು ಬರಲೊಡನೆ
ಹರೆದುದಯ್ಯಾ ನೆರೆದ ಶಿವಗಣಂಗಳು.

vipinadoḷu madakariya hiṇḍu ānandalīleyoḷāḍuttiralu,
kēsari baralu madakarigalellā kedaṟi ōḍuva teṟanante,
sākāra Soḍḍaḷā,
nimma śaraṇa Prabhudēvaru baraloḍane
haredudayyā nereda śivagaṇaṅgaḷu.

As when a herd of crazy elephants
Are prancing in a wood
In rapturous sport, a lion comes
And scatters all the crazy elephants
Into a run, so when Prabhu,
Soḍḍaḷa incarnate, Thy śaraṇa, came,
The assembled Śiva-śaraṇas dispersed!

ಇಂತು ಜಂಗಮವೆಲ್ಲಾ ಮುಳಿದು ಹೋಗಲು, ಬಸವರಾಜದೇವರು ಅತ್ಯಂತ ಭೀತರಾಗಿ ಪ್ರಭುದೇವರೊಡನೆ ಬಿನ್ನೈಸುವ ವಚನ:

intu jaṅgamavellā muḷidu hōgalu, Basavarājadēvaru atyanta bhītarāgi Prabhudēvaroḍane binnaisuva vacana:

The vacana which tells how, when all the Jaṅgamas thus left in anger, Lord Basavarāja observed to Prabhudēva in great fear:

೨೧

ಅಯ್ಯಾ,
ನಿಮ್ಮ ಶರಣರ ಸಂಗವೆನಗೆ ಪರಮಸುಖವಯ್ಯಾ.
ಅಯ್ಯಾ, ನಿಮ್ಮ ಶರಣರ ಅಗಲಿಕೆ ಎನ್ನ ಪ್ರಾಣವಿಯೋಗವಯ್ಯಾ.
ಶಿವ ಶಿವಾ ! ಸಂತವಿಡುವೆನು ಇನ್ನೆಂತಯ್ಯಾ ! ಎನಗೇನು ಗತಿ?
ಕೂಡಲಸಂಗಮದೇವಾ,
ನಿಮ್ಮ ಶರಣರ ಮುನಿಸು ಎನಗೆ ಬಿಡಿಸಬಾರದ ತೊಡಕು.

ayyā,
nimma śaraṇara saṅgavenage paramasukhavayyā.
ayyā, nimma śaraṇara agalike enna prāṇaviyōgavayyā.
śiva śivā! santaviḍuvenu innentayyā! enagēnu gati?
Kūḍalasaṅgamadēvā,
nimma śaraṇara munisu enage biḍisabārada toḍaku.

A great delight to me, O Lord,
Has been Thy śaraṇas' companionship.
The parting from Thy śaraṇas, O Lord,
Has been to me a parting from my life.
Good God! how then can I get comfort, Lord,
What destiny shall be mine?
O Kūḍala Saṅgama Lord,
Thy śaraṇas' anger is to me
A tangle that I cannot loose.

೨೨

ಮತ್ತಂ,
ಗುರು ಮುನಿದರೆ ಒಂದು ದಿನ ತಾಳುವೆ.
ಲಿಂಗ ಮುನಿದರೆ ಅರೆದಿನ ತಾಳುವೆ.
ಜಂಗಮ ಮುನಿದರೆ, ಕ್ಷಣಮಾತ್ರ ತಾಳಿದರೆ
ಎನ್ನ ಪ್ರಾಣದ ಹೋಕು ನೋಡಾ ಕೂಡಲಸಂಗಮದೇವಾ.

mattaṁ,
guru munidare ondu dina tāḷuve.
liṅga munidare aredina tāḷuve.
jaṅgama munidare, kṣaṇamātra tāḷidare
enna prāṇada hōku nōḍā Kūḍalasaṅgamadēvā.

Again:

Should Guru rage, I stand it for one day;
Should Liṅga rage, I stand it half a day;
Should Jaṅgama be angry and I
Should stand it for a moment, then
My breath departs, behold,
O Kūḍala Saṅgama Lord!

೨೩

ಮತ್ತಂ,

ಅರಸು ಮುನಿದರೆ ನಾಡೊಳಗಿರಬಾರದು.
ಪತಿ ಮುನಿದರೆ ಸತಿಗೆ ಇರಬಾರದು.
ಕೂಡಲಸಂಗಮದೇವಾ,
ಜಂಗಮ ಮುನಿದರೆ ನಾನೆಂತು ಬದುಕುವೆನು ?

mattaṁ,

arasu munidare nāḍoḷagirabāradu.
pati munidare satige irabāradu.
Kūḍalasaṅgamadēvā,
jaṅgama munidare nānentu badukuvenu?

Again:

Should a king rage, you must depart
His kingdom; should a husband rage,
The wife must leave.
O Kūḍala Saṅgama Lord,
How can I live
Should a Jaṅgama rage?

ಇದಕ್ಕೆ ಪ್ರಭುದೇವರು ಬಸವರಾಜದೇವರ ಭಯಮಂ ಸಂತೈಸಿ ಬೋಧಿಸುವ ವಚನ:

idakke Prabhudēvaru Basavarājadēvara bhayamaṁ santaisi bōdhisuva vacana:

The vacana which tells how Prabhudēva allayed Lord Basavarāja's fears and advised him:

೨೪

ಅಂಜಬೇಡ, ಅಳುಕಬೇಡ. ಹೋದವರಾರು ? ಇದ್ದವರಾರು ?
ಎಲೆ ಮರುಳೆ. ಒಂದು ಮುಖದಲ್ಲಿ ಇಪ್ಪ ದೇವನೊಬ್ಬನೆ;
ಹಲವು ಮುಖದಲ್ಲಿ ಇಪ್ಪ ದೇವನೊಬ್ಬನೆ.
ನಾಮ ಹಲವಲ್ಲದೆ ಕಾರ್ಯ ಒಂದೆ ನೋಡಾ.
ಮನದೊಳಗಣ ಘನವು ತನುವನಗಲುವುದೆ ?
ಗುಹೇಶ್ವರಲಿಂಗದಲ್ಲಿ ವಿಯೋಗಕ್ಕೆ ತೆಱಹಿಲ್ಲ ಕೇಳಾ
ಸಂಗನಬಸವಣ್ಣಾ.

anjabēḍa, aḷukabēḍa. hōdavarāru? iddavarāru?
ele maruḷe, ondu mukhadalli ippa dēvanobbane;
halavu mukhadalli ippa dēvanobbane.
nāma halavallade kārya onde nōḍā.
manadoḷagaṇa ghanavu tanuvanagaluvude?
Guhēśvaraliṅgadalli viyōgakke teṟahilla kēḷā
Saṅganabasavaṇṇā.

No need to worry or to fear:
What are these who have left,
And what is he who still remains?
You fool, the God who has one only face
And He with several ones
Is one and same: mark you,
Many the names, the function is but one.
Does the Glory in the heart depart
The body? Hear me:
In Guhēśvaraliṅga, there is no place
For parting, Saṅgana Basavaṇṇa!

೨೫

ಮತ್ತಂ,

ಮತಿಯೊಳಗೆ ದುರ್ಮತಿ ಹುಟ್ಟಿ
ಕಲಿ ಗಸನಿಗೊಳಗಾದ ಪರಿಯ ನೋಡಾ !
ಜ್ಞಾನವನೂ ಅಜ್ಞಾನ ನುಂಗಿದ ಬಳಿಕ,
ಭಾನು ಗ್ರಹಣಕ್ಕೊಳಗಾದಂತೆ ಇದ್ದಿತ್ತು.
ಕ್ಷೀರವುಳ್ಳ ಶಿಶು ತಾಯನಗಲಿ ಅಱಿಯದ ಮೋಹದಂತೆ ಇದ್ದಿತ್ತು.
ಹೇಳುವಲ್ಲಿ ಯುಕ್ತನು, ಕೇಳುವಲ್ಲಿ ಯುಕ್ತನು ಎಂಬುದು
ಅಜ್ಞಾನ ಭಾವಕ್ಕೆ ಬಂದಿತ್ತು.
ನೀರ ಮೇಲಣ ಲಿಪಿಯನೋದಬಲ್ಲವರುಂಟೆ,
ಸಾರಾಯ ವೇದ್ಯರಿಗಲ್ಲದೆ ?
ಕನ್ನಡಿಯೊಳಗೆ ನೋಡಲು ಭಿನ್ನವುಂಟೆ ಅಯ್ಯಾ ?
ತನ್ನ ಕಣ್ಣಿನಲ್ಲಿ ಕಾಣದಂತೆ ಇದ್ದಿತ್ತು ದರ್ಪಣದೊಳಗಣ ಬೆಳಗು.
ಬೆಳಗಿನೊಳಗಣ ಬೆಳಗು ಗುಹೇಶ್ವರನಿಪ್ಪೆಡೆಯ
ತಿಳಿದು ನೋಡಯ್ಯಾ ಸಂಗನಬಸವಣ್ಣಾ.

mattaṁ,

matiyoḷage durmati huṭṭi
kali gasaṇigoḷagāda pariya nōḍā!
jñānavanū ajñāna nuṅgida baḷika,
bhānu grahaṇakkoḷagādante iddittu.
kṣīravuḷḷa śiśu tāyanagali aṟiyada mōhadante iddittu.
hēḷuvalli yuktanu, kēḷuvalli yuktanu eṁbudu
ajñāna bhāvakke banditu.
nīra mēlaṇa lipiyanōdaballavaruṇṭe,
sārāya vēdyarigallade?
kannaḍiyoḷage nōḍalu bhinnavuṇṭe ayyā?
tanna kaṇṇinalli kāṇadante iddittu darpaṇadoḷagaṇa beḷagu.
beḷaginoḷagaṇa beḷagu Guhēśvaranippeḍeya
tiḷidu nōḍayyā Saṅganabasavaṇṇā.

Again:

Look at the way the Kali age
Has fallen a prey
To sorrow, when unreason grows in reason!
Once ignorance had swallowed knowledge,
'Twas like the sun being conquered by eclipse;
Like a babe's folly when it turns away,
In ignorance, from its mother full of milk.
The proud conceit
That one is good at bandying words
Has touched the level of ignorance.
Can one read what is writ on water, save
The learned in the Mystery?
Is it so different that you can
See in the looking-glass?
The light within the mirror was
Already in your eyes, unseen.
Do you explore and see,
O Saṅgana Basavaṇṇa,
The place which holds Guhēśvara—
The Light within all lights!

ಇದಕ್ಕೆ ಬಸವರಾಜದೇವರ ಪ್ರತ್ಯುತ್ತರ:

idakke Basavarājadēvara pratyuttara:

Lord Basavarāja's rejoinder thereto:

೨೬

ಅದ್ವೈತವ ಅಂತರಂಗದಲ್ಲಿ ಅಱಿದು
  ಹೊಱಗೆ ದಾಸೋಹವ ಮಾಡದಿರ್ದರೆಂತಯ್ಯಾ ?
  ಉಭಯದ ಸಂದೇಹದಲ್ಲಿ ನಿಜವಪ್ಪುದೆ ?
ನಿಮ್ಮ ಶರಣರ ಮನ ನೊಂದಲ್ಲಿ
  ನಾನು ಸೈರಿಸಿಕೊಂಬೆನೆಂತಯ್ಯಾ ?
ಕೂಡಲಸಂಗಮದೇವಾ,
  ಹಾವು ಸಾಯದೆ ಕೋಲು ನೋಯದಂತೆ ಮಾಡಾ ನಿಮ್ಮ ಧರ್ಮ.

advaitava antaraṅgadalli aṟidu,
  hoṟage dāsōhava māḍadirdarentayyā?
  ubhayada sandēhadalli nijavappude?
nimma śaraṇara mana nondalli
  nānu sairisikoṁbenentayyā?
Kūḍalasaṅgamadēvā,
  hāvu sāyade kōlu nōyadante māḍā nimma dharma.

How would it be, good Sir,
If, knowing the unity within,
I could not do my work without?
Can there be Truth where dwells the sense
Of Twain? How can I bear it, Sir,
To see the feelings of Thy śaraṇas hurt?
O Kūḍala Saṅgama Lord, I pray,
Do so contrive
That neither does the serpent die,
Nor the stick break!

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ:

idakke Prabhudēvara pratyuttara:

Prabhudēva's rejoinder thereto:

೧೭

ಒಂದಾದುದು ಎರಡಪ್ಪುದೆ ? ಎರಡಾದುದು ಒಂದಪ್ಪುದೆ ?
ಪರಿಣಾಮದ ವೇಳೆಯಲ್ಲಿ ಸಂದೇಹ ಹುಟ್ಟಲುಂಟೆ ?
ಬಂದ ಜಂಗಮದ ನಿಲವನಱಿಯದೆ,
ಹಿಂದನೆಣಿಸಿ ಹಲವನೆಣಿಸುವರೆ ?
ಈ ಒಂದು ನಿಲವಿಂಗೆ ಪರಿಣಾಮವ ಮಾಡಬಲ್ಲರೆ,
ನಿನ್ನ ಲಕ್ಷದ ಮೇಲೆ ತೊಂಬತ್ತಾಱುಸಾವಿರ ಜಂಗಮಕ್ಕೆ
ಪರಿಣಾಮವಹುದು ನೋಡಾ.
ಗುಹೇಶ್ವರನೆಂಬ ಲಿಂಗದ ನೆಲೆಯನಱಿಯದೆ
ಮರುಳಾದೆಯಲ್ಲಾ ಸಂಗನಬಸವಣ್ಣಾ !

ondādudu eraḍappude? eraḍādudu ondappude?
pariṇāmada vēḷeyalli sandēha huṭṭaluṇṭe?
banda jaṅgamada nilavanaṟiyade,
hindaneṇisi halavaneṇisuvare?
ī ondu nilaviṅge pariṇāmava māḍaballare,
ninna lakṣada mēle tombattāṟusāvira jaṅgamakke
pariṇāmavahudu nōḍā.
Guhēśvaranemba liṅgada neleyanaṟiyade
maruḷādeyallā Saṅganabasavaṇṇā!

Can what is one be two?
Can what is two be one?
Should at the consummation hour
A doubt arise?
Would you, not valuing the full worth
Of the Jaṅgama that has come,
Think of the past and let your mind drift on
This way and that?
If you should bring repose
To this one worthy soul, your lakh
And six-and-ninety thousand Jaṅgamas,
Mark you, shall find their peace.
You've been so foolish, blinded to
The depth of Liṅga, Guhēśvara named,
Alas, O Saṅgana Basavaṇṇa!

ಇದಕ್ಕೆ ಬಸವರಾಜದೇವರ ಪ್ರತ್ಯುತ್ತರ:

idakke Basavarājadēvara pratyuttara:

Lord Basavarāja's rejoinder thereto:

೨೮

ದೇವದೇವ, ಮಹಾಪ್ರಸಾದ,
ನಿಮ್ಮಡಿಗಳೆಂದಂತೆಯಲ್ಲದೆ ಎನಗೆ ಬೇಱೆ ಸ್ವತಂತ್ರವುಂಟೆ ?
ಸಂದು ಸಂಶಯವುಂಟೆ ?
ದರ್ಪಣದೊಳಗಣ ಪ್ರತಿಬಿಂಬವ ನೋಡುವ ಮುಖಕ್ಕೆ ಭಿನ್ನಭಾವವುಂಟೆ ?
ಚರಿಸಿ ಬಪ್ಪ ಅನಂತ ಸುಳುಹಿನೊಳಗೆ ನೀನೊಬ್ಬನೆ.
ನಿನ್ನೊಳಗೆ ಅನಂತ ಸುಳುಹು ಅಡಗಿದವು.
ನಿಮಗೆ ಮಾಡಿದ ಸಯಿದಾನವ ನಿಮಗೆ ನೀಡುವೆನು.
ಅವಧರಿಸಬೇಕಯ್ಯಾ ಕೂಡಲಸಂಗಮದೇವಾ.

dēva dēva, mahāprasāda.
nimmaḍigaḷendanteyallade enage bēṟe svatantravuṇṭe?
sandu saṁśayavuṇṭe?
darpaṇadoḷagaṇa pratibiṁbava nōḍuva mukhakke bhinnabhāvavuṇṭe?
carisi bappa ananta suḷuhinoḷage nīnobbane.
ninnoḷage ananta suḷuhu aḍagidavu.
nimage māḍida sayidānava nimage nīḍuvenu.
avadharisabēkayyā Kūḍalasaṅgamadēvā.

Lord, Lord, Exalted Grace!
What freedom can I have apart, except
To speak as Thou dost condescend to speak?
Can there be hesitation or doubt?
Pray, does a face
That gazes at its image in the glass,
Know any difference?
Thou only art within
The movements infinite of those
Who, moving, come.
In Thee the infinite movements melt.
I serve to Thee
The courses made for Thee.
May'st thou accept them, Lord
Kūḍala Saṅgama!

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ:

idakke Prabhudēvara pratyuttara:

Prabhudēva's rejoinder thereto:

೨೯

ತನಗುಳ್ಳ ನಿಧಾನ ತನಗಿಲ್ಲದಂತೆ
ಬಂಧುಗಳೆಲ್ಲರ ನುಂಗಿ ಅಂಬುಧಿ ಬತ್ತಿತ್ತು;
ಅದ್ಭುತ ಸತ್ತಿತ್ತು; ರಣರಂಗವತ್ತಿತ್ತು.
ಇರುಳು ಮಾಣಿಕವ ನುಂಗಿ ಮರಣವಾದ ಬಳಿಕ,
ಅಮೃತದ ಪುತ್ಥಳಿಯ ಹಾಲ ಕುಡಿಯ ಕರೆದಡೆ,
ಗುಹೇಶ್ವರಲಿಂಗಕ್ಕೆ ಊಟವೆಂಬುದಿಲ್ಲ ನೋಡಾ ಸಂಗನಬಸವಣ್ಣಾ.

tanagulla nidhāna tanagilladante
bandhugaḷellara nuṅgi aṁbudhi battittu;
adbhuta sattittu; raṇaraṅgavattittu.
iruḷu māṇikava nuṅgi maraṇavāda baḷika,
amṛtada putthaḷiya hāla kuḍiya karedaḍe,
Guhēśvaraliṅgakke ūṭaveṁbudilla nōḍā Saṅganabasavaṇṇā.

The sea dried up,
Devouring all its brethren, as if
The treasure which it had, it had no more.
The marvel died; the field of battle cried.
After the night had swallowed the ruby up
And died, when you invite
A nectar puppet to drink milk,
Guhēśvaraliṅga knows no food:
Mark that, Saṅgana Basavaṇṇa!

೩೦

ಮತ್ತಂ,

ಕಾಯದಲ್ಲಿ ಕಾಯ ಸವೆದು,
ಪ್ರಾಣದಲ್ಲಿ ಪ್ರಾಣ ಸವೆದು ನಿಶ್ಚಿಂತವಾದ ಬಳಿಕ,
ಹಸಿವು ತೃಷೆಗಳೆಂಬವು ಅಳಿದು ಹೋದವು ಕೇಳಾ.
ಉಂಡೆನೆಂಬ ಬಯಕೆಯು, ಒಲ್ಲೆನೆಂಬ ವೈರಾಗ್ಯವು ಇಲ್ಲ.
ಇದು ಸ್ವಭಾವ ತೃಪ್ತಿಯೊಳಡಗಿತ್ತು.
ಇದು ಕಾರಣ ನಮ್ಮ ಗುಹೇಶ್ವರಲಿಂಗಕ್ಕೆ ಆರೋಗಣೆ ಇಲ್ಲ ಕಾಣಾ
ಸಂಗನಬಸವಣ್ಣಾ.

mattaṁ,
kāyadalli kāya savedu,
Prāṇadalli prāṇa savedu niścintavāda baḷika,
hasivu tṛṣegaḷeṁbavu aḷidu hōdavu kēḷā.
uṇḍeneṁba bayakeyu, olleneṁba vairāgyavu illa.
idu svabhāva tṛptiyoḷaḍagittu.
idu kāraṇa namma Guhēśvaraliṅgakke ārōgaṇe illa kāṇā
Saṅganabasavaṇṇā.

Again:

When body has been spent
Out of the body, and breath from breath,
And you at last are free from care,
The thirst and hunger perish—see?—and go.
The hankering and disgust for eating cease:
The satisfaction lies within yourself.
Therefore, our Guhēśvaraliṅga knows no food:
Mark that, Saṅgana Basavaṇṇa!

ಇದಕ್ಕೆ ಚಿಕ್ಕದಣ್ಣಾಯಕರ ವಚನ:

idakke Cikkadaṇṇāyakara vacana:

Cennabasavaṇṇa's vacana thereon:

೩೧

ಒಲ್ಲೆನೆಂದರೆ ಭಂಗ; ಒಲುವೆನೆಂದರೆ ಅದೆ ಭಂಗ.
ಒಲ್ಲೆನೊಲುವೆನೆಂಬೆರಡನೂ ಅಳಿದು ತೃಪ್ತನಾದೆನೆಂದಡೆ ಅದೆ ಕೊರತೆ.
ಕೂಡಲಚೆನ್ನಸಂಗಯ್ಯಾ ಭಕ್ತನಾಧೀನವಾಗಿ
ಇಲ್ಲಿಗೆ ನಡೆದು ಬಂದ ಬಳಿಕ ಉಪಚಾರವುಂಟೆ ಅಯ್ಯಾ ?

ollenendare bhaṅga, oluvenendare ade bhaṅga.
ollenoluveneṁberaḍanū aḷidu tṛptanādenendaḍe ade koṟate.
Kūḍalacennasaṅgayya bhaktanādhīnavāgi
illige naḍedu banda baḷika upacāravuṇṭe ayyā?

Alike to want and not to want
Implies a lack; if you destroy
The liking and not liking both at once,
And claim to be content, that too
Is a defect. When Lord Kūḍala Cennasaṅgama
Has hither come, at mercy of his devotee,
Does he need, Sir, formality?

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ;

idakke Prabhudēvara pratyuttara:

Prabhudēva's rejoinder thereto:

೩೨

ಭಕ್ತನಾಧೀನವಾಗಿ ಭಕ್ತಿಯ ಬೇಡ ಬಂದವನಲ್ಲ.
ಮುಕ್ತಿಯಾಧೀನವಾಗಿ ಮುಕ್ತಿಯ ಬೇಡ ಬಂದವನಲ್ಲ.
ಅಶನಾತುರನಾಗಿ ವಿಷಯುವ ಬಯಸಿ ಬಂದವನಲ್ಲ.
ಗುಹೇಶ್ವರನ ಶರಣ ಸಂಗನಬಸವಣ್ಣ ಮಾಡುವ ಭಕ್ತನಲ್ಲಾಗಿ,
ನಾನು ಬೇಡುವ ಜಂಗಮವಲ್ಲ ಕಾಣಾ ಚೆನ್ನಬಸವಣ್ಣಾ !

bhaktanādhīnavāgi bhaktiya bēḍa bandavanalla.
muktiyādhīnavāgi muktiya bēḍa bandavanalla.
aśanāturanāgi viṣayava bayasi bandavanalla.
Guhēśvarana śaraṇa Saṅganabasavaṇṇa māḍuva bhaktanallāgi,
nānu bēḍuva jaṅgamavalla kāṇā Cennabasavaṇṇā!

Being independent of a devotee
I have not come to beg
For piety;
Being independent of deliverance,
I have not come to ask for it.
Not ravening for food have I come
Nor hankering for joys of sense.
As Saṅgana Basavaṇṇa,
Guhēśvara's śaraṇa, is not
The kind of devotee to make ado,
I'm not the kind of Jaṅgama to beg:
Mark that, Cennabasavaṇṇa!

ಇದಕ್ಕೆ ಬಸವರಾಜದೇವರ ಪ್ರತ್ಯುತ್ತರ:

idakke Basavarājadēvara pratyuttara:

Lord Basavarāja's rejoinder thereto:

೩೩

ಆನು ನಿಮ್ಮಲ್ಲಿ ಪ್ರಪಂಚಿನ ಉಪಚಾರವನಱಿಯೆನಯ್ಯಾ.
ನಿಮ್ಮ ಪಾದದಲ್ಲಿ ತದ್‌ಗತನಾಗಿಪ್ಪೆ.
ಭಕ್ತಿ ಯುಕ್ತಿ ವಿರಕ್ತಿಯ ಉಪಚಾರವ ನಾನಱಿಯೆನು.
ಕೂಡಲಸಂಗಮದೇವಾ,
ಭಿನ್ನವಿಲ್ಲದ ಭೃತ್ಯಾಚಾರಕ್ಕೆ ಬಂದ ಪದಾರ್ಥವ ನೀನೆಂದೆ ಚಿತ್ತೈಸಯ್ಯಾ.

ānu nimmalli prapañcina upacāravanaṟiyenayyā.
nimma pādadalli tadgatanāgippe.
bhakti yukti viraktiya upacārava nānaṟiyenu.
Kūḍalasaṅgamadēvā,
bhinnavillada bhṛtyācārakke banda padārthava nīnende cittaisayyā.

I do not know, O Lord,
To stand on social forms
Towards you: I am a humble part of you.
I know not of formalities—
Of piety and its ways, detachment too.
O Kūḍala Saṅgama Lord,
Pray now, accept the food
Which comes in service that knows not
Who is that gives and who that takes!

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ:

idakke Prabhudēvara pratyuttara:

Prabhudēva's rejoinder thereto:

೩೪

ಕಾಯವೆಂಬ ಕಲ್ಪಿತವ ಕಳೆದು, ಪ್ರಾಣವೆಂಬ ಸೂತಕವ ಹಱಿದು,
ನಿಜಭಕ್ತಿ ಸಾಧ್ಯವಾದಲ್ಲದೆ ಲಿಂಗಪರಿಣಾಮ ವೇಧಿಸಬಾರದು.
ಆನು ಮಾಡಿದೆ, ನೀವು ಕೈಕೊಳ್ಳಿ ಎಂದರೆ ಅದೇ ಅಜ್ಞಾನ.
ನಮ್ಮ ಗುಹೇಶ್ವರಲಿಂಗಕ್ಕೆ ಕುಱುಹಳಿದು ನಿಜ ಉಳಿದವರಾದಲ್ಲದೆ
ಪದಾರ್ಥವ ನೀಡಬಾರದು ಕಾಣಾ ಸಂಗನಬಸವಣ್ಣಾ.

kāyavemba kalpitava kaḷedu, prāṇavemba sūtakava haṟidu,
nijabhakti sādhyavādallade liṅgapariṇāma vēdhisabāradu,
ānu māḍide, nīvu kaikoḷḷi endare adē ajñāna.
namma Guhēśvaraliṅgakke kuṟuhaḷidu nija uḷidavarādallade
padārthava nīḍabāradu kāṇā Saṅganabasavaṇṇā.

Unless you raze
The body's unreality, tear off
The taint of breath, so that
True piety is made possible,

The peace that comes from Liṅga never will
Possess you; to say 'I give, do you receive'
Is merest ignorance;
Save those whose symbol is destroyed,
Their truth alone being left,
Nobody could serve
Our Guhēśvaraliṅga: mark that,
Saṅgana Basavaṇṇa!

ಇದಕ್ಕೆ ಬಸವರಾಜದೇವರ ಬಿನ್ನಹ:

idakke Basavarājadēvara binnaha:

Lord Basavarāja's request thereon:

೩೫

ಮಱಹಿಂದಲಾದ ಕುಱುಹಿನ ಕಾಯವ ಧರಿಸಿಕೊಂಡು ಬಂದರೆ,
  ಅದು ಎನಗೆ ಕುಂದಲ್ಲ ನೋಡು ದೇವಾ.
ನಿಮ್ಮ ಲೀಲೆಯಿಂದ ಹಿಂದಾಱು ಜನ್ಮದಲ್ಲಿ ಬಂದರೆ,
  ಅದ ನಿಮ್ಮ ಜಂಗಮಭಕ್ತಿಯಿಂದ ಕಳೆದೆ ನೋಡಯ್ಯಾ.
ಕಾಯವಿಲ್ಲದ ಜಂಗಮಕ್ಕೆ ಪ್ರಾಣವಿಲ್ಲದ ಮಾಟ.
  ಒಲ್ಲೆನೆಂಬುದಕ್ಕೆ ಕಾರಣವೇನು ಹೇಳಾ ಕೂಡಲಸಂಗಮದೇವಾ ?

maṟahindalāda kuṟuhina kāyava dharisikoṇḍu bandare,
  adu enage kundalla nōḍu dēvā.
nimma līleyinda hindāṟu janmadalli bandare,
  ada nimma jaṅgamabhaktiyinda kaḷede nōḍayyā.
kāyavillada jaṅgamakke prāṇavillada māṭa.
  ollenembudakke kāraṇavēnu hēḷā Kūḍalasaṅgamadēvā?

If I have come
Wearing the body which signifies
My past forgetfulness—look, Lord,
It is no blot on me.
If I have, through Thy sport, been born
Six times—mark, Sir—I've spent them in
Devotion to Thy Jaṅgama:
A lifeless service for
A disembodied Jaṅgama! . . . Tell me,
O Kūḍala Saṅgama Lord,
What reason can there be for saying No?

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ:

idakke Prabhudēvara pratyuttara:

Prabhudēva's rejoinder thereto:

೩೬

ತಾನಿಟ್ಟ ಬೇತಾಳ ತನ್ನ ತಿಂದಿತೆಂಬಂತೆ,
ನಿನ್ನ ಭವಾಳಿಯನೆತ್ತುವನ್ನಕ್ಕರ
ಎನ್ನ ಮಱವೆ ಎನಗೆ ಎಚ್ಚಱಿಕೆಯಾಯಿತ್ತು.
ಎನ್ನ ಪೂರ್ವ ನಿರ್ವಾಹವಾಯಿತ್ತು.
ನಿಮ್ಮ ವರ್ಮ ತಿಳಿಯದೆನಗೆ. ಅದೆಂತೆಂದಡೆ:
ಹಿಂದೆ ನೀನೇನಾಗಿದ್ದೆಯೆಂಬುದನಱಿಯೆನಾಗಿ,
ಇಂದು ನಿಮ್ಮ ಮನೆಯಲಾರೋಗಣೆಯಾಗದು ಕಾಣಾ.
ಸಂಗನಬಸವಣ್ಣಾ ಗುಹೇಶ್ವರಂಗೆ.

tāniṭṭa bētāḷa tanna tinditeṁbante,
ninna bhavāḷiyanettuvannakkara
enna maṟave enage eccaṟikeyāyittu.
enna pūrva nirvāhavāyittu.
nimma varma tiḷiyadenage. adentendaḍe:
hinde nīnēnāgiddeyeṁbudanaṟiyenāgi,
indu nimma maneyalārōgaṇeyāgadu kāṇā,
Saṅganabasavaṇṇā Guhēśvaraṅge.

Even as a goblin one has kept
Gobbles his keeper, so, when
Your chain of births came up,
There was a wakening to my ignorance;
My past had to be known; and yet,
Your secret is to me a mystery.
For, as I do not know
Your former state, today there cannot be
Food in your house for Guhēśvara:
Mark that, Saṅgana Basavaṇṇa!

ಇದಕ್ಕೆ ಬಸವರಾಜದೇವರ ಪ್ರತ್ಯುತ್ತರ:

idakke Basavarājadēvara pratyuttara:

Lord Basavarāja's rejoinder thereto:

೩೭

ಅಯ್ಯಾ, ಏಳೇಳು ಭವಾಂತರದಲ್ಲಿ ಶಿವಭಕ್ತನಾಗಿ ಬಾರದಿದ್ದರೆ
    ನಿಮ್ಮಾಣೆ, ನಿಮ್ಮ ಪ್ರಮಥರಾಣೆ.
ನಿಮ್ಮ ಪ್ರಸಾದಕ್ಕಲ್ಲದೆ ಬಾಯ್ದೆಱೆಯೆನಯ್ಯಾ.
ಅದೆಂತೆಂದಡೆ:
ಪ್ರಥಮ ಭವಾಂತರದಲ್ಲಿ
    ಶಿಲಾದನೆಂಬ ಗಣೇಶ್ವರನ ಮಾಡಿ ಹೆಸರಿಟ್ಟು ಕರೆದು,
    ನಿಮ್ಮ ಭೃತ್ಯನ ಮಾಡಿಕೊಂಡಿದ್ದಿರಯ್ಯಾ.
ಎರಡನೆಯ ಭವಾಂತರದಲ್ಲಿ
    ಸ್ಕಂದನೆಂಬ ಗಣೇಶ್ವರನ ಮಾಡಿ ಹೆಸರಿಟ್ಟು ಕರೆದು,
    ನಿಮ್ಮ ಕಾರುಣ್ಯವ ಮಾಡಿಕೊಂಡಿದ್ದಿರಯ್ಯಾ.
ಮೂಱನೆಯ ಭವಾಂತರದಲ್ಲಿ
    ನೀಲಲೋಹಿತನೆಂಬ ಗಣೇಶ್ವರನ ಮಾಡಿ ಹೆಸರಿಟ್ಟು ಕರೆದು,
    ನಿಮ್ಮ ಲೀಲಾವಿನೋದದಿಂದಿರಿಸಿ ಕೊಂಡಿದ್ದಿರಯ್ಯಾ.
ನಾಲ್ಕನೆಯ ಭವಾಂತರದಲ್ಲಿ
    ಮನೋಹರನೆಂಬ ಗಣೇಶ್ವರನ ಮಾಡಿ ಹೆಸರಿಟ್ಟು ಕರೆದು,
    ನಿಮ್ಮ ಮನಃಪ್ರೇರಕನಾಗಲೆಂದಿರಿಸಿಕೊಂಡಿದ್ದಿರಯ್ಯಾ.
ಐದನೆಯ ಭವಾಂತರದಲ್ಲಿ
    ಕಾಲಲೋಚನನೆಂಬ ಗಣೇಶ್ವರನ ಮಾಡಿ ಹೆಸರಿಟ್ಟು ಕರೆದು,
    ಸರ್ವಕಾಲ ಸಂಹಾರವ ಮಾಡಿಸುತ್ತಿದ್ದಿರಯ್ಯಾ.
ಆಱನೆಯ ಭವಾಂತರದಲ್ಲಿ
    ವೃಷಭನೆಂಬ ಗಣೇಶ್ವರನ ಮಾಡಿ ಹೆಸರಿಟ್ಟು ಕರೆದು,
    ನಿಮಗೇಱಲು ವಾಹನವಾಗಲೆಂದಿರಿಸಿಕೊಂಡಿದ್ದಿರಯ್ಯಾ.
ಏಳನೆಯ ಭವಾಂತರದಲ್ಲಿ
    ಬಸವದಣ್ಣಾಯಕರೆಂಬ ಗಣೇಶ್ವರನ ಮಾಡಿ ಹೆಸರಿಟ್ಟು ಕರೆದು,
    ನಿಮ್ಮ ಒಕ್ಕುದ ಮಿಕ್ಕುದಕ್ಕೆ ಯೋಗ್ಯನಾಗಲೆಂದಿರಿಸಿಕೊಂಡಿದ್ದಿರಯ್ಯಾ.
ಇದು ಕಾರಣ ಕೂಡಲಸಂಗಮದೇವಾ,
    ನೀವು ಬರಿಸಿದ ಭವಾಂತರದಲ್ಲಿ ನಾನು ಬರುತ್ತಿರ್ದೆನಯ್ಯಾ.

ayyā, ēḷēḷu bhavāntaradalli śivabhaktanāgi bāradiddare
    nimmāṇe, nimma pramatharāṇe.
*nimma prasādakkallade bāyde*ṟ*eyenayyā.*

adentendaḍe:

prathama bhavāntaradalli
śilādaneṁba Gaṇēśvarana māḍi hesariṭṭu karedu,
nimma bhṛtyana māḍikoṇḍiddirayyā.
eraḍaneya bhavāntaradalli
skandaneṁba Gaṇēśvarana māḍi hesariṭṭu karedu,
nimma kāruṇyava māḍikoṇḍiddirayyā.
mūṟaneya bhavāntaradalli
nīlalōhitaneṁba Gaṇēśvarana māḍi hesariṭṭu karedu,
nimma līlāvinōdadindirisi koṇḍiddirayyā.
nālkaneya bhavāntaradalli
manōharaneṁba Gaṇēśvarana māḍi hesariṭṭu karedu,
nimma manaḥprērakanāgalendirisikoṇḍiddirayyā.
aidaneya bhavāntaradalli
kālalōcananeṁba Gaṇēśvarana māḍi hesariṭṭu karedu,
sarvakāla saṁhārava māḍisuttiddirayyā.
āṟaneya bhavāntaradalli
Vṛṣabhaneṁba Gaṇēśvarana māḍi hesariṭṭu karedu,
nimagēṟalu vāhanavāgalendirisikoṇḍiddirayyā.
ēḷaneya bhavāntaradalli
Basavadaṇṇāyakareṁba Gaṇēśvarana māḍi hesariṭṭu karedu,
nimma okkuda mikkudakke yōgyanāgalendirisikoṇḍiddirayyā
idu kāraṇa Kūḍalasaṅgamadēvā,
nīvu barisida bhavāntaradalli nānu baruttirdenayyā.

Thy curse on me, Lord, Thy Ancients' curse,
If I came not in seven births
As Śiva's devotee.
Never did I open my mouth
But for Thy Grace.
This is the way it was:
In my first birth, Thou madest me
Gaṇēśvara, Śilāda by name,
Calling me by my name,
To keep me as Thy servant-man.
In my second birth, Thou madest me
Gaṇēśvara, Skanda by name,
Calling me by my name,
To harbour me in Thy grace.

In my third birth, Thou madest me
Gaṇēśvara, Nīlalōhita by name,
Calling me by my name,
To be a plaything of Thy mirth.
In my fourth birth, thou madest me
Gaṇēśvara, Manōhara by name,
Calling me by my name,
As prompter of the heart.
In my fifth birth, Thou madest me
Gaṇēśvara, Kālalōcana by name,
Calling me by my name,
To make me cancel all of Time.
In my sixth birth, Thou madest me
Gaṇēśvara, Vṛṣabha by name,
Calling me by my name,
As carrier for Thee to ride.
In my seventh birth, Thou madest me
Gaṇēśvara, Basava Daṇṇāyaka by name,
Calling me by my name,
To make me fit
For what is offered, what left over.
Therefore I have come to birth
As often as Thou mad'st me come,
Lord Kūḍala Saṅgama!

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ:

idakke Prabhudēvara pratyuttara:

Prabhudēva's rejoinder thereto:

೩೮

ಕೆಳಗೇಳು ಲೋಕಂಗಳಿಲ್ಲದ ಮುನ್ನ,
ಮೇಲೇಳು ಲೋಕಂಗಳಿಲ್ಲದ ಮುನ್ನ,
ಸಮಸ್ತ ಬ್ರಹ್ಮಾಂಡಂಗಳಿಲ್ಲದ ಮುನ್ನ,
ಅಲ್ಲಿಂದತ್ತತ್ತ ಬಸವಣ್ಣಾ, ನೀನು ಲಿಂಗಭಕ್ತ, ಜಂಗಮಪ್ರಾಣಿ.
ಶಶಿಧರನ ಶರಣಂಗೆ ವೃಷಧರ ಸ್ವಾಯತವಾಗಿ,
ನಮ್ಮ ಗುಹೇಶ್ವರಲಿಂಗಕ್ಕೆ ಬಸವಣ್ಣನೇ ಭಕ್ತನೆಂದು ಇಂದಱಿದೆನಯ್ಯಾ.

keḷagēḷu lōkaṅgaḷillada munna,
mēlēḷu lōkaṅgaḷillada munna,
samasta bramhāṇḍaṅgaḷillada munna,
allindattatta Basavaṇṇā, nīnu liṅgabhakta, jaṅgamaprāṇi.
śaśidharana śaraṇaṅge vṛṣadhara svāyatavāgi,
namma Guhēśvaraliṅgakke Basavaṇṇanē bhaktanendu
indaṟidenayyā.

Before the seven underworlds were,
Before the seven upper worlds,
Before all cosmic eggs were there,
And farther back beyond, Basavaṇṇa,
You were a Liṅga devotee,
And one whose very life was Jaṅgama.
As the Bull-rider was absorbed
In the Moon-holder's Śaraṇa, I came to know
Basavaṇṇa was a devotee
Of our Guhēśvaraliṅga!

ಇದಕ್ಕೆ ಬಸವರಾಜದೇವರ ಪ್ರತ್ಯುತ್ತರ:

idakke Basavarājadēvara pratyuttara:

Lord Basavarāja's rejoinder thereto:

೩೯

ಅಯ್ಯಾ, ನೀವೆನ್ನ ಬಲ್ಲಿರಲ್ಲದೆ ನಾ ನಿಮ್ಮ ಬಲ್ಲೆನೆ ?
ನಿಮ್ಮ ನಿಲವ ನೋಡಿ ಮಾಡಿಹೆನೆಂದರೆ,
ನಿಮ್ಮ ಘನವೆನ್ನ ಮನಕ್ಕೆ ಸಾಧ್ಯವಾಗದ ಕಾರಣ,
ಅಂತಿಂತೆಂದುಪಮಿಸಲಮ್ಮದೆ ಇದ್ದೆ ನೋಡಯ್ಯಾ.
ನಿತ್ಯತೃಪ್ತ ಮಹಿಮಾ, ನಿಮಗೆಂದಳವಡಿಸಿದ ಪದಾರ್ಥವ
ಸುಚಿತ್ತದಿಂದ ಅವಧರಿಸಿ ಸಲಹಯ್ಯಾ ಪ್ರಭುವೆ ಕೂಡಲಸಂಗಮದೇವಾ.

ayyā, ṅīvenna ballirallade nā nimma ballene?
nimma nilava nōḍi māḍihenendare,
nimma ghanavenna manakke sādhyavāgada kāraṇa,
antintendupamisalammade idde nōḍayyā.
nityatṛptamahimā, nimagendaḷavaḍisida padārthava
sucittadinda avadharisi salahayyā Prabhuve Kūḍala-
saṅgamadēvā.

You know me, Lord,
But do I know you too?

Thinking to treat you as your height deserves,
And failing in my mind to scan
Your greatness, I refrained
From saying you are thus or thus.
O glory ever satisfied,
Do you with a good grace accept
The meal prepared for you
And bless me, O Prabhu—
O Kūḍala Saṅgama Lord!

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ:
idakke Prabhudēvara pratyuttara:
Prabhudēva's rejoindeı thereto:

೪೦

ಪೌರ್ಣಮಿ ಬಪ್ಪನ್ನಕ್ಕ ಬಾಯಿ ಬಂಧನದಲ್ಲಿದ್ದ
ಚಕೋರನಂತೆ ಇದ್ದೆನಯ್ಯಾ.
ಉಣಲಾಗದೆಂಬ ಶಾಸ್ತ್ರವಿಡಿದು ಇದ್ದವನಲ್ಲ.
ಉಣಲಾಗದೆಂಬ ಶಾಸ್ತ್ರವುಂಟೆ ಲಿಂಗವಂತಂಗೆ ?
ಅಹೋರಾತ್ರಿ ಅಷ್ಟ ಭೋಗಂಗಳ ಲಿಂಗಕ್ಕೆ ಕೊಟ್ಟು ಕೊಳಬೇಕು.
ಮಾಡುವ ನೀಡುವ ನಿಜಭಕ್ತರಿಲ್ಲದ ಕಾರಣ ಬಾಯ್ದೆಱೆಯದಿರ್ದೆನು.
ಮಾಡಿಹೆ, ನೀಡಿಹೆನೆಂಬ ಶಬ್ದಕ್ಕೆ
ಸಂತೋಷದಾಪ್ಯಾಯನ ಹಿರಿದಾಯಿತ್ತು.
ನೀಡೈ ಸಂಗನಬಸವಣ್ಣಾ ಗುಹೇಶ್ವರಂಗೆ.

pourṇami bappannakka bāyi bandhanadallidda
cakōranante iddenayyā.
uṇalāgademba śāstraviḍidu iddavanalla.
uṇalāgademba śāstravuṇṭe liṅgavantaṅge?
ahōrātri aṣṭa bhōgaṅgaḷa liṅgakke koṭṭu koḷabēku.
māḍuva nīḍuva nijabhaktarillada kāraṇa bāydeṟeyadirdenu.
māḍihe, nīḍihenemba śabdakke
santōṣadāpyāyana hiridāyittu.
nīḍai Saṅganabasavaṇṇā Guhēśvaraṅge.

I was like a cakora whose tongue is tied
Until the full moon comes;
I am not one to follow a code
Prescribing that I should not eat;

For one who follows Liṅga is there a code
Prescribing that he should not eat?
Night and day one should accept
The eightfold joys of sense,
First having offered them to Liṅga.
Because there was no real devotee
To serve me piously, I refrained
From opening my mouth; but now
My happy hunger has increased
At hearing 'I am only to serve.'
Do serve Guhēśvara,
O Saṅgana Basavaṇṇa!

೪೧

ಮತ್ತಂ,
ಸಮತೆಯೆಂಬ ಕಂಥೆಯ ತೊಟ್ಟು, ಸುಬುದ್ಧಿಯೆಂಬ ಟೊಪ್ಪರವನಿಕ್ಕಿ,
ವಿಷಯವೆಂಬ ಹಾವುಗೆಯ ಮೆಟ್ಟಿ, ತಮಂಧವೆಂಬ ಕುಣಿಯ ಬೀಳದೆ,
ವೈರಾಗ್ಯವೆಂಬ ಕೊರಡನೆಡಹದೆ, ಮದವೆಂಬ ಚೇಳ ಮೆಟ್ಟದೆ,
ಗುಹೇಶ್ವರನ ಶರಣ ಬಂದೆನು
ಭಕ್ತಿ ಭಿಕ್ಷೆಯನಿಕ್ಕೈ ಸಂಗನಬಸವಣ್ಣಾ.

mattaṁ,
samateyeṁba kantheya toṭṭu, subuddhiyeṁba ṭopparavanikki,
viṣayaveṁba hāvugeya meṭṭi, tamandhaveṁba kuṇiyabīḷade,
vairāgyaveṁba koraḍaneḍahade, madaveṁba cēḷa meṭṭade,
Guhēśvarana śaraṇa bandenu
bhakti bhikṣeyanikkai Saṅganabasavaṇṇā.

Again:
Wearing the robe of equanimity,
Donning right reason's coif
And putting on the clogs of sense;
Not falling into the pit of ignorance,
Not tripping o'er renunciation's log,
Unstung by scorpion pride,
I've come as Guhēśvara's śaraṇa:
Give me the alms of piety,
O Saṅgana Basavaṇṇa!

೪೨

ಮತ್ತಂ,

ಕಡೆಯಿಲ್ಲದ ದೇಶವ ತಿರುಗಿದೆನು.
ಹವಣಿಲ್ಲದ ಕಂಥೆಯ ತೊಟ್ಟೆನು
  ಹಸಿವಿಲ್ಲದ ಕಪ್ಪರವ ಹಿಡಿದು ಭಕ್ತಿಭಿಕ್ಷವ ಬೇಡ ಬಂದೆ.
ಗುಹೇಶ್ವರ ಹಸಿದನು ಉಣಲಿಕ್ಕೇಳಾ ಸಂಗನಬಸವಣ್ಣಾ.

mattaṁ,

kaḍeyillada dēśava tirugidenu.
havaṇillada kantheya toṭṭenu.
hasivillada kapparava hiḍidu bhaktibhikṣava bēḍa bande.
Guhēśvara hasidanu uṇalikkēḷā Saṅganabasavaṇṇā.

Again:

I roamed o'er countries without end;
I wore an immeasurable garb;
Holding my bowl, devoid of appetite,
I've come to beg for alms of piety.
Guhēśvara is hungry: ask me to eat,
Saṅgana Basavaṇṇa!

ಇದಕ್ಕೆ ಬಸವರಾಜದೇವರ ಪ್ರತ್ಯುತ್ತರ:

idakke Basavarājadēvara pratyuttara:

Lord Basavarāja's rejoinder thereto:

೪೩

ಕಾಯದ ಕುಱುಹುವಿಡಿದು ಬಂದೆನೆಂಬ
  ಆ ಭಾವದ ಇರವೇತಕ್ಕೆ ನಿಮಗೆ ?
ಅಂಬರದ ಚಾಪ ಮುಗಿಲೊಳಗೆ ಹೊಂದಿತೆ ?
  ಬೇಱೊಂದಱಲ್ಲಿ ನಿಂದಿತೇ ಅದಱಂಗದ ಛಾಯೆ ?
ಪ್ರಭುದೇವರ ನಿಂದ ಸುಳುಹು
  ಕೂಡಲಸಂಗಮದೇವರಲ್ಲಿ ಭಿನ್ನವಿಲ್ಲದೆ ನಿಂದ ಕಾಯದಂಗ.

kāyada kuṟuhuviḍidu bandenemba
ā bhāvada iravētakke nimage?
aṁbarada cāpa mugiloḷage hondite?
bēṟondaṟalli ninditē adaṟaṅgada chāye?
Prabhudēvaru ninda suḷuhu
Kūḍalasaṅgamadēvaralli bhinnavillade ninda kāyadaṅga.

Why should you have the thought
That you have come
Wearing the symbol of the flesh?
Did the bow in the sky
E'er mingle with the cloud?
And did its body's shadow dwell
In something else?
The gleam wherein Prabhudēva stands
Is a form of body which abides
Integrally in Lord Kūḍala Saṅgama.

೪೪

ಮತ್ತಂ,

ಏರಂಡದ ಬಿತ್ತಿನಂತೆ, ರಸವಾರಿಯಂತೆ,
ಪಶುವಿನ ಪಿಶಿತದಲ್ಲಿ ತಲೆದೋಱುವ ಅಮೃತದಂತೆ
ಕಾಯವಿಡಿದು ಬಂದಡೆ ನಿನಗಾ ಭವವಿಲ್ಲ.
ಕೂಡಲಸಂಗಮದೇವರಲ್ಲಿ
ಪ್ರಭುದೇವರ ಸುಳುಹು ಅಗಮ್ಯವಾಯಿತ್ತು.

mattaṁ,

ēraṇḍada bittinante, rasavāriyante,
paśuvina piśitadalli taledōṟuva amṛtadante
kāyaviḍidu bandaḍe ninagā bhavavilla.
Kūḍalasaṅgamadēvaralli
Prabhudēvara suḷuhu agamyavāyittu.

Though you have come in body, yet
There is no birth for you:
Even as the castor-seed, even as juice
In water; even as milk
Emerging from the animal flesh:
The gleam of Prabhudēva, in Lord
Kūḍala Saṅgama, is incomprehensible.

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ:

idakke Prabhudēvara pratyuttara:

Prabhudēva's rejoinder thereto:

೪೫

ಬಂದು ನಿಂದು ಮೊಲೆ ನೀರ ಮಿಂದವರೆಲ್ಲರು
  ಹೆಂಡತಿಯರಾಗಬಲ್ಲರೆ ?
ಬಂದು ನಿಂದು ಸುಳಿದು ಮಾಡುವರೆಲ್ಲರು
  ಸಂಗನ ಬಸವಣ್ಣನಂತೆ ಗುಹೇಶ್ವರ ಲಿಂಗವ ಬಲ್ಲರೆ ?

bandu nindu mole nīra mindavarellaru
  heṇḍatiyarāgaballare?
bandu nindu suḷidu māḍuvarellaru
  Saṅganabasavaṇṇanante Guhēśvara liṅgava ballare?

Whoever comes and bathes her breast
And stays, can be a wife?
Whoever comes and stays, bustles and serves,
Can he know Guhēśvaraliṅga
As Saṅgana Basavaṇṇa does?

ಇದಕ್ಕೆ ಬಸವರಾಜದೇವರ ಪ್ರತ್ಯುತ್ತರ:

idakke Basavarājadēvara pratyuttara:

Lord Basavarāja's rejoinder thereto:

೪೬

ರೂಹಿಲ್ಲದ ಸಯಿಧಾನವ ನೀಡುವೆ.
  ರುಚಿಯಿಲ್ಲದ ಪದಾರ್ಥವ ಮಥನಿಸದೆ ನೀಡುವೆನು.
ಲಿಂಗಕ್ಕೆಂದು ಲಿಂಗಪದಾರ್ಥವನಂಗಮುಖವ ಮಱೆದು
  ನಿಮಗೆ ನೀಡುವೆ.
ಕಾಮಿಸದೆ ಕಲ್ಪಿಸದೆ ಭಾವಿಸದೆ ಭ್ರಮಿಸದೆ
  ನಿಮ್ಮ ಪರಿಯಾಣಕ್ಕೆ ನೀಡುವೆನು.
ಸುಚಿತ್ತ ಸಮಾಧಾನದಿಂದ ಅವಧರಿಸಬೇಕಯ್ಯಾ
  ಕೂಡಲಸಂಗಮದೇವಯ್ಯಾ.

rūhillada sayidhānava nīḍuve.
  ruciyillada padārthava mathanisade nīḍuvenu.
liṅgakkendu liṅgapadārthavanaṅgamukhava maṟedu
  nimage nīḍuve.
kāmisade kalpisade bhāvisade bhramisade
  nimma pariyāṇakke nīḍuvenu.
sucitta samādhānadinda avadharisabēkayyā
  Kūḍalasaṅgamadēvayyā.

I serve food-offerings without form; I serve
Unflavoured dishes without mixing them;
For Liṅga's sake, I serve you spiritual food,
Forgetful of my temporal form;
Without desire or fancy, without thought,
Without delusion, I serve
Into your plate; accept it, pray,
With good grace and at ease,
O Kūḍala Saṅgama Lord!

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ:

idakke Prabhudēvara pratyuttara:

Prabhudēva's rejoinder thereto:

೪೭

ನಿಮ್ಮ ಲೀಲೆ, ನಿಮ್ಮ ವಿನೋದ, ನಿಮ್ಮ ಹಱೆ, ನಿಮ್ಮ ಕೊಳಲು.
ಅದಕ್ಕೆ ಬೇಕೆನ್ನೆ, ಬೇಡೆನ್ನೆ.
ಮೇಘವಹ್ನಿ ಧರೆಗೆಱಗುತ್ತ ಲೋಕವ ಬೆಸಗೊಂಡಿತ್ತೆ ?
ಉದರಾಗ್ನಿ ಧರೆಗೆಱಗುತ್ತ ಭೂತಂಗಳ ಬೆಸಗೊಂಡಿತ್ತೆ ?
ಗುಹೇಶ್ವರಲ್ಲಮನ ನಿರುಪಮಮಹಿಮೆ ಎಂತಿದ್ದಿತ್ತು
ಆ ಹಾಂಗೆ ನೀನು ಮಾಡುವುದಲ್ಲದೆ
ನಾನಿದಕ್ಕೆ ಬೇಕೆನ್ನೆನು, ಬೇಡೆನ್ನೆನು.

nimma līle, nimma vinōda, nimma haṟe, nimma koḷalu.
adakke bēkenne, bēḍenne.
mēghavanhi dharegeṟagutta lōkava besagoṇḍitte?
udarāgni dharegeṟagutta bhūtaṅgaḷa besagoṇḍitte?
Guhēśvarallamana nirupamamahime entiddittu
ā hāṅge nīnu māḍuvudallade
nānidake bēkennenu, bēḍennenu.

Yours is the sport, yours is the mirth,
Yours is the drum and flute: to this
I answer neither yea nor nay.
Pray, does the cloud-fire ask the world
For leave, in swooping to the earth?
And does the under-sea fire, even as it leaps
Upon the earth, consult the living things?

You should behave
In keeping with the peerless glory of
Guhēśvarallama; thereto I say
Neither yea nor nay.

ಇದಕ್ಕೆ ಬಸವರಾಜದೇವರ ಪ್ರತ್ಯುತ್ತರ:

idakke Basavarājadēvara pratyuttara:

Lord Basavarāja's rejoinder thereto:

೪೮

ಮಾಡುವ ಮಾಡಿಸಿಕೊಂಬ ಈ ಎರಡರ ನಡುವೆ
ಸಂದು ಭೇದವುಂಟೆ ದೇವಾ,
ಕಾಯ ಪ್ರಾಣದ ಸಂಗದಂತೆ ಇದ್ದುದಲ್ಲದೆ ?
ಬಲ್ಲಂತೆ ಮಾಡು, ಬಲ್ಲಂತೆ ನೀಡು.
ನಾನಱಿಯೆನೆಂಬುದು ನಿಮಗುಚಿತವೆ ?
ಮಾಡುವಲ್ಲಿ ನೀಡುವಲ್ಲಿ ಹೇಳಿ ಮಾಡಿಸಿಕೊಂಬುದಲ್ಲದೆ,
ಕೈಕಲಸಿದರೆ ಬಾಯಿಗೆ ಹಂಗುಂಟೆ ಕೂಡಲಸಂಗಮದೇವಾ ?

māḍuva māḍisikomba ī eraḍara naḍuve
sandu bhēdavuṇṭe dēvā,
kāya prāṇada saṅgadante iddudallade?
ballante māḍu, ballante nīḍu.
nānaṟiyenembudu nimagucitave?
māḍuvalli nīḍuvalli hēḷi māḍisikombudallade,
kaikalasidare bāyige haṅguṇṭe Kūḍalasaṅgamadēvā?

Is there a breach or difference between
The two—serving and being served,
Except it be even as the bond
That binds the body to the soul?
Does it become you to remark
'Do as you will, serve as you will,
I do not know'?
In doing and in serving, get it done
By ordering so;
But when the hand does mix the food,
Does it stop the mouth,
O Kūḍala Saṅgama Lord?

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ:
idakke Prabhudēvara pratyuttara:
Prabhudēva's rejoinder thereto:

೪೯

ಉಳ್ಳವರು ಹಗೆಯುವ ತೆಗೆವನ್ನಕ್ಕರ
ಇಲ್ಲದವರ ಹರಣ ಹೋಯಿತ್ತೆಂಬ ಗಾದೆ ಎನಗಾಯಿತ್ತಯ್ಯಾ.
ಮಾತು ಬಣ್ಣಿಸಲು ಹೊತ್ತು ಹೋಯಿತ್ತಯ್ಯಾ.
ನಿನಗದೆ ಹರಿನುಡಿಗೆ ಕಡೆಯಿಲ್ಲ.
ಒಬ್ಬರ ನೋಡುವಾಗ
ಅಱುವತ್ತು ಮನುಷ್ಯರ ನೋಡುವ ಹಾಂಗೆ ಆಗುತ್ತಿದೆ.
ಶೂನ್ಯಸಿಂಹಾಸನ ಬವರಿಗೊಡುತ್ತಿದೆ.
ಪ್ರಾಣ ಹೆಡತಲೆಯಲ್ಲಿ ಹೋಗುತ್ತಿದೆ.
ಗುಹೇಶ್ವರ ಹಸಿದನು,
ಪದಾರ್ಥವ ನೀಡೈ ಸಂಗನ ಬಸವಣ್ಣಾ.

uaḷḷavaru hageyava tegevannakkara
illadavara haraṇa hōyitteṁba gāde enagāyittayyā.
mātu baṇṇisalu hottu hōyittayyā.
ninagade harinuḍige kaḍeyilla.
obbara nōḍuvāga
aṟuvattu manuṣyara nōḍuva hāṅge āguttide.
śūnyasiṁhāsana bavarigoḍuttide.
prāṇa heḍataleyalli hōguttide.
Guhēśvara hasidanu,
padārthava nīḍai Saṅganabasavaṇṇā.

'The while the wealthy open up
Their corn-pits, the poor man's life
Is gone'! I find the proverb true of me.
While words are picturing a thing,
The time has flown, good Sir!
There is no ending to your flow of words!
Looking at one, it is as if
I saw, oh, sixty men:
The Throne of the Absolute is reeling round!
My breath is going through my nape!
Guhēśvara is hungry, serve your food,
Saṅgana Basavaṇṇa!

ಇದಕ್ಕೆ ಬಸವರಾಜದೇವರ ವಚನ:

idakke Basavarājadēvara vacana:

Lord Basavarāja's vacana thereon:

೫೦

ಶುದ್ಧವಾಯಿತ್ತೆಂಬೆನೆ? ಸುಯಿಧಾನಿ ನಾನಲ್ಲ.
ಅನುವಾಯಿತ್ತೆಂಬೆನೆ? ಅವಧಾನಿ ನಾನಲ್ಲ.
ಸುಯಿಧಾನ ಅವಧಾನ ಅರ್ಪಿತವ ಮುನ್ನಱಿಯೆ.
ಇದ್ದ ಪರಿಯಲ್ಲಿ ನೀಡಿದರೆ
ಬಂದ ಪರಿಯಲ್ಲಿ ಕೈಕೋ ಕೂಡಲಸಂಗಮದೇವಾ.

śuddhavāyittembene? suyidhāni nānalla.
anuvāyittembene? avadhāni nānalla.
suyidhāna avadhāna arpitava munnaṟiye.
idda pariyalli nīḍidare
banda pariyalli kaikō Kūḍalasaṅgamadēvā.

Should I say it is pure?
I'm not fastidious.
Should I say it is good?
Not nice am I.
I do not know these niceties
Nor yet what offering is!
So if I serve it as it is,
Accept it as it comes,
O Kūḍala Saṅgama Lord!

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ:

idakke Prabhudēvara pratyuttara:

Prabhudēva's rejoinder thereto:

೫೧

ಅಹುದಹುದು ಕಿಂಕುರ್ವಾಣ! ಮಝ್ಝುಭಾಪು!
ಬಲ್ಲವರು ಬಲ್ಲೆವೆಂದೆಂಬರೆ?
ಲಿಂಗವಂತರ ಮಹಿಮೆ ಈ ಹೀಂಗಿರಬೇಡಾ?
ಗುಹೇಶ್ವರನ ಆಪ್ಯಾಯನವನಡಗಿಸುವ ಅನುಮಾನವನು
ನೀನಲ್ಲದೆ ಮಹೀತಳದೊಳು ಮತ್ತೆ ಬಲ್ಲವರಾರು ಹೇಳಾ
ಸಂಗನಬಸವಣ್ಣಾ?

ahudahudu kiṅkurvāṇa! majhabhāpu!
ballavaru ballevendembare?
liṅgavantara mahime ī hīṅgirabēḍā?
Guhēśvarana āpyāyanavanaḍagisuva anumānavanu
nīnallade mahītaḷadoḷu matte ballavarāru hēḷā
Saṅganabasavaṇṇā?

Here's for your modesty! well done!
Do they who know say that they know?
Should not the glory of a Liṅgavanta
Be even such? Tell me, Saṅgana Basavaṇṇa,
Who else but you upon this earth
Knows how to appease Guhēśvara's hunger?

ಇದಕ್ಕೆ ಬಸವರಾಜದೇವರ ವಚನ:

idakke Basavarājadēvara vacana:

Lord Basavarāja's vacana thereon:

೫೨

ಅಗ್ಘವಣಿಯುಪಸರ ಸದಾಚಾರ ಸತ್ಕ್ರೀಯೆಂಬ ಭೂಮಿಯ ಮೇಲೆ
ಸರ್ವಶುದ್ಧವೆಂಬ ಗೋಮಯಮಂ ತಂದು,
ವಿನಯಾರ್ಥವೆಂಬ ಉದಕದಿಂದ ಸಮ್ಮಾರ್ಜನೆಯಂ ಮಾಡಿ,
ತನುವಿನ ಅವಗುಣಂಗಳ ಹುಡಿಗುಟ್ಟಿ ರಂಗವಾಲೆಯನಿಕ್ಕಿ,
ಅಕ್ಷಯವೆಂಬ ಬಿಂದಿಗೆಯಲ್ಲಿ ಪರಮಾನಂದವೆಂಬ ಅಗ್ಘವಣಿಯ ತುಂಬಿ,
ಸಮರಸದಿಂದ ಮಜ್ಜನಕ್ಕೆಱೆಯಲು,
ಹೃದಯಕಮಲವೆಂಬ ಪುಷ್ಪವಂ ಸಲಿಸಿ,
ಸೌಖ್ಯತರ ಶಾಂತಿಯೆಂಬ ಗಂಧವನಿಟ್ಟು,
ಅಕ್ಷಯವೆಂಬ ಅಕ್ಷತೆಯನಳವಡಿಸಿ,
ಸದ್ಭಾವವೆಂಬ ಧೂಪಮಂ ಬೀಸಿ,
ಸುಜ್ಞಾನವೆಂಬ ನಿವಾಳಿಯನೆತ್ತಿ,
ನಿತ್ಯ ನಿರಂಜನವೆಂಬ ನೀರಾಜನಮಂ ಬೆಳಗಲು,
ಬ್ರಹ್ಮನಾದವೆಂಬ ಘಂಟೆಯಂ ಬಾರಿಸಲು,
ನಿತ್ಯಲಿಂಗಾರ್ಚನೆಗೆಡೆಮಾಡಲು,
ಇದಱ ಮರ್ಮ ಕರ್ಮ ಸ್ಥಿತಿಯನಱಿದು
ಶಿವಲಿಂಗಾರ್ಚನೆಯ ಮಾಡಬಲ್ಲರೆ,
ಮರ್ತ್ಯದಲ್ಲಿ ನಾನಾರನೂ ಕಾಣೆನು.

ಕೂಡಲಸಂಗಮದೇವಪ್ರಭು ಶಿವಲಿಂಗಾರ್ಚನೆಯ ಮಾಡಲು
ನಾನೆ ಪರಿಚಾರಕನು.

agghavaṇiyavasara sadācāra satkrīyeṁba bhūmiya mēle
sarvaśudhaveṁba gōmayamaṁ tandu,
vinayārthaveṁba udakadinda sammārjaneyaṁ māḍi,
tanuvina avaguṇaṅgaḷa huḍiguṭṭi raṅgavāleyanikki,
akṣayaveṁba bindigeyalli paramānandaveṁba agghaviṇiyatuṁbi,
samarasadinda majjanakkeṟeyalu,
hṛdayakamalaveṁba puṣpamaṁ salisi,
soukhyatara śāntiyeṁba gandhavaniṭṭu,
akṣayaveṁba akṣateyanaḷavaḍisi,
sadbhāvaveṁba dhūpamaṁ bīsi,
sujñānaveṁba nivāḷiyanetti,
nityanirañjanaveṁba nīrājanamaṁ beḷagalu,
bramhanādaveṁba ghaṇṭeyaṁ bārisalu,
nityaliṅgārcanegeḍemāḍalu,
idaṟa varma karma sthitiyanaṟidu
śivaliṅgārcaneya māḍaballare,
martyadalli nānāranū kāṇenu.
Kūḍalasaṅgamadēvaprabhu śivaliṅgārcaneya māḍalu
nāne paricārakanu.

I know none else upon this mortal earth
Who can do worship of the Śivaliṅga,
Hurrying for water to render service;
Bringing the cow-dung of All-purity
To spread upon the floor of virtuous deeds;
Sprinkling it with water of Modesty;
Drawing patterns on the floor
With dust made of the body's vices;
Filling the pitcher of the Inexhaustible
With water of the Supreme Bliss;
Pouring the perfect Union for the bath;
Offering the lotus of the heart for flower;
Putting the sandal-paste of joyous Peace;
Preparing the rice of the Indestructible;
Swinging the censer of the sincere heart;
Waving the lamp of true Enlightenment
And the light of the immaculate and eterne;

Ringing the bell of the Cosmic Sound;
Making the worship of the eternal Liṅga
Ready—and knowing well
Its secret and its functioning. . . .
When Lord Kūḍala Saṅgama Prabhu does
The worship of Śivaliṅga, I but
Attend on him!

ಇದಕ್ಕೆ ಪ್ರಭುದೇವರು ತಮ್ಮ ಕರಸ್ಥಲದ ಲಿಂಗಕ್ಕೆ ಅಷ್ಟವಿಧಾರ್ಚನೆ ಷೋಡಶೋಪಚಾರವ ಮಾಡುತ್ತ ನಿವಾಳಿಯನೆತ್ತುವ ಪ್ರಸ್ತಾವದ ಪದಂಗಳು:

idakke Prabhudēvaru tamma karasthalada liṅgakke aṣṭavidhārcane ṣōḍaśōpacārava māḍutta nivāḷiyanettuva prastāvada padaṅgaḷu:

The songs sung when Prabhudēva waved the light in doing the eightfold worship and sixteenfold service to the Liṅga on his palm:

ರಾಗ: ದೇಶಿ

ಮಂಗಳಂ ಮಂಗಳಂ ಗುಹೇಶ್ವರನಾ
ಶರಣ ಲಿಂಗೈಕ್ಯಂಗೆ ಮಂಗಳಂ ॥ ಪಲ್ಲವಿ ॥

ಜಗವೆಲ್ಲವನೂರ ಮಾಡಿ ಊರೆಲ್ಲವ ಮನೆಯ ಮಾಡಿ
ಹೋಗದೆಸೆಯಿಲ್ಲದ ಸುಳುಹು ನೋಡಾ
ಸುಳುಹಿನ ಭೇದವನಱಿಯದ ಕಾರಣ
ದೇವಲೋಕ ಮರ್ತ್ಯಲೋಕವೆಲ್ಲಾ ಭ್ರಮೆಗೊಂಡಿತ್ತಲ್ಲಾ ॥ ೧ ॥

ಎಂಬತ್ತುನಾಲ್ಕು ಲಕ್ಷ ಯೋನಿಮುಖಜೀವಿಗಳಿಗೆ
ಎಂಬತ್ತುನಾಲ್ಕು ಲಕ್ಷಾರಾಧನೆ
ಒಂದೊಂದಱಾರಾಧನೆಯನೊಂದಂದಱಿಯದೆ
ಗೊಂದಣಗೊಂಡು ಲಯವಾದುದಲ್ಲಾ ॥ ೨ ॥

ಭಕುತಿ ಯುಕುತಿಯನಱಿಯೆ ಷೋಡಶೋಪಚಾರವಱಿಯೆ
ಭಾವ ಸಂಕಲ್ಪ ವಿಕಲ್ಪವನಱಿಯೆ
ನಾಮಸೀಮೆಗಳೆಲ್ಲವ ನೇಮಿಸಿ ಕಳೆದಂಗೆ
ಆವ ಲೋಕ ಕಲ್ಪಿತವಾದಂಗೆ ॥ ೩ ॥

ಕುಲವಳಿದು ಛಲವಳಿದು ಬಲುಹಳಿದು ನಿಲಲು
ಸೂತ್ರದ ಜಂತ್ರವಳಿಯಲು
ಫಲಸಿದ್ಧಿಯೆನಿಸಿ ನಿಷ್ಫಲಸಿದ್ಧಿಯನೆ ಬಿಟ್ಟು
ಭಕ್ತ್ಯಂಗನೆಯ ಮರ್ತ್ಯಕ್ಕೆ ತಂದಂಗೆ ॥ ೪ ॥

ಮಧ್ಯಸ್ಥಾನದ ಲೋಕಕ್ಕೆ ಹೋಗಿ ಮಱುವಾಳ
ನಱಿಯದ ಪರಿಯ ನೋಡಿರೆ
ತನುರುಚಿಯನೆ ಮಱೆದು ಘನರುಚಿಯಱಿದನ
ತನ್ನಂತೆ ಮಾಡಿದ ಗುಹೇಶ್ವರಲಿಂಗಾ ॥ ೫ ॥

ಪದ ಸಹ ವಚನ: ೫೭

rāga : dēśi

maṅgaḷaṁ maṅgaḷaṁ Guhēśvaranā
śaraṇa liṅgaikyaṅge maṅgaḷaṁ *pallavi*

jagavellavanūra māḍi ūrellava maneya māḍi
hōgadeseyillada suḷuhu nōḍā
suḷuhina bhēdavanaṟiyada kāraṇa
dēvalōka martyalōkavellā bhramegoṇḍittallā 1

embattunālku lakṣa yōnimukhajīvigaḷige
eṁbattunālku lakṣārādhane
ondondaṟārādhaneyanondandaṟiyade
gondaṇagoṇḍu layavādudallā 2

bhakuti yukutiyanaṟiye ṣōḍaśōpacāravaṟiye
bhāva saṅkalpa vikalpavanaṟiye
nāmasīmegaḷellava nēmisi kaḷedaṅge
āva lōka kalpitavādaṅge 3

kulavaḷidu chalavaḷidu baluhaḷidu nilalu
sūtrada jantravaḷiyalu
phalasiddhiyenisi niṣphalasiddhiyane biṭṭu
bhaktyaṅganeya martyakke tandaṅge 4

madhyasthānada lōkakke hōgi maṟuvāḷa
naṟiyada pariya nōḍire
tanuruciyane maṟedu ghanaruciyaṟidana
tannante māḍida Guhēśvaraliṅgā. 5

pada saha vacana: 57

Tune: Dēśi

Praise be, praise be
To Guhēśvara's śaraṇa united with Liṅga, praise!
Behold him moving with nowhere to go,
Who made a village of the entire world
And of the entire village made a home!

Not knowing the secret of his gait, the worlds,
Both mortal and immortal, alas! are dazed.
For offspring of four and eighty lakhs of wombs
As many forms of worshipping exist:
Since each was not aware of other forms,
Baffled they perished and, alas, are gone!

I do not know Devotion's ways,
Nor yet the sixteen modes of service know,
Nor have the feeling of resolve and doubt.
For one who has razed all formal bonds;
For whom no world has any reality—

One who has shed both caste and stubborn pride
And all the mechanism of the strings,
Left off all fruitless toil as bearing fruit;
Who brings upon this mortal earth
The Maiden of Devotion—

Who, having gone into the middle world,
Is, mark you, ignorant of rebirth;
Him who forgets the body's taste
And knows the savour of the Absolute—
Guhēśvaraliṅga makes like unto Him!

ಆ ಪ್ರಸ್ತಾವದಲ್ಲಿ ಮೋಳಿಗಯ್ಯಗಳ ವಚನ:

ā prastāvadalli Mōḷigayyagaḷa vacana:

Mōḷigeyya's vacana in this context:

೫೮

ಮುತ್ತೊಡೆದ ಚಿಪ್ಪಿನಲ್ಲಿ ನಿವಾಳಿಗಳ ಮಾಡಿ,
ಹೊನ್ನ ಪರಿಯಾಣಂಗಳ ನಡುವೆ ತಂದು ಮೇಳೈಸಿ,
ಉಟ್ಟಪಟ್ಟಾವಳಿಯ ದೇವಾಂಗದ ಸರ್ವಾಂಗವುಯ ಶೃಂಗಾರದಿಂದ
ಕಳಸಕನ್ನಡಿಯು ಕನ್ನಿಕೆಯರ ಜವಳಿಪಂಕ್ತಿ ಶೋಭಿಸುತ್ತಿರಲು,
ಶಿವಭಕ್ತಜನ ಸತಿಯರು ನಡೆದು ಬಂದು
ಶೂನ್ಯಸಿಂಹಾಸನದ ಮುಂದೆ ನಿಂದಿರ್ದರು,
ನಿಷ್ಕಳಂಕಮಲ್ಲಿಕಾರ್ಜುನ ಪ್ರಭುವಿಂಗೆ ಆರತಿಯನೆತ್ತಿಹೆವೆಂದು.

muttoḍeda cippinalli nivāḷigaḷa māḍi,
honna pariyāṇaṅgaḷa naḍuve tandu mēḷaisi,
uṭṭapaṭṭāvaḷiya dēvāṅgada sarvāṅgamaya śṛṅgāradinda
kaḷasakannaḍiya kannikeyara javaḷipaṅkti śōbhisuttiralu,
śivabhaktajanasatiyaru naḍedu bandu
śūnyasiṁhāsanada munde nindirdaru,
Niskaḷaṅkamallikārjuna Prabhuviṅge āratiyanettihevendu.

When, lighting the flame in shells wherefrom
The pearl has broken out;
Collecting in the centre the golden plates,
A double row of damsels, wrapped
All over in silken sarees and bedecked
With pots and mirrors, shone with grace,
The Śivabhaktas' wives came stepping in
And stood before the Throne of the Absolute,
To wave their lamps about Prabhu,
To Niṣkaḷaṅka Mallikārjuna.

ಮತ್ತಂ ನಾಗಲಾಂಬಿಕೆಯಮ್ಮನು ನಿವಾಳಿಯನೆತ್ತುವ ಪ್ರಸ್ತಾವದಲ್ಲಿ ಮೋಳಿ-ಗಯ್ಯಗಳ ವಚನ:

mattaṁ Nāgalāṁbikeyammanu nivāḷiyanettuva prastāvadallī Mōḷigayyagaḷa vacana:

Again: Moligeyya's vacana on the occasion of the lady Nāgalāṁbika waving the light:

೫೯

ಕೊಟ್ಟ ದ್ರವ್ಯವನು ತಮ್ಮ ತಮ್ಮ ಲಿಂಗಕ್ಕೆ ಸಮರ್ಪಣೆಯ ಮಾಡಿಕೊಂಡು,
ತನುಭೋಗಾದಿ ಭೋಗಂಗಳ ಭೋಗಿಸುತ್ತಿರ್ದರಲ್ಲಾ
ಹೊನ್ನ ಪರಿಯಾಣಂಗಳಲ್ಲಿ !
ಅನಂತಪರಿಯ ಗುಗ್ಗುಳ ಧೂಪದಶಾಂಗವೆಸೆಯಲು,
ಭರದಿಂದ ನಡೆತಂದು ಶೂನ್ಯಸಿಂಹಾಸನದ ಮುಂದೆ ನಿಂದಿರ್ದರು.
ಪಂಚಮಹಾವಾದ್ಯ ಮೊಳಗುತ್ತಿರಲು,
ಆವರವರ ಕೈಯ ನಿವಾಳಿಗಳನೀಸಿಕೊಂಡು
ನಾಗಾಯವ್ವೆಗಳು ನಿಃಕಳಂಕ ಮಲ್ಲಿಕಾರ್ಜುನ ಪ್ರಭುವಿಂಗೆ
ಆರತಿಯನೆತ್ತುತ್ತಿರ್ದರಲ್ಲಾ !

koṭṭa dravyavanu tamma tamma liṅgakke samarpaṇeya māḍikoṇḍu,
tanubhōgādibhōgaṅgaḷa bhōgisuttirdarallā
honna pariyāṇaṅgaḷalli!
anantapariya gugguḷa dhūpadaśāṅgaveseyalu,
bharadinda naḍetandu śūnyasiṁhāsanada munde nindirdaru.
pañcamahāvādya moḷaguttiralu,
avaravara kaiya nivāḷigaḷanīsikoṇḍu
Nāgāyavvegaḷu Niḥkaḷaṅka Mallikārjuna prabhuviṅge
āratiyanettuttirdarallā!

Each offering to his Liṅga
The articles that had been given to them,
They relish all the several joys of sense
In golden platters. They display
Bedellium, incense, tenfold scent,
And coming eagerly they stand
Before the Throne of the Absolute;
And as the five great instruments
Resound, taking the lamps from several hands,
Nāgāyavve waves the light around
Prabhu Niṣkaḷaṅka Mallikārjuna.

ಇಂತೀ ಶ್ರೀಮತ್ ಸಕಲಗಣ ಪುರಾತನರೊಳ್ ಪ್ರಭುದೇವರು
ಮಹಾನುಭಾವಸದ್ಗೋಷ್ಠಿಯಂ ಮಾಡಿದ ಶೂನ್ಯಸಂಪಾದನೆಯೊಳ್
ಪ್ರಭುದೇವರು ಶೂನ್ಯಸಿಂಹಾಸನದ ಮೇಲೆ ಮೂರ್ತಿಗೊಂಡುದು
ಅಷ್ಟಾದಶೋಪದೇಶಂ ಸಮಾಪ್ತಂ

ಅಂತು ವಚನ ೧೨೧೩ಕ್ಕಂ ಮಂಗಳಮಹಾ

ಶ್ರೀ

intī śrīmat sakalagaṇa purātanaroḷ Prabhudēvaru
mahānubhāvasadgōṣṭhiyaṁ māḍida Śūnyasaṁpādaneyoḷ
Prabhudēvaru śūnyasiṁhāsanada mēle mūrtigoṇḍudu
aṣṭādaśōpadēśaṁ samāptaṁ

antu vacana 1213 *kkaṁ maṅgaḷamahā*

śrī

Thus ends
the eighteenth of the mystic discourses
of the *Śūnyasaṁpādane*
—Chapter on Prabhudēva's taking his seat on the
Throne of the Absolute—
held with his ancient and esteemed Saints.

Thus it ends auspiciously with Vacana No. 1213.

INTRODUCTION

to the

SAṀPĀDANE OF PRABHUDĒVA'S FEAST

The present Chapter takes up the thread of the 18th Chapter. At the conclusion of Prabhudēva's Liṅga-worship Basavaṇṇa is ready to serve the Jaṅgama. The plate he places before him is worthy of the Jaṅgama. Here is the way Prabhudēva enjoys the dishes as they are being served:

When one kind of food was made ready
In an enormous plate,
And various courses came in various ways,
Before they were seen, the look itself
Became an offering:
Before they were touched, the touch itself
Became an offering;
Before they were tasted, the relish itself
Became an offering: take it, take it!
O Liṅga, should you yourself
Offer to your own majesty the food
Dear to your heart, I offer you
The food that is dear to my heart.
O Guhēśvara, since he has
Made ready plenty of food for you
And serves it as he can,
Do eat Saṅgana Basavaṇṇa's gift, O Lord,
Both for myself and you!

This is true to the śaraṇa conception of offering and Prasāda: the senses, inner or outer, are not permitted to touch anything before it is offered to the Liṅga enshrined in all the senses. It is the servant's to give all things to his master, because they are indeed his master's, and take whatever comes from Him. This lends the term *liṅga-bhōgōpabhōga* its full significance.

Prabhudēva, as we have seen at the end of the last Chapter, is or pretends to be, extremely hungry, and as Basavaṇṇa serves him without a pause, Prabhudēva gobbles it all up in no time. Basavaṇṇa is grieved to see that his Lord has perhaps gone without food for days together; so he goes on serving him more and more of it without intermission and he thanks his luck for the opportunity to serve this hungry Jaṅgama. The food prepared for one hundred and ninetysix thousand Jaṅgamas goes rapidly into that capacious maw and still the food seems to vanish even before it is served. Prabhudēva seems to have many faces on all sides and to eat through mouths cropping up all around:

. . . .
Whichever way you brought and served,
In that direction he became a mouth
And took it all. Wherever you look,
His mouths are as close together
As seeds you cast for sprouts!
. . . .

Cennabasavaṇṇa, watching with keen interest, sees deeper into what is going on: He can see that the formed Kūḍala Cennasaṅga, with Basavaṇṇa and Maḍivāḷa for his arms, is trying to feed the formless Brahma that Prabhudēva is,[1] with Maḍivāḷayya helping Basavaṇṇa in his service of the Lord. Cennabasavaṇṇa, here speaks of the identity between the feeder and the fed, which is the fundamental concept of Śivādvaita Bhakti or Nijabhakti. When all the food has been consumed, and even the chaff and husk, as well as the enormous quantities of food brought by the bhaktas from their homes are not found enough to satiate the hunger of the Lord, Basavaṇṇa, at a loss to know what to do, turns for advice to Maḍivāḷayya, who asks him to dare and carry on. Basavaṇṇa falls back on the large quantities of stored-up grains and other available articles of food, and offers it all to Prabhudēva, but to no avail. Even his final desperate effort to produce more and more food with the help of his alchemic sight, alchemic touch, word, mind and will, proves unequal to the situation:

1. SS(K), Ch. XVIII, Vs. 3-5.

Things touched with the hand
Dissolve in the hand;
Things touched with the eyes
Dissolve in the eyes;
Things touched with the tongue
Dissolve on the tongue;
The lackeys who serve are tired, but then
The feasting God does not know how.
How to describe the loss I bore
Through my conceit that I would entertain
A God come hiding in Himself
The cosmic egg? Tell us,
Maḍivāḷayya, if you know, the way
To satisfy Lord Kūḍala Saṅgama.

Basavaṇṇa is utterly helpless and requests Maḍivāḷayya to help him out of the situation; and Maḍivāḷayya refers him to Cennabasavaṇṇa.

Cennabasavaṇṇa, as we are aware, has been watching and knows full well that Basavaṇṇa's method is ineffective; and it is so because the Jaṅgamaliṅga seated on the Throne of the Absolute is the Godhead holding all the fourteen worlds within his being. How absurd, he says, to know the truth and yet not know it when you see it. This is not the way at all to satisfy the Infinity of God.

The nine-zoned earth, yea, the round world
Five-hundred billions wide, is all hid
In this one universe . . . What shall I say
About the madness of His Mastership
Presuming to serve food to the Absolute
Who has incorporated in Himself
Fourteen such worlds?
If you would have the key
To Kūḍala Cennasaṅga's content,
It's you should be the main dish,
The side-dish I . . . There's nought
Higher than this—mark you,
Saṅgana Basavaṇṇa!

It is only Infinite Love that can feed an Infinite God. That is what he means by the words, "You should be the main dish, the side dish I". You may go on offering food in heaps; but without this love all offerings are charged with egoism. It is only when the 'I' is offered that love becomes perfect and with it all that love offers.

The Jaṅgama feeds on the bhakta and is fully satisfied; and the bhakta finds his fulfilment in offering his self to the Jaṅgama. The one without the other is incomplete. Fire feeds on camphor and sustains itself; and camphor offers itself to fire, and so realises itself. Vs. 38 and 39 speak of the true relation between the bhakta and the Jaṅgama. According to Prabhudēva, Guhēśvaraliṅga has bodied himself forth, with Bhakta Basavaṇṇa for his body, and Jaṅgama Prabhudēva for his soul. The one without the other is unthinkable. Prabhudēva's feast reveals a great spiritual truth. Man hungers for God, and God is equally hungry for man's love.

Basavaṇṇa, having at last satiated his Lord, soon awakes from his joy to the disconcerting fact of the Community's displeasure; and requests Prabhudēva to soothe their feelings. He says:

What if the moon is nectar-rayed
Unless it sheds the spots it has?
What if the sun is a great light unless
It rids itself of one defect—
Of setting in the west?
Of what avail to earn your grace, good Sir,
When your own śaraṇas have gone away
Incensed against me? O Kūḍala Saṅgama Lord,
Make that compassion towards me
Should grow within your śaraṇas' hearts
And make them come to me!

But Prabhudēva only thinks of the conceited folly of the Jaṅgamas:

They do not know themselves,
They do not listen to what you say,
Nor know the manner of the Six,
Nor yet the hazards of the Eight,

What shall I call them, Guhēśvara,
Who know not how to come
Down from the mountain they have climbed.

Basavaṇṇa, however, pleads that, in the eyes of the all-prevading and all-compassionate Divine, there is no room for fault-finding; and Prabhudēva, yielding to the logic of Basavaṇṇa's heart, bids him recall the Jaṅgamas to their meal; he must make amends:

Should they give you a left-foot kick,
The right foot is what you should hold;
Should they give you a right-foot kick,
The left foot is what you should hold.
Go, own your fault and beg them to forgive,
And bring with you Guhēśvara's śaraṇas,
Saṅgana Basavaṇṇa.

Basavaṇṇa proceeds to pacify the Jaṅgamas, who return with him, and are filled with Basavaṇṇa's Bhakti-Prasāda:

. . . .
Taking Basavaṇṇa's Prasāda, Allama Prabhu
Became content; while this content,
Deriving from the food consumed
By Allama Prabhu, became content for one
Lakh six-and-ninety thousand Jaṅgamas,
And when it was said, in the content of those
One lakh and six-and-ninety thousand ones,
The entire animate and inanimate world
Became fully content,
Bijjaḷa contended that it was not so,
Did not Basavaṇṇa show the grace of Prabhu
Within the belly of a frog?
Therefore, in Kūḍala Cennasaṅgama,
The glory of Basavaṇṇa's and Prabhudēva's grace
In the three worlds flourished and grew.

This idea is reinforced in a series of similes; for example, a tank drinks of the water of a river, and the fields below, fed by the tank's

water, pass it on to crops, and so to the birds and insects and animals. Again, the child in the womb is fed by the food consumed by the expectant mother. Likewise, whenever we eat, the billions of the living cells of the body are nourished. There is also a Sanskrit couplet to the point:

śivayōgini saṁtṛptē tṛptōbhavati śaṅkaraḥ
tat tṛptyā tanmayaṁ viśvaṁ tṛptimēti carācaraṁ

Which means that, when a Śivayōgi is contented, Lord Śaṅkara is contented and, in His contentment, the universe, permeated by Him, finds its contentment.

This Chapter, in which we find Basavaṇṇa put to a most severe ordeal, presents us with a picture of his courageous, loyal and all-loving personality, and he emerges from his ordeal a greater, nobler and more purified bhakta than ever. And we also get at the same time a better insight into śaraṇas like Prabhudēva, Cennabasavaṇṇa and Maḍivāḷayya.

ಏಕೋನವಿಂಶತ್ಯುಪದೇಶ

ಪ್ರ ಭು ದೇ ವ ರ ಆ ರೋ ಗ ಣೆ

ಶೂನ್ಯಪೀಠದೊಳು ಮಂಡಿಸಿ
ಚಿನ್ಮಯ ಗುರುಮೂರ್ತಿ ಪ್ರಭುವರನು ಅತಿಶಯುವ
ಪ್ರುನ್ನತದಾರೋಗಣೆಯಂ
ನನ್ನಿಯೊಳರ್ಪಿಸಿದ ಪರಿಯದೆಂತೆನಲುಸುರ್ವೆಂ

ĒKŌNAVIṀŚATYUPADĒŚA

PRABHUDĒVARA ĀRŌGAṆE

śūnyapīṭhadoḷu maṇḍisi
cinmaya gurumūrti Prabhuvaranu atiśayava
ppunnatadārōgaṇeyaṁ
nanniyoḷarpisida pariyadentenalusurveṁ

THE NINETEENTH LESSON

Prabhudēva's Feast

I tell how great Prabhu, the wise Guru,
Now settled on the seat of the Absolute,
Out of love partook of a feast
Which was sumptuous and opulent.

ಅದೆಂತೆಂದೊಡಾ ಪ್ರಭುದೇವರು ಶೂನ್ಯಸಿಂಹಾಸನದ ಮೇಲೆ ಮೂರ್ತಿಗೊಂಡಿರಲು, ಬಸವರಾಜದೇವರು ಅಷ್ಟವಿಧಾರ್ಚನೆ ಷೋಡಶೋಪಚಾರಂಗಳಂ ಮಾಡಿಸಿ ಅತ್ಯಂತ ಸಂತೋಷದಿಂದಿರಲು, ಆ ಪಟ್ಟಣದಲ್ಲಿಹ ಸಕಲಶರಣರ ಸತಿಯರೆಲ್ಲರು ನಿವಾಳಿಗಳನೆತ್ತಿ ಕೊಂಡಾಡುತ್ತಿರೆ, ಪಂಚಮಹಾವಾದ್ಯರಭಸದಿಂ ಶರಣರೆಲ್ಲರು 'ಜಯ ಜಯ' ಎಂದು ಹರುಷಾಂಬುಧಿಯೊಳ್ ತೇಂಕಾಡುತ್ತಮಿರಲಾ ಪ್ರಸ್ತಾವದೊಳು, ಬಸವರಾಜದೇವರು ಪ್ರಭುದೇವರಿಗೆ ಆರೋಗಣೆಯ ಮಾಡಿಸಬೇಕೆಂದು ಪರಿಯಾಣವ ತಂದಿಳುಹಿದ ಪ್ರಸ್ತಾವದ ವಚನ:

adentendoḍā Prabhudēvaru śūnyasiṁhāsanada mēle mūrtigoṇḍiralu, Basavarājadēvaru aṣṭavidhārcane ṣōḍaśōpacāraṅgaḷaṁ māḍisi atyanta santōṣadindiralu, ā paṭṭaṇadalliha sakalaśaraṇara satiyarellaru nivāḷigaḷanetti koṇḍāḍuttire, pancamahāvādyarabhasadiṁ saraṇarellaru 'jaya jaya' endu haruṣāṁbudhiyoḷ tēṅkāḍuttamiralā prastāvadoḷu, Basavarājadēvaru Prabhudēvarige ārōgaṇeya māḍisabēkendu pariyāṇava tandiḷuhida prastāvada vacana:

This is how: The vacana which tells how, when Prabhudēva had seated himself on the Throne of the Absolute and Lord Basavarāja had made him perform the eightfold worship and the sixteenfold service, and was moved to exceeding joy, the wives of all the śaraṇas in the city sang his praises as they waved lights around him and all the śaraṇas amidst the clangour of the five great instruments swam in an ocean of delight, shouting hosannas; when Lord Basavarāja, that Prabhudēva might eat, brought a plate and set it down:

೧

ಅಂಗದಲಳವಟ್ಟ ಲಿಂಗಕ್ಕೆ ಅಂಗವೆ ಭಾಜನ.
ಪ್ರಾಣದ ಮೇಲಣ ಲಿಂಗಕ್ಕೆ ಮನವೆ ಭಾಜನ.
ಅಱಿವಿನ ಮೇಲಣ ಲಿಂಗಕ್ಕೆ ನಿರ್ಭಾವವೆ ಭಾಜನ.
ಕೂಡಲಸಂಗಮದೇವಯ್ಯಾ,
ಪ್ರಭುದೇವರು ಆರೋಗಣೆಯ ಮಾಡುವರೆ
ಭಕ್ತಿಪರಿಯಾಣವಲ್ಲದೆ ಬೇಱೆ ಭಾಜನವ ಕಾಣೆನು.

aṅgadalaḷavaṭṭa liṅgakke aṅgave bhājana.
prāṇada mēlaṇa liṅgakke manave bhājana.
aṟivina mēlaṇa liṅgakke nirbhāvave bhājana.
Kūḍalasaṅgamadēvayyā,
Prabhudēvaru ārōgaṇeya māḍuvare
bhaktipariyāṇavallade bēṟe bhājanava u.kāṇen

For the embodied Liṅga, the body is the plate;
For the Liṅga in the soul, the mind;
For the Liṅga in consciousness, the plate
Is will-lessness . . . O Kūḍala Saṅgama Lord,
When Prabhudēva is to eat, I see
No other plate
Than that of piety.

ಮತ್ತಂ. ಪರಿಯಾಣದಲ್ಲಿ ಸಕಲಪದಾರ್ಥಂಗಳ ನೀಡುವ ಪ್ರಸ್ತಾವದಲ್ಲಿ ಪ್ರಭುದೇವರ ವಚನ:

mattaṁ, pariyāṇadalli sakalapadārthaṅgaḷa nīḍuva prastāvadalli Prabhudēvara vacana:

Again: Prabhudēva's vacana at the time of serving all the courses in his platter:

೨

ಘನವಪ್ಪ ಪರಿಯಾಣದಲ್ಲಿ ಒಂದನುವಿನ ಬೋನವನಳವಡಿಸಿ,
ಪರಿಪರಿಯ ಪಥಾರ್ಥಂಗಳು ಬಗೆಬಗೆಯಿಂದ ಬರಲು,
ನೋಡದ ಮುನ್ನವೆ ರೂಪರ್ಪಿತವಾಯಿತ್ತು;
ಮುಟ್ಟದ ಮುನ್ನವೆ ಸೋಂಕರ್ಪಿತವಾಯಿತ್ತು;
ರುಚಿಸದ ಮುನ್ನವೆ ಸುಖವರ್ಪಿತವಾಯಿತ್ತು.
ಅವಧಾರು, ಅವಧಾರು ಲಿಂಗ.
ನಿಮ್ಮ ಮನಕ್ಕೆ ಬಂದ ಪದಾರ್ಥವ ನಿನ್ನ ಘನಕ್ಕೆ ನೀನರ್ಪಿಸಿದರೆ,
ಎನ್ನ ಮನಕ್ಕೆ ಬಂದ ಪದಾರ್ಥವ ನಿನಗರ್ಪಿಸುವೆನು.
ಗುಹೇಶ್ವರಾ,
ನಿನಗೆ ಭರಿತಬೋನವನಳವಡಿಸಿ ನೀಡಬಲ್ಲವನಾಗಿ,
ಎನಗೂ ನಿನಗೂ ಸಂಗನಬಸವಣ್ಣನ ಪ್ರಸಾದವನಾರೋಗಿಸು ದೇವಾ.

ghanavappa pariyāṇadalli ondanuvina bōnavanaḷavaḍisi,
pari pariya padārthaṅgaḷu bagebageyinda baralu,
nōḍada munnave rūparpitavāyittu;
muṭṭada munnave sōṅkarpitavāyittu;
rucisada munnave sukhavarpitavāyittu.
avadhāru, avadhāru liṅga.
nimma manakke banda padārthava ninna ghanakke nīnarpisidare,
enna manakke banda padārthava ninagarpisuvenu,

Guhēśvarā,
ninage bharitabōnavanaḷavaḍisi nīḍaballavanāgi,
enagū ninagū Saṅganabasavaṇṇana prasādavanārōgisu dēvaā.

When one kind of food was made ready
In an enormous plate,
And various courses came in various ways,
Before they were seen, the form itself
Became an offering:
Before they were touched, the touch itself
Became an offering;
Before they were tasted, the relish itself
Became an offering: take it, take it!
O Liṅga, should you yourself
Offer to your own majesty the food
Dear to your heart, I offer you
The food that is dear to my heart.
O Guhēśvara, since he has
Made ready plenty of food for you
And serves it as he can,
Do eat Saṅgana Basavaṇṇa's gift, O Lord,
Both for myself and you!

ಮತ್ತಂ, ಪ್ರಭುದೇವರಾರೋಗಣೆ:

mattaṁ, Prabhudēvarārōgaṇe:

Again: Prabhudēva's feast:

೩

ಕಾಯದಲಾದ ಅರ್ಪಿತ ಅರ್ಪಿತವಲ್ಲ.
ಪ್ರಾಣದಲಾದ ಅರ್ಪಿತ ಅರ್ಪಿತವಲ್ಲ.
ಭಾವದಲಾದ ಅರ್ಪಿತ ಅರ್ಪಿತವಲ್ಲ.
ಅಱಿವಿನಲಾದ ಅರ್ಪಿತ ಅರ್ಪಿತವಲ್ಲ.
ನೆನಹಿಲ್ಲದ ಅವಧಾನ, ಮಱಹಿಲ್ಲದಾರೋಗಣೆ,
ತಟ್ಟದ ಮುಟ್ಟದ ಅರ್ಪಿತ.
ಗುಹೇಶ್ವರಲಿಂಗದ ಆರೋಗಣೆಯನಿಂದು
ಸಂಗನಬಸವಣ್ಣನಿಂದ ಕಂಡೆನು.

kāyadalāda arpita arpitavalla.
prāṇadalāda arpita arpitavalla.
bhāvadalāda arpita arpitavalla.
aṟivinalāda arpita arpitavalla.
nenahillada avadhāna, maṟahilladārōgaṇe,
taṭṭada muṭṭada arpita.
Guhēśvaraliṅgada ārōgaṇeyanindu
Saṅganabasavaṇṇaninda kaṇḍenu.

What's offered in the body
Is not an offering;
What's offered in the soul
Is not an offering; nor what
Is offered in the will and consciousness.
Attentive service without thought of giving,
Eating without forgetfulness,
That is an offering
That's not touched at all.
Today I have seen Guhēśvaraliṅga's feast
By way of Saṅgana Basavaṇṇa.

ಆ ಪ್ರಸ್ತಾವದೊಳು ಬಸವರಾಜದೇವರ ವಚನ:

ā prastāvadoḷu Basavarājadēvara vacana:

Lord Basavarāja's vacana on this occasion:

ೞ

ಕೈ ಹಾರ ನೀಡಿದರೆ ಮನಹಾರ ಕೊಳುತ್ತೈದಾನೆ.
ಅಹುದಹುದು. ಸ್ವಾಮಿಯ ಹಸಿವು ಲೋಕಕ್ಕೆ ಹೊಸತು.
ಕೂಡಲಸಂಗಮದೇವ ನೆಱೆಹಸಿದ.
ಮೊಱೆಮೊಱೆದಲ್ಲಿ ನೀಡಿ.

kaihāra nīḍidare manahāra koḷuttaidāne.
ahudahudu, svāmiya hasivu lōkakke hosatu.
Kūḍalasaṅgamadēva neṟehasida.
moṟamoṟadalli nīḍi.

If you serve him with the well-filled hand,
He takes it till his heart is full.
Yea, yea, the Master's hunger
Is novel to this world.

Lord Kūḍala Saṅgama is ravenous:
Serve him in winnowing-fans
On winnowing-fans!

೫

ಮತ್ತಂ,
ಮೊಱಹಾರ ನೀಡಿದರೆ ತೆಱಹಾರ ಕೊಳುತ್ತೈದಾನೆ.
ಅಹುದಹುದು, ಮತ್ತೇನು ?
ದೇವರ ಹಸಿವು ನಮಗೆ ಹೊಸತಲಾ !
ದೆಸೆದಿಕ್ಕೆಲ್ಲಾ ವಿಶ್ವತೋಮುಖದ ಕೂಡಲಸಂಗಮದೇವಂಗೆ
ದೆಸೆದೆಸೆಯಲ್ಲಿ ನೀಡಿ.

mattaṁ,
moṟahāra nīḍidare teṟahāra koḷuttaidāne.
ahudahudu, mattēnu?
dēvara hasivu namage hosatalā !
desedikkellā viśvatōmukhada Kūḍalasaṅgamadēvaṅge
desedeseyalli nīḍi.

Again:
If you would serve him food by the winnowing-fan
He is all mouth!
Yea, yea, what else?
Strange is God's hunger indeed!
Do serve in different ways
Lord Kūḍala Saṅgama
Whose universal mouth is turned
In all the different ways.

ಇದಕ್ಕೆ ಚಿಕ್ಕದಣ್ಣಾಯಕರ ವಚನ:

idakke Cikkadaṇṇāyakara vacana:

Cennabasavaṇṇa's vacana on this:

೬

ಅನಾಹತದಲ್ಲಿ ಶಿವ ತನ್ನ ಲೀಲಾವಿನೋದದಿಂದ
ನೀವು ಸಹಿತ ಮೂರ್ತಿಯಾದನು.
ಹೊಱಗೆ ಆಕಾರವ ಧರಿಸಿ,
ಒಳಗೆ ನಿರವಯಕ್ಕೆ ಆರೋಗಣೆಯ ಮಾಡಿಸಲು,

ಕೂಡಲಚೆನ್ನಸಂಗಮದೇವ
ಪ್ರಭುದೇವರ ಅಪರಮಿತದಾರೋಗಣೆಗೆ
ಬಸವಣ್ಣ ಮಡಿವಾಳನೆಂಬೆರಡು ತೋಳ ಧರಿಸಿದನು.
ಏನೆಂದುಪಮಿಸುವೆನು !

anāhatadalli śiva tanna līlāvinōdadinda
nīvu sahita mūrtiyādanu.
hoṟage ākarava dharisi
oḷage niravayakke ārōgaṇeya māḍisalu,
Kūḍalacennasaṅgamadēvā,
Prabhudēvara aparamitadārōgaṇege
Basavaṇṇa Maḍivāḷaneṁberaḍu tōḷa dharisidanu.
ēnendupamisuvenu!

Within the unstruck sound Śiva has made
Himself a form along with you
For His own mirth and sport.
When, putting on a form without,
Lord Cennasaṅgama to feed
The formlessness within,
Has put on two arms
Called Basavaṇṇa and Maḍivāḷa
For Prabhudēva's endless feast—
How, I cannot tell!

ಮಡಿವಾಳಯ್ಯಗಳ ವಚನ:

Maḍivāḷayyagaḷa vacana:

Lord Maḍivāḷa's vacana:

೭

ತನುಮುಖಕ್ಕೆ ನೀಡಿದ ಬೋನ ಅನುವಾಗಿ ಅಳವಡದ ಮುನ್ನ
ಮನಮುಖಕ್ಕೆ ಸರಿಯಾಯಿತ್ತು.
ಮನಮುಖಕ್ಕೆ ಅನುವಾಗಿ ಅಳವಡದ ಮುನ್ನ
ನೋಡ ನೋಡಲೈಕ್ಯವಾಯಿತ್ತು.
ಆಕಾಶ ಬಾಯ್ದೆಗೆದಂತೆ ಆರೋಗಣೆಯ ಮಾಡುತ್ತಿದ್ದನು.
ಮಾಡಿಸುವ ಗರುವರಾರೋ ?
ಕಲಿದೇವರದೇವನ ಅನುವಱಿದು ನೀಡುವರೆ,
ಸಂಗನಬಸವಣ್ಣಂಗಲ್ಲದೆ ಮತ್ತಾರಿಗೂ ಅಳವಡದು.

tanumukhakke nīḍida bōna anuvāgi aḷavaḍada munna
manamukhakke sariyāyittu.
manamukhakke anuvāgi aḷavaḍa munna
nōḍa nōḍalaikyavāyittu.
ākāśa bāydegedante ārōgaṇeya māḍuttiddanu.
māḍisuva garuvarārō?
Kalidēvaradēvana anuvaṟidu nīḍuvare,
Saṅganabasavaṇṇaṅgallade mattārigū aḷavaḍadu.

Before the courses meant for body's mouth
Are done and ready, they suffice
The mind's mouth: and before
They're ready for the mouth of the mind,
Even as you look, they have disappeared!
He eats as if the heavens had
Opened its mouth: who is the mighty one
Who can serve him? If you would serve
Lord Kalidēva, knowing what he is,
None else but Saṅgana Basavaṇṇa can
Arrange for it.

ಹಡಪದಪ್ಪಣ್ಣಗಳ ವಚನ:

Haḍapadappaṇṇagaḷa vacana:

Haḍapada Appaṇṇa's vacana:

೮

ಹೆಡಗೆಹಾರ ಮೊಱಹಾರ ಗೆರಸಿಹಾರ ಮಡಕೆಹಾರ
ದೆಸೆದೆಸೆಯಲ್ಲಿ ತಂದು ನೀಡುತ್ತಿರಲು,
ಹೊಸಪರಿಯಲಾರೋಗಣೆಯನವಧರಿಸುತ್ತಿರ್ದನು.
ಆವ ದೆಸೆಯಲ್ಲಿ ತಂದು ನೀಡುತ್ತಿದ್ದರೆ,
ಆ ದೆಸೆ ದೆಸೆಗಳೆಲ್ಲಾ ಬಾಯಾಗಿ ಕೊಳುತ್ತಿರ್ದನು.
ಎತ್ತೆತ್ತ ನೋಡಿದಡತ್ತತ್ತ
ಮುಖವಗೆಯ ಹೊಯ್ದಂತೆ ತೆಱಹಿಲ್ಲ.
ಒಂದು ನಿಮಿಷ ಎಡಹಿದರೆ
ಅಕ್ಕಿಗಚ್ಚು ನುಚ್ಚು ತೌಡು ಮೊದಲಾಗಿ ಹೆಚ್ಚಿದವು ನಿಮಿಷದೊಳು.
ಭಕ್ತಿಬಂಧುಗಳೆಲ್ಲಾ ತಮ್ಮ ತಮ್ಮ ಮಠದ
ಸಯಧಾನವ ತಂದು ಸಾರೆಗಟ್ಟಿ ನೀಡುತ್ತಿದ್ದರೆ,

ಅದ್ಭುತದಾರೋಗಣೆಯ ಕಂಡು,
ಹರಿಹರಿದು ಪಾಕಪ್ರಯತ್ನಮಂ ಮಾಡಿ ಎನುತ್ತೆ,
ಬಸವಪ್ರಿಯ ಕೂಡಲಚೆನ್ನಸಂಗಯ್ಯನಲ್ಲಿ ಸಂತೋಷದಲೋಲಾಡುತ್ತಿರ್ದನು
ಎನ್ನ ಪರಮಗುರು ಬಸವಣ್ಣನು.

heḍagehāra moṟahāra gerasihāra maḍakehāra
desedeseyalli tandu nīḍuttiralu,
hosa pariyalārōgaṇeyanavadharisuttirdanu.
āva deseyalli tandu nīḍuttiddare,
ā desedesegaḷellā bāyāgi koḷuttirdanu.
ettetta nōḍidaḍattatta
mukhavageya hoydante teṟahilla.
ondu nimiṣa eḍahidare
akkigaccu nuccu touḍu modalāgi heccidavu nimiṣadoḷu.
bhaktibandhugaḷellā tamma tamma maṭhada
sayadhānava tandu sāregaṭṭi nīḍuttiddare,
adbhutadārōgaṇeya kaṇḍu,
hariharidu pākaprayatnamaṁ māḍi enutte,
Basavapriya Kūḍalacennasaṅgayyanalli santōṣadalōlāḍuttirdanu
enna paramaguru Basavaṇṇanu.

As they did bring and serve him food
In various ways: in baskets big and small,
In winnowing-fans and pots, he took it all
In most surprising ways.
Whichever way you brought and served,
In that direction he became a mouth
And took it all. Wherever you look,
His mouths are as close together
As seeds you cast for sprouts!
Should you halt for a second, chaff,
Rice-water, broken grain and all
Are all in a second gone!
When all the pious brethren bring
Each from his maṭha food and serve
In a row
Seeing this marvellous feast,

My Supreme teacher Saṅgana Basavaṇṇa,
Saying, Make haste,
Exert yourselves in cooking food,
Revels with joy in
Lord Basavapriya Kūḍalacennasaṅga.

ಬಸವರಾಜದೇವರ ವಚನ:

Basavarājadēvara vacana:

Lord Basavarāja's vacana:

೯

ಅರಿದರಿದು ! ಎನಗಿಂದು ಕಂಗೆ ಮಂಗಳವಾಯಿತ್ತು.
ಒಂದಹುದು, ಒಂದಾಗದೆಂಬ ಭ್ರಮೆಯುವನಲ್ಲ.
  ಬೇಕು ಬೇಡೆಂಬ ಜಂಜಡದವನಲ್ಲ.
ಎಡವಱಿಯದ ನೋಟ,
  ನುಡಿಯ ಸಡಗರವಱತು ಎಡೆಯಾಟ ಕೋಟಲೆಯ ಕಳೆಯ ಬಂದನು.
ನೋಡುವರ ಮನದ ಸುಖದ ಸಾಗರ ನಿಧಿಯನೇನೆಂದುಪಮಿಸುವೆನು ?
ಎನ್ನ ಉಭಯ ಕರ್ಮವ ಕಳೆದು,
  ತನ್ನೊಳಗೆ ಇಂಬಿಟ್ಟುಕೊಳಬಂದನು
  ಕೂಡಲಸಂಗಮದೇವ ಕೃಪಾಮೂರ್ತಿ !

aridaridu! enagindu kaṅge maṅgaḷavāyittu.
ondahudu, ondāgademba bhrameyavanalla.
  bēku bēḍemba janjaḍadavanalla.
eḍavaṟiyada nōṭa,
  nuḍiya saḍagaravaṟatu eḍeyāṭa kōṭaleya kaḷeya bandanu.
nōḍuvara manada sukhadasāgara nidhiyanēnendupamisuvenu?
enna ubhaya karmava kaḷedu,
  tannoḷage iṁbiṭṭukoḷabandanu
  Kūḍalasaṅgamadēva kṛpāmūrti!

O wonder! my eyes
Are blessed today!
Here's no empty choice of this and that,
Here's no ado
Of 'I want this' or 'do not want!'
Shedding all marks of a distracted gaze
And pomp of speech, he's come

To wipe out trouble and turmoil:
How can I tell the seas on seas of joy
Within the hearts of those who watch?
Lord Kūḍala Saṅgama, embodiment of grace,
Has come to raze this curse of Twain
And take me to His heart of hearts!

೧೦

ಮತ್ತಂ,
ಬೆದಱಿಸುವ ಸಂಗ. ಬೆಚ್ಚಿಸುವ ಸಂಗ. ಬಿಚ್ಚಿ ಬಿಸುಡುವ ಸಂಗ.
ತನ್ನ ನಚ್ಚಿ ಮಚ್ಚಿ ಮುಯ್ಯಾಂತೆನೆಂದರೆ ಮೇಳವಾಡುವ ಸಂಗ.
ಬೋಳೈಸುವ ಸಂಗ. [ಆಳಿ]ಗೊಳಿಸುವ ಸಂಗ.
ಇದಿರ ಕೈಯಲಿ ಅಳಲಿಸುವ ಸಂಗ, ಬಳಲಿಸುವ ಸಂಗ.
ಒತ್ತಿ ನೋಡುವ ಸಂಗ ಒಳಹೊಱಗೆನ್ನದೆ.
ಕೂಡಲಸಂಗಮದೇವಯ್ಯಾ,
ಮಡಿವಾಳಮಾಚಿತಂದೆಯ ಕೃಪೆಯುಳ್ಳನ್ನಕ್ಕರ ನಾನಂಜೆನು.

mattaṁ,
bedaṟisuva saṅga. beccisuva saṅga. biccibisuḍuva saṅga.
tanna nacci macci muyyāntenendare mēḷavāḍuva saṅga.
bōḷaisuva saṅga. āḷigoḷisuva saṅga.
idira kaiyali aḷalisuva saṅga, baḷalisuva saṅga.
otti nōḍuva saṅga oḷahoṟagennade.
Kūḍalasaṅgamadēvayyā,
Maḍivāḷamācitandeya kṛpeyuḷḷannakkara nānañjenu.

Again:
He is the God who mazes and alarms;
Who tears you from his clasp to fling;
Who, if you dote on him, will play with you;
The God to court as well as spurn;
He is the God to make to grieve
At other's hands; the God to make you weep;
To put you to the test, without
Distinguishing your In and Out—
Thus, Lord Kūḍala Saṅgama, so long as I have
Father Maḍivāḷa Mācayya's grace,
I do not fear.

ಇದಕ್ಕೆ ಮಡಿವಾಳಯ್ಯಗಳ ಪ್ರತ್ಯುತ್ತರ:

idakke Maḍivāḷayyagaḷa pratyuttara :

Maḍivāḷayya's rejoinder thereto:

೧೧

ಮಾಚಿತಂದೆಯ ಕೈಲಾಗದು, ಹೋಚಿತಂದೆಯ ಕೈಲಾಗದು.
ಇಚ್ಛೆಗೆಟ್ಟಂತೆ ಇರಲಾಗದು, ಅಚ್ಚೊತ್ತಿದಂತೆ ಇರಬೇಕು.
ಅತಿಚೋದ್ಯವಾಗಿ ಎಚ್ಚಱಿಕೆಯ
ಮಚ್ಚುಮಱಹಿಲ್ಲದೆ ಬೆಚ್ಚಂತಿರಬೇಕು.
ಮಚ್ಚು ಪಲ್ಲಟವಾಗದೆ ಆಶ್ಚರ್ಯ ಭಕ್ತಿಭರಿತನಾಗಿರಬೇಕು.
ಕಲಿ ಕರುಳನೊತ್ತಿ ಮುಂದಕ್ಕೆ ಹರಿವನಲ್ಲದೆ,
ಎಡೆಗೋಲನಾಸೆ ಮಾಡುವನೆ ಹೇಳಾ ?
ಕಲಿದೇವರದೇವನ ಅಂಕೆಗೆ ಝಂಕೆಗೆ ಬೆಚ್ಚಿ ಬೆದರಿ ಓಡದಿರು.
ವೀರಗಂಕಣವ ಕಟ್ಟು, ಸಂಗನಬಸವಣ್ಣಾ.

mācitandeya kailāgadu, hōcitandeya kailāgadu.
icchegeṭṭante iralāgadu, accottidante irabēku.
aticōdyavāgi eccaṟikeya
maccumaṟahillade beccantirabēku.
maccu pallaṭavāgade āścarya bhaktibharitanāgirabēku.
kali karuḷanotti mundakke harivanallade,
eḍegōlanāse māḍuvane hēḷā?
Kalidēvaradēvana aṅkege jhaṅkege becci bedari ōḍadiru.
vīragaṅkaṇava kaṭṭu Saṅganabasavaṇṇā.

It's not in Father Mācayya's hands,
Nor any other Father's too!
One cannot be as if the will is lost,
But steadfast, and of purpose firm.
One must be soldered unto it
In mighty wonder all intent,
Beyond emotion or indifference.
One has to brim with wonderful devotion,
Constant in piety.
The warrior, pressing his guts, will rush
Ahead, but does he crave a crutch?

Do you not run, alarmed and scared
By Lord Kalidēva's
Chiding command: tie up the warrior's wristlet,
O Saṅgana Basavaṇṇa!

ಇದಕ್ಕೆ ಬಸವರಾಜದೇವರ ಪ್ರತ್ಯುತ್ತರ:

idakke Basavarājadēvara pratyuttara :

Lord Basavarāja's rejoinder thereto:

೧೨

ಸಯಧಾನ ಸವೆಯಿತ್ತೆಂದು ಬೆದಱಿದೆನಾದರೆ
ನಿಮ್ಮಾಣೆ, ನಿಮ್ಮ ಪ್ರಮಥರಾಣೆ.
ಪಡಿಪದಾರ್ಥಂಗಳು ಅವಸರಕ್ಕೆ ಒದಗದೆ ಇದ್ದಲ್ಲಿ,
ಮನವಳುಕಿ ಬೆದರಿದೆನಾದರೆ ನಿಮ್ಮ ಭಕ್ತರಿಗೆ ಸಲ್ಲೆನು.
ಒಡವೆ ಸವೆದರೆ ಒಡಲನೆ ಸಲಿಸುವೆನು.
ಕಡೆಮುಟ್ಟ ಪೂರೈಸದಿದ್ದೆನಾದರೆ,
ಮಡಿವಾಳಮಾಚಿತಂದೆಯ ಪಾದಸಾಕ್ಷಿಯಾಗಿ
ಕೂಡಲಸಂಗಮದೇವರಿಗೆ ದೂರವಹೆನು.

sayadhāna saveyittendu bedaṟidenādare
nimmāṇe, nimma pramatharāṇe.
paḍipadārthaṅgaḷu avasarakke odagade iddalli,
manavaḷuki bedaridenādare nimma bhaktarige sallenu.
oḍave savedare oḍalane salisuvenu.
kaḍemuṭṭa pūraisadiddenādare,
Maḍivāḷamācitandeya pādasākṣiyāgi
Kūḍalasaṅgamadēvarige dūravahenu.

If I am scared because
The courses may give out,
Thy curse upon me, Thy saints' curse!
If dishes fail to come in time of need
And I am scared, with heart aquake,
I am not worthy of Thy devotees!
When dishes do give out,
I'll offer my body itself.
Should I fail to provide unto the end—
Be witness Father Maḍivāḷa Mācayya's feet—
Let Lord Kūḍala Saṅgama spurn me!

೧೩

ಮತ್ತಂ,

ಅಳವಡಿಸಿದ ಪದಾರ್ಥ ಅರ್ಪಿತಕ್ಕೆ ಸರಿಯಾಯಿತ್ತು.
ಅಳವಡಸದ ಮುನ್ನವೆ ಕೈಕೊಳುತ್ತೈದಾನೆ ಶಿವನು.
ಸಂದ ಪದಾರ್ಥ ಸಲ್ಲಲಿ.
ಕೂಡಲಸಂಗಮದೇವರ ಆರೋಗಣೆಯ ಅವಸರಕ್ಕೆ
ಸಂಚಿತ ಸಯಧಾನವ ತೆಗೆಸಿರೆ ಸೊಡ್ಡಳಬಾಚರಸರೆ.

mattaṁ,

aḷavaḍisida padārtha arpitakke sariyāyittu.
aḷavaḍasada munnave kaikoḷuttaidāne śivanu.
sanda padārtha sallali.
Kūḍalasaṅgamadēvara ārōgaṇeya avasarakke
sañcita sayadhānava tegesire Soḍḍaḷabācarasare.

Again:

The ready courses are enough
For offering; before they're ready,
Śiva has taken them. Let be
The already eaten things.
O Soḍḍaḷa Bācarasa, bring out
The stored provisions for the present need
Of Lord Kūḍala Saṅgama's feast!

ಇದಕ್ಕೆ ಸೊಡ್ಡಳಬಾಚರಸರ ವಚನ:

idakke Soḍḍaḷabācarasara vacana:

Soḍḍaḷa Bācarasa's vacana thereon:

೧೪

ಬನ್ನಿ ಕರಣಿಕರು ನೀವು ಲೆಕ್ಕವ ಹೇಳಿ, ಧಾನ್ಯ ಧಾನ್ಯ ಸಂಚವನು.
ಹೊಸ ಜೋಳ ಅಱುವತ್ತು ಲಕ್ಷ ಖಂಡುಗ.
ಸಾಲಿಧಾನ್ಯ ಮೂವತ್ತು ಲಕ್ಷ ಖಂಡುಗ.
ಗೋದಿ ಹನ್ನೆರಡು ಲಕ್ಷ ಖಂಡುಗ. ಕಡಲೆ ಬತ್ತೀಸ ಲಕ್ಷ ಖಂಡುಗ.
ಹೆಸಱು ಮೂವತ್ತು ಲಕ್ಷ ಖಂಡುಗ.
ನವಣೆ ಹಾರಕ ಬರಗು ಸಾವೆ ಮಾಷಿಗಳೆಂಬ ಧಾನ್ಯಂಗಳು
ಐವತ್ತು ಲಕ್ಷ ಖಂಡುಗ.
ಹೊಸ ಸುಗ್ಗಿ ಈ ವೇಳೆಗೆ ಬಹ ಭತ್ತ ಅಗಣಿತ:
ಮಹಾದಾನಿ ಸೊಡ್ಡಳನ ಆರೋಗಣೆಯ ಅವಸರಕ್ಕೆ
ಅಳವಟ್ಟ ಸಯಧಾನ ವಿನಿತನವಧರಿಸಯ್ಯಾ ಸಂಗನಬಸವಣ್ಣಾ.

banni karaṇikaru nīvu lekkava hēḷi, dhānya dhānya sañcavanu.
hosa jōḷa aṟavattu lakṣa khaṇḍuga.
sālidhānya mūvattu lakṣa khaṇḍuga.
gōdi hanneraḍu lakṣa khaṇḍuga. kaḍale battīsa lakṣa khaṇḍuga.
hesaṟu mūvattu lakṣa khaṇḍuga.
navaṇe hāraka baragu sāve māṣigaḷemba dhānyaṅgaḷu
aivattu lakṣa khaṇḍuga.
hosa suggi ī vēḷege baha bhatta agaṇita.
Mahādāni Soḍḍaḷana ārōgaṇeya avasarakke
aḷavaṭṭa sayadhānavinitanavadharisayyā Saṅganabasavaṇṇā.

Accountants, come and tell
The reckoning of the various grains in stock.
New millet: khandis sixty lakhs;
Rice: thirty lakhs; wheat: twelve;
Black gram: two-and-thirty; thirty, the green,
And fifty, other several grains and beans;
Paddy of the latest harvest season,
Without count or measure . . . For the use
Of Mahādāni Soḍḍaḷa's feast,
Note down–this much of ready articles,
O Saṅgana Basavaṇṇa!

ಬಸವರಾಜದೇವರ ವಚನ:

Basavarājadēvara vacana:

Lord Basavarāja's vacana:

೧೫

ಎಣಿಕೆಗೆ ಬಂದ ಸಯಧಾನ ಕ್ಷಣಕ್ಕೆ ಪಾಕವಾಗಲು,
ಗಣನೆಯಿಲ್ಲದೆ ನೀಡುತ್ತಿರಲು,
ತೋಱದ ಮುನ್ನವೆ ಅರ್ಪಿತವಾದವು.
ಇಂತು ಎಣಿಸಿ ನೋಡಿಹೆನೆಂದರೆ ಮನಕ್ಕೆ ಸಾಧ್ಯವಲ್ಲ.
ಬಯಲು ಬಾಯ್ದೆಗೆದಂತೆ ಉಣುತ್ತಿದ್ದಾನು
ಕೂಡಲಸಂಗಮದೇವನು.

eṇikege banda sayadhāna kṣaṇakke pākavāgalu,
gaṇaneyillade nīḍuttiralu,
tōṟada munnave arpitavādavu.
intu eṇisi nōḍihenendare manakke sādhyavalla.

bayalu bāydegedante uṇuttiddānu
Kūḍalasaṅgamadēvanu.

When articles that come to account
Were in a moment turned to food,
And it was served up without count,
Before it could be seen, it was
Consumed. Thus, should you care
To count, it is beyond the power of mind.
Lord Kūḍala Saṅgama is eating, as if
The heavens had gaped a mouth!

೧೬

ಮತ್ತಂ,

ಖಂಡ ಮಂಡಗೆ ಬೆಲ್ಲ ದ್ರಾಕ್ಷೆ ಸಕ್ಕರೆ
ಸರಿಭಾಗವಾದ ಹೊಸ ಹೆಸಱ ಭಕ್ಷ ಪನ್ನಿ ಖಂಡುಗ.
ಸುಲಿಗಡಲೆಯ ಕಜ್ಜಾಯ ಹದಿನೆಂಟು ಖಂಡುಗ.
ಅಕಾಲ ಮಾವಿನಹಣ್ಣು ಇಪ್ಪತ್ತುನಾಲ್ಕು ಲಕ್ಷ.
ಕಡೆಯಿಲ್ಲದ ಕದಳಿಯ ಫಲ. ಚಾರಬೀಜ ಎಂಭತ್ತು ಖಂಡುಗ.
ತವರಾಜ ಹೆತ್ತತುಪ್ಪ ಹಲಸಿನ ಹಣ್ಣು ಮನ ಮೇರೆ.
ಹಾಲಕೆನೆ ಹದಿನೆಂಟು ಖಂಡುಗ.
ಉತ್ತುತ್ತೆ ಚಿಲುಪಾಲ ಘಟ್ಟಿ ಕಟ್ಟಣೆಯಿಲ್ಲ.
ಮನ ಒಲಿದ ಕಜ್ಜಾಯವನಾರೋಗಣೆಯ ಮಾಡು
ದೇವಾ ಕೂಡಲಸಂಗಮದೇವಾ.

mattaṁ,

khaṇḍa maṇḍage bella drākṣe sakkare
saribhāgavāda hosa hesaṟa bhaksa panni khaṇḍuga.
suligaḍaleya kajjāya hadineṇṭu khaṇḍuga.
akāla māvinahaṇṇu ippattunālku lakṣa.
kaḍeyillada kadaḷiya phala. cārabīja eṁbattu khaṇḍuga.
tavarāja hettatuppa halasinahaṇṇu mana mēre.
hālakene hadineṇṭu khaṇḍuga.
uttutte cilupāla ghaṭṭi kaṭṭaṇeyilla.
mana olida kajjāyavanārōgaṇeya māḍu
dēvā Kūḍalasaṅgamadēvā.

Again:

A candy-sugar pastry-pie—
Raisins and sugar, brown and white,
Mixed equally, a pudding of green gram:
Ten khandis; bread of husked gram,
Eighteen khandis; off-season mangoes
Lakhs four-and twenty; plaintains numberless,
Cashew-nuts, eighty khandis;
Congealed ghee, sugar, jackfruits
As much as you can think;
Khandis eighteen of cream of milk;
No limit to dried dates
Or fresh milk cakes. O Kūḍala Saṅgama Lord,
Do have Thy heart's fill of sweetmeats,
Dear Lord!

೧೭

ಮತ್ತಂ,

ಕಯ್ಯಲ್ಲಿ ಮುಟ್ಟಿದ ಪದಾರ್ಥ ಕೈಯೊಳಗೆ ಐಕ್ಯ.
ಕಂಗಳು ತಾಗಿದ ಪದಾರ್ಥ ಕಂಗಳೊಳೈಕ್ಯ.
ನಾಲಗೆ ತಾಗಿದ ಪದಾರ್ಥ ನಾಲಗೆಯೊಳೈಕ್ಯ.
ನೀಡುತ ಪರಿಚಾರಕರು ಬೇಸತ್ತರಲ್ಲದೆ,
ಆರೋಗಣೆಯು ಮಾಡುವ ದೇವನೆತ್ತಲೆಂದಱಿಯನು.
ಬ್ರಹ್ಮಾಂಡವನೊಡಲೊಳಗಡಗಿಸಿಕೊಂಡು ಬಂದ ದೇವಂಗೆ
ಆರೋಗಣೆಯ ಮಾಡಿಸಿಹೆನೆಂಬ ಅಹಂಕಾರದಲ್ಲಿ ಇದ್ದೆನಾಗಿ,
ನಾನು ಕೆಟ್ಟ ಕೇಡನೇನೆಂಬೆನಯ್ಯಾ ?
ಕೂಡಲಸಂಗಮದೇವರ ತೃಪ್ತಿಯ ತೆಱನ ಬಲ್ಲರೆ
ಹೇಳಾ ಮಡಿವಾಳಮಾಚಯ್ಯಾ.

mattaṁ,

kaiyalli muṭṭida padārtha kaiyoḷage aikya.
kaṅgaḷu tāgida padārtha kaṅgaḷoḷaikya.
nālage tāgida padārtha nālageyoḷaikya.
nīḍuta paricārakaru bēsattarallade,
ārōgaṇeya māḍuva dēvanettalendaṟiyanu.

brahmāṇḍavanoḍaloḷagaḍagisikoṇḍu banda dēvaṅge
ārōgaṇeya māḍisihenemba ahaṁkāradalli iddenāgi,
nānu keṭṭakēḍanēnembenayyā ?
Kūḍalasaṅgamadēvara tṛptiya teṟana ballare
hēḷā Maḍivāḷamācayyā.

Again:

Things touched with the hand
Dissolve in the hand;
Things touched with the eyes
Dissolve in the eyes;
Things touched with the tongue
Dissolve on the tongue;
The lackeys who serve are tired, but then
The feasting God does not know how.
How to describe the loss I bore
Through my conceit that I would entertain
A God come hiding in Himself
The cosmic egg? Tell us,
Maḍivāḷayya, if you know, the way
To satisfy Lord Kūḍala Saṅgama.

ಇದಕ್ಕೆ ಮಡಿವಾಳತಂದೆಗಳ ವಚನ:

idakke Maḍivāḷatandegaḷa vacana:

Father Maḍivāḷa's vacana thereon:

೧೮

ಮರುಳುಗೊಂಡೆಯಲ್ಲಾ ಬಸವಣ್ಣ ! ಪಿತ್ತ ತಲೆಗೇಱಿತ್ತೆ ನಿನಗೆ ?
ನೆಱೆಯಱಿದವರು ಮರುಳಹರೆಂಬ ನಾಣ್ನುಡಿ ದಿಟವಾಯಿತ್ತು.
ಜಗದಗಲಕ್ಕೆ ಮಿಗೆಯಗಲದ ದೇವಂಗೆ
ಕುಱುಹಿನ ಪದಾರ್ಥಂಗಳು ನಿಲುಕಲಾಪವೆ ?
ಎಡೆಯಲೊಬ್ಬರಲಾಗದು ಮಾಡುವರೆ,
ಕಡೆಯಲ್ಲಿ ಕೆಡುವದು ನಿನ್ನ ಭಕ್ತಿ.
ಕಲಿದೇವರದೇವನ ತೃಪ್ತಿಯನು ಚೆನ್ನಬಸವಣ್ಣ ಬಲ್ಲ.
ಕೇಳಿ ನೋಡಾ ಸಂಗನಬಸವಣ್ಣಾ.

maruḷugoṇḍeyallā Basavaṇṇa ! pitta talegēṟitte ninage?
neṟeyaṟidavaru maruḷaharemba nāṇṇuḍi diṭavāyittu.
jagadagalakke migeyagalada dēvaṅge
kuṟuhina padārthaṅgaḷu nilukalāpave?
eḍeyalobbaralāgadu māḍuvare,
kaḍeyalli keḍuvadu ninna bhakti.
Kalidēvaradēvana tṛptiyanu Cennabasavaṇṇa balla.
kēḷi nōḍā Saṅganabasavaṇṇā.

Why, you have gone mad, Basavaṇṇa!
Has the gall mounted to your head?
The adage has come true which says
'The very wise are mad.'
You thought that courses come to form
For a god who's wider than
The wideness of the worlds, would do?
Another cannot, even if he will,
Replace you now:
Your piety shall run to waste at last.
Cennabasavaṇṇa knows
Kalidēva's contentment: ascertain from him,
Saṅgana Basavaṇṇa!

ಇದಕ್ಕೆ ಬಸವರಾಜದೇವರ ವಚನ:
idakke Basavarājadēvara vacana:
Lord Basavarāja's vacana thereon:

೧೯

ಧನಮದದಿಂದ, ಸಯಧಾನಮದದಿಂದ
ಮಾಡಿದೆನೆಂಬುದು ಕಡೆ ಮುಟ್ಟದೆ ಹೋಯಿತ್ತು.
ಹಸ್ತಪರುಷದಿಂದ ಮುಟ್ಟಿ ಮಾಡಿದುದೆಲ್ಲವೂ ಅಂತರಿಸಿತ್ತು.
ದೃಷ್ಟಿಪರುಷದಿಂದ ನೋಡಿ ಮಾಡಿದೆನೆಂಬುದೆಲ್ಲವೂ ಹೆಚ್ಚಿತ್ತು.
ವಾಕ್‌ಪರುಷದಿಂದ ನುಡಿದು ಮಾಡಿದುದೆಲ್ಲವೂ ಸವೆಯಿತ್ತು.
ಮನಪರುಷದಿಂದ ನೆನೆದು ಮಾಡಿದುದೆಲ್ಲವೂ ನಿಂದಿತ್ತು.
ಭಾವಪರುಷದಿಂದ ಭಾವಿಸಿದ ಪದಾರ್ಥವೆಲ್ಲವೂ
ನಿರ್ಭಾವದತ್ತ ವೇಧಿಸದಾಯಿತ್ತು.
ಇಂತೀ ಪಂಚಪರುಷದಿಂದ ಮುಟ್ಟಿ ನೀಡಿದ ಪದಾರ್ಥ
ತೋಱದ ಮುನ್ನ ಅಮಳೋಕ್ಯವಾದವು.
ಕೂಡಲಸಂಗಮದೇವರ ತೃಪ್ತಿಯನಱಿದೆಹೆನೆಂದು ಕೆಟ್ಟೆನು.

dhanamadadinda, sayadhānamadadinda
māḍidenembudu kaḍe muṭṭade hōyittu.
hastaparuṣadinda muṭṭi māḍidudellavū antarisittu.
dṛṣṭiparuṣadinda nōḍi māḍidenembudellavū heccittu.
vākparuṣadinda nuḍidu māḍidudellavū saveyittu.
manaparuṣadinda nenedu māḍidudellavū ninditu.
bhāva paruṣadinda bhāvisida padārthavellavū
nirbhāvadatta vēdhisadāyittu.
intī pancaparuṣadinda muṭṭi nīdida padārtha
tōṟada munna amaḷōkyavādavu.
Kūḍalasaṅgamadēvara tṛptiyanaṟidehenendu keṭṭenu.

To claim, for pride of wealth and eatables,
That one has served, must trip before the goal.
All that was touched with the alchemic hand
Has vanished; all that I made
With the alchemic eye is gone;
All that was done with the alchemic voice
Is wasted away; and what I loved to do
With the alchemic mind has come to a stop.
All articles conceived
With the alchemic will, don't penetrate
Towards will-lessness.
The dishes that were served
With touch of all these alchemies,
Were, ere they could be seen,
Engorged. I am lost,
Thinking I knew the way to satisfy
Lord Kūḍala Saṅgama.

೨೦

ಮತ್ತಂ,
ತೋಱಲಿಲ್ಲದ ಸಿಂಹಾಸನದ ಮೇಲೆ
ಹೇಳಬಾರದ ಘನವು ಬಂದೆಱಗಿದರೆ,
ತೋಱಿ ಮೆಱೆವ ಸಂಗಮನಾಥನು ಎದ್ದು ಹೋದನು.
ನೀಡ ನೀಡ ಸಯಧಾನವೆಲ್ಲವೂ ನಿರ್ವಯಲವಾಯಿತ್ತು.
ಮಾಡ ಮಾಡ ಸಯಧಾನವ ಮರಳಿ ನೋಡಲಿಲ್ಲ.

ಇದೇನ ಹೇಳುವೆ ಅನಿಯಮ ಚರಿತ್ರವನು !
ಇದೆಂತುಪಮಿಸುವೆನು ವಿಸ್ಮಯವನು ?
ಕೂಡಲಸಂಗಮದೇವರ ತೃಪ್ತಿಯ ತೆಱನ ಬಲ್ಲರೆ
ಹೇಳಯ್ಯಾ ಚೆನ್ನಬಸವಣ್ಣಾ.

mattaṁ,

tōṟalillada siṁhāsanada mēle
hēḷabārada ghanavu bandeṟagidare,
tōṟi meṟeva Saṅgamanāthanu eddu hōdanu.
nīḍa nīḍa sayadhānavellavū nirvayalavāyittu.
māḍa māḍa sayadhānava maraḷi nōḍalilla.
idēna hēḷuve aniyama caritravanu!
identupamisuvenu vismayavanu?
Kūḍalasaṅgamadēvara tṛptiya teṟana ballare
hēḷayyā Cennabasavaṇṇā.

Again:

When the inenarrable Absolute
Sat on the invisible throne,
Saṅgamanātha, splendorous to see,
Got up and went away. All things,
As they were served, vanished to nought,
And each successive dish
Was never seen again . . . What shall I say
Of this uncommon happening?
What way describe this miracle?
Tell us, Cennabasavaṇṇa, if you know,
The way to satisfy
Lord Kūḍala Saṅgama:

ಇಂತು ಬಸವರಾಜದೇವರು ಪ್ರಭುದೇವರಿಗೆ ತೃಪ್ತಿಯ ಮಾಡುವ ಬುದ್ಧಿ ಯಾವುದೆಂದು ಕೇಳಲು, ಅದಕ್ಕೆ ಚಿಕ್ಕದಣ್ಣಾಯಕರ ಪ್ರತ್ಯುತ್ತರ:

intu Basavarājadēvaru Prabhudēvarige tṛptiya māḍuva buddhī yāvudendu kēḷalu, adakke Cikkadaṇṇāyakara pratyuttara:

When Lord Basavarāja thus asked what is the art of satisfying Prabhudēva, thereon Cennabasavaṇṇa's vacana:

೨೧

ಅನಂತ ವರುಷದ ಹಿರಿಯರೆಂದೆಂಬೆನೆ ?
ಎನ್ನೆನು, ಅವರು ಭೂಭಾರಕರಾಗಿ.
ಏಳು ವರುಷದ ಹಿರಿಯ ಚೀಲಾಳ.
ಹನ್ನೆರಡು ವರುಷದ ಹಿರಿಯಳು ಮಹಾದೇವಿಯಕ್ಕ.
ಅಂಡಜ ಪಿಂಡಜ ಮೀನಜರೆಂಬವರೆಲ್ಲಾ ಅಂದಂದಿನ ಬಾಲಕರು.
ನಿಮಗೆ ಬುದ್ಧಿಯ ಹೇಳುವರೆ
ಎನಗೆ ಬುದ್ಧಿಯಿಲ್ಲ ಕೂಡಲಚೆನ್ನಸಂಗಮದೇವಾ.

ananta varuṣada hiriyarendembene?
ennenu, avaru bhūbhārakarāgi.
ēḷu varuṣada hiriya cīlāḷa.
hanneraḍu varuṣada hiriyaḷu Mahādēviyakka.
aṇḍaja piṇḍaja mīnajarembavarellā andandina bālakaru.
nimage buddhiya hēḷuvare
enage buddhiyilla Kūḍalacennasaṅgamadēvā.

Can I call them great who live
Infinite years? I cannot say, because
They are a burden to the earth.
Cīlāḷa was great though seven years old;
Mahādēvi, too, though twelve.
All creatures born of egg or embryo or fish
Are children of their day.
I have no skill to tell what is the art,
O Kūḍala Saṅgama Lord!

೨೨

ಮತ್ತಂ,

ಪಂಚಾಶತಕೋಟಿ ವಿಸ್ತೀರ್ಣಭೂಮಂಡಲ ಮೊದಲಾದ
ನವಖಂಡ ಪೃಥ್ವಿಯೆಲ್ಲವು ಒಂದು ಭುವನದೊಳಗಡಗಿತ್ತು.
ಇಂತಹ ಈರೇಳು ಭುವನವನೊಳಕೊಂಡ ಮಹಾಘನಕ್ಕೆ
ಸಯಧಾನವ ನೀಡಿಹೆನೆಂಬ ಸ್ವಾಮಿಯ ಮರುಳತನವನೇನೆಂಬೆನು ?
ಕೂಡಲಚೆನ್ನಸಂಗಮದೇವರ ತೃಪ್ತಿಯ ತೆಱನನೊಲಿವರೆ,
ನೀವು ಬೋನ, ನಾನು ಪದಾರ್ಥ.
ಇದರಿಂದಂ ಮೇಲೇನೂ ಘನವಿಲ್ಲ ಕಾಣಾ ಸಂಗನಬಸವಣ್ಣಾ.

mattaṁ,

pañcāśatakōṭi vistīrṇabhūmaṇḍala modalāda
navakhaṇḍa pṛthviyellavu ondu bhuvanadoḷagaḍagittu.
intaha īrēḷu bhuvanavanoḷakoṇḍa mahāghanakke
sayadhānava nīḍihenemba svāmiya maruḷatanavanēnembenu?
Kūḍalacennasaṅgamadēvara tṛptiya teṟananolivare,
nīvu bōna, nānu padārtha.
idaṟindaṁ mēlēnu ghanavilla kāṇā Saṅganabasavaṇṇa.

Again:

The nine-zoned earth, yea, the round world
Five-hundred billions wide, is all hid
In this one universe . . . What shall I say
About the madness of His Mastership
Presuming to serve food to the Absolute
Who has incorporated in Himself
Fourteen such worlds?
If you would have the key
To Kūḍala Cennasaṅga's content,
It's you should be the main dish,
The side-dish I . . . There's nought
Higher than this—mark you,
Saṅgana Basavaṇṇa!

ಇದಕ್ಕೆ ಬಸವರಾಜದೇವರ ವಚನ:

idakke Basavarājadēvara vacana:

Lord Basavarāja's vacana thereon:

೨೩

ಎನ್ನ ಕಾಯದ ಕತ್ತಲೆ ಹಿಂಗಿತ್ತು ಚೆನ್ನಬಸವಣ್ಣಾ ಇಂದಿನಲ್ಲಿ
ಎನ್ನ ತನು ಮನ ಧನದ ಲೋಭವಳಿದು
ತಳವೆಳಗಾಯಿತ್ತು ಚೆನ್ನಬಸವಣ್ಣಾ, ಇಂದಿನಲ್ಲಿ.
ಎನ್ನನೆಡೆಗೊಂಡ ಅಹಂಕಾರ
ನಿರ್ವಯಲವಾಯಿತ್ತು ಚೆನ್ನಬಸವಣ್ಣಾ, ಇಂದಿನಲ್ಲಿ.
ಕೂಡಲಸಂಗಮದೇವರ ತೃಪ್ತಿಯ ತೆಱನ
ನೀನು ತೋಱಿದೆಯಾಗಿ ನಾನು ಬದುಕಿದೆನು ಕಾಣಾ ಚೆನ್ನಬಸವಣ್ಣಾ.

enna kāyada kattale hiṅgittu Cennabasavaṇṇā, indinalli.
enna tanu mana dhanada lōbhavaḷidu
taḷaveḷagāyittu Cennabasavaṇṇā, indinalli.
ennaneḍegoṇḍa ahaṁkāra
nirvayalavāyittu Cennabasavaṇṇā, indinalli.
Kūḍalasaṅgamadēvara tṛptiya teṟana
nīnu tōṟideyāgi nānu badukidenu kāṇā, Cennabasavaṇṇā.

My body's darkness is dispelled
Today, Cennabasavaṇṇa; my lust
Of body, mind and wealth
Was routed in amaze, today.
The pride that had possessed me vanished quite,
Today, Cennabasavaṇṇa,
As you have shown the way to satisfy
Lord Kūḍala Saṅgama, I have been saved—
Mark that, Cennabasavaṇṇa!

ಇದಕ್ಕೆ ಚೆನ್ನಬಸವರಾಜದೇವರ ವಚನ:

idakke Cennabasavarājadēvara vacana:

Lord Cennabasavarāja's vacana thereon:

೨೪

ಎನ್ನ ಹೊಗಳಲಿಕೆ ನಿಮಗೆ ತೆಱಹಿಲ್ಲ.
tanubayalu niravayadoḷagaḍagittu.
manabayalu niravayadoḷagaḍagittu.
bhāvabayalu niravayadoḷagaḍagittu.
bayalu bayalu berasi bayaleyāyittu.
Kūḍalacennasaṅgayyanemba nuḍiyaḍagittu.

Again:

The spaceless body's lost in Unity,
The spaceless mind is lost in Unity,
The spaceless will is lost in Unity,
The void, absorbing void, is now reduced
To Void; the very word
Lord Kūḍala Cennasaṅga has vanished too!

ಮಡಿವಾಳಯ್ಯಗಳ ಪರಾಮರಿಕೆ:

Maḍivāḷayyagaḷa parāmarike:

Maḍivāla's prophecy:

೫೫

ನಿತ್ಯ ಸತ್ಯದೊಳಗಡಗಿ, ಸತ್ಯವಾಚಾರದೊಳಗಡಗಿ,
ಆಚಾರ ಅನುಭಾವದೊಳಗಡಗಿ,
ಅನುಭಾವ ಜ್ಞಾನದೊಳಗಡಗಿ,
ಮಹಾಜ್ಞಾನ ಮನೋಲಯದೊಳಗಡಗಿ,
ಮನೋಲಯವೆ ಮಹಾಘನವಾಯಿತ್ತು.
ಕಲಿದೇವರದೇವಾ, ನಿಮ್ಮ ನಿಜೈಕ್ಯವು.

nitya satyadoḷagaḍagi, satyavācāradoḷagaḍagi,
ācāra anubhāvadoḷagaḍagi,
anubhāva jñānadoḷagaḍagi,
mahājñāna manōlayadoḷagaḍagi,
manōlayave mahāghanavāyittu.
Kalidēvaradēvā, nimma nijaikyavu.

The daily life being lost in Truth,
The Truth in Discipline, and this
Lost in Experience; Experience lost
In Knowledge, and this lost
In full cessation of the Mind, the ceased Mind
Itself became the Ultimate—
That is, O Lord Kalidēva,
True union with Thy self!

೫೬

ಮತ್ತಂ,

ತನು ನಷ್ಟ, ಮನ ನಷ್ಟ, ನೆನಹು ನಷ್ಟ,
ಭಾವ ನಷ್ಟ, ಜ್ಞಾನ ನಷ್ಟ,
ಇಂತೀ ಪಂಚನಷ್ಟದೊಳಗೆ ನಾ ನಷ್ಟವಾದೆನು.
ಆ ನಷ್ಟದೊಳಗೆ ನೀನು ನಷ್ಟವಾದೆ.
ಕಲಿದೇವರದೇವನೆಂಬ ನುಡಿ 'ನಿಶ್ಶಬ್ದಂ ಬ್ರಹ್ಮಮುಚ್ಯತೇ'

mattaṁ,

tanu naṣṭa, mana naṣṭa, nenahu naṣṭa
bhāva naṣṭa, jñāna naṣṭa,
intī pañcanaṣṭadoḷage nā naṣṭavādenu.
ā naṣṭadōḷage nīnu naṣṭavāde.
kalidēvaradēvanemba nuḍi 'niśśabdaṁ brahmamucyatē'.

Again:

The ceasing of the body, mind,
Of memory, of knowledge and of will—
In the cessation of these five
I've ceased to be; in this cessation
You've ceased to be. The word which says
Lord Kalidēva is
The 'Silence called Brahma'.

೫೭

ಮತ್ತಂ,

ಅಱಿವಿನೊಳಗಣ ಕುಱುಹು ಮಱಹಿಂಗೆ ಬೀಜ.
ಕುಱುಹಿನ ಮಱಹನಱಿವು ನುಂಗಿ,
ಘನಕ್ಕೆ ಘನ ವೇದ್ಯವಾದ ಬಳಿಕ,
ನಿತ್ಯಪರಿಪೂರ್ಣ ತಾನೆ
ಕಲಿದೇವರದೇವನು ವಾಙ್ಮನಕ್ಕಗೋಚರನು.

mattaṁ,

aṟivinoḷagaṇa kuṟuhu maṟahiṅge bīja,
kuṟuhina maṟahanaṟivu nuṅgi,
ghanakke ghana vēdyavāda baḷika,
nityaparipūrṇa tāne
Kalidēvaradēvanu vāṅgmanakkagōcaranu.

Again:

The sign of knowledge is the seed
Of ignorance. When knowledge swallows up
The unawareness linked with symbol, and
The Greater than the Great is realised,
Lord Kalidēva is Himself
Eternal, perfect, beyond thought and speech.

೫೮

ಮತ್ತಂ,

ಎನ್ನ ಆಯತ ಅವಧಾನಗೆಟ್ಟಿತ್ತಯ್ಯಾ.
ಎನ್ನ ಸ್ವಾಯತ ಸಂದಳಿಯಿತ್ತಯ್ಯಾ.
ಎನ್ನ ಸಮಾಧಾನ ತರಹರವಾಯಿತ್ತಯ್ಯಾ.
ಎನ್ನ ಅಱಿವು ನಿಜದಲ್ಲಿ ನಿಃಪತಿಯಾಯಿತ್ತಯ್ಯಾ.
ಕಲಿದೇವರದೇವಯ್ಯಾ,
ನಿಮ್ಮಲ್ಲಿ ಶಬ್ದಮುಗ್ಧವಾಗಿದ್ದೆನು.

mattaṁ,

enna āyata avadhānageṭṭittayyā.
enna svāyata sandaḷiyittayyā.
enna samādhāna taraharavāyittayyā.
enna aṟivu nijadalli niḥpatiyāyittayyā.
Kalidēvaradēvayyā,
nimmalli śabdamugdhavāgiddenu.

Again:

The consciousness of what has come
Has perished, and the breach
In that which is mine own is healed.
My quietness has grown to peace.
My consciousness has found
Its consummation in Reality.
O Lord Kalidēva, my words
Have turned to silence, Lord, in Thee!

೫೯

ಮತ್ತಂ,
ತನುವಳಿಯಿತ್ತು. ಮನವಳಿಯಿತ್ತು.
ಭಾವವಳಿಯಿತ್ತು. ಬಯಕೆಯಳಿಯಿತ್ತು.
ನಿಜವೆಂಬುದಳಿಯಿತ್ತು.
ನಾಮ ಸೀಮೆ ಬಯಲಲ್ಲಿ
ಕಲಿದೇವರದೇವನಲ್ಲಿ ಬೆರಸಿ ಬೇಱಿಲ್ಲದಿರ್ದೆನು.

mattaṁ,
tanuvaḷiyittu. manavaḷiyittu.
bhāvavaḷiyittu. bayakeyaḷīyittu.
nijaveṁbudaḷiyittu.
nāma sīme bayalalli
Kalidēvaradēvanalli berasi bēṟilladirdenu.

Again:
Mind, body, will, desire,
Have perished; even Reality
Has perished. I dwell
Integrally united with the Void
That has no name or bourne,
In Lord Kalidēva.

೬೦

ಮತ್ತಂ,
ತ್ರಿವಿಧ ಮಧ್ಯಶೇಷ, ತ್ರಿಕೂಟಬೆಳಸು,
ದೇವಮಧ್ಯದ ಪರಿಯಾಣ.
ನಿರ್ಭಾವ ಮಧ್ಯದ ಧಾನ್ಯವನೆ ತಂದು,
ರತ್ನಾಭರಣದ ಭಾಜನದಲ್ಲಿ ಇವನೆಲ್ಲವನು ಸಂಹರಿಸುವೆ.
ಹಿಂದ ನೋಡಿಯು ಆಱುವ ಕಾಣೆ.
ಮುಂದ ನೋಡಿಯು ಆರುವ ಕಾಣೆ.
ಮಧ್ಯದಲ್ಲಿ ನೋಡುವೈಸಕ್ಕರ,
ನಾ ಮಾಡಿದ ಭಕ್ತಿಯ ಬೇಡಲೆಂದು ಒಬ್ಬ ಜಂಗಮ ಬಂದರೆ ಕೊಟ್ಟು,
ಆ ಭಕ್ತಿಯ ಶೇಷಪ್ರಸಾದದಿಂದ ಶುದ್ಧನಾದೆನು ಕಾಣಾ
ಕಲಿದೇವರದೇವಯ್ಯಾ.

mattim,
trividha madhyadaśēṣa, trikūṭa beḷasu,
dēvamadhyada pariyāṇa,
nirbhāva madhyada dhānyavane tandu,
ratnābharaṇada bhājanadalli ivanellavanu saṁharisuve.
hinda nōḍiyu āruva kāṇe.
munda nōḍiyu āruva kāṇe.
madhyadalli nōḍuvaisakkara,
nā māḍida bhaktiya bēḍalendu obba jaṅgama bandare koṭṭu,
ā bhaktiya śēṣaprasādadinda śuddhanādenu kāṇā
Kalidēvaradēvayyā.

Again:

The remnant at the centre of the three,
The harvest of the triple union,
A platter from the middle of the God,
Grain from the midst of will-lessness—
All these I brought and threw together in
A jewel-decorated pot.
Looking behind, I see no one,
Looking ahead, I see no one;
If while I'm looking at the centre,
A Jaṅgama came to beg
The pious service I have done, I gave
And through the grace of what remained
I was made Pure. Mark that,
O Lord Kalidēva!

ಮತ್ತಂ ಬಹುರೂಪ ಚೌಡಯ್ಯಗಳ ಸಮರಸದ ವಚನ :

mattaṁ Bahurūpa Couḍayyagaḷa samarasada vacana:

Again: The vacana about the consubstantial union of Bahurūpa Couḍayya:

೬೧

ಷಡುಚಕ್ರವಳಯದೊಳಗೆ ನಾನಾಡುವೆ ಬಹುರೂಪ.
ಭ್ರೂಮಧ್ಯಮಂಡಲ ಹೃದಯಕಮಲಮಧ್ಯದ
ಅಬ್ಜಸ್ವರದ ಮಣಿಪೂರಕದ ಮೇಲೆ ನಾನಾಡುವೆ ಬಹುರೂಪ.
ಉರಿಯುಂಡ ಕರ್ಪುರದಂತೆ ನಾನಾಡುವೆ ಬಹುರೂಪ.
ಬಯಲ ಬೆರಸಿದ ಮರೀಚಿಯಂತೆ ನಾನಾಡುವೆ ಬಹುರೂಪ.
ರೇಕಣ್ಣಪ್ರಿಯನಾಗಿನಾಥ ಬಸವಣ್ಣನಿಂದ ಬದುಕಿದೆನು.

ṣaḍucakravaḷayadoḷage nānāḍuve bahurūpa.
bhrūmadhyamaṇḍala hṛdayakamalamadhyada
abjasvarada maṇipūrakada mēle nānāḍuve bahurūpa.
uriyuṇḍa karpuradante nānāḍuve bahurūpa.
bayala berasida marīciyante nānāḍuve bahurūpa.
rēkaṇṇapriyanāginātha Basavaṇṇaninda badukidenu.

I play my many roles within the sphere
Of the six centres; I play them
Above the middle of the eyebrows,
And at the centre of the lotus of the heart,
Above the conch's sound,
Above the Maṇipūraka; I play them as
Camphor swallowed by fire; I play
As a mirage merges and is lost in void.
O Rēkaṇṇapriya Nāginātha,
Thanks to Basavaṇṇa, I have been saved!

೬೨

ನಿಷ್ಪತಿ ಬಂದು ಒಳಕೊಂಡಲ್ಲಿ,
ನಿರಾಶ್ರಯ ಬಂದು ಹೊದಕೆಯಾದಲ್ಲಿ ನಿರಾಲಂಬವಾಯಿತ್ತಯ್ಯಾ.
ಎನ್ನ ಬಹುರೂಪು ನಿರುಹರಣಮಧ್ಯದಲ್ಲಿ ಆಡುತ್ತಿದ್ದುದಲ್ಲಾ.
ಎನ್ನ ಬಹುರೂಪಕ್ಕೆ ಪ್ರಾಣಲಿಂಗ ಬಸವಣ್ಣ ಕಾಣಾ.
ರೇಕಣ್ಣಪ್ರಿಯನಾಗಿನಾಥ ಬಸವಣ್ಣನಿಂದ ಬದುಕಿದೆನು.

niṣpati bandu oḷakoṇḍalli,
nirāśraya bandu hodakeyādalli nirālaṁbavāyittayyā.
enna bahurūpu niruharaṇamadhyadalli āḍuttiddudallā.
enna bahurūpakke prāṇaliṅga Basavaṇṇa kāṇā.
Rēkaṇṇapriyanāginātha Basavaṇṇaninda badukidenu.

What time Perfection came and entered me,
What time the Homeless came and sheltered me,
Nothing sustained me any more.
I played, didn't I, my many roles
Amid the rootlessness.
Behold, Basavaṇṇa is Prāṇaliṅga to
My various roles.
Rēkaṇṇapriya Nāginātha,
Thanks to Basavaṇṇa, I have been saved!

೬೩

ಮತ್ತಂ,

ಇಂದು ಬಂದ ಬಹುರೂಪವ ನೋಡಿರಯ್ಯಾ.
ಗತಿಯ ಹೊದ್ದದೆ, ಮತಿಯ ಹೊದ್ದದೆ,
ಸ್ಥಿತಿಯ ಹೊದ್ದದೆ, ಸ್ಥಾನವ ಹೊದ್ದದೆ,
ಐವರು ಕಟ್ಟಿದ ಕಟ್ಟಳೆಯ ಮೀಱಿ
ನಾನಾಡುವೆ ಬಹುರೂಪ.
ರೇಕಣ್ಣಪ್ರಿಯನಾಗಿನಾಥ ಬಸವಣ್ಣನಿಂದ ಬದುಕಿದೆನು.

mattaṁ,

indu banda bahurūpava nōḍirayyā.
gatiya hoddade, matiya hoddade,
sthitiya hoddade, sthānava hoddade,
aivaru kaṭṭida kaṭṭaḷeya mīṟi
nānāḍuve bahurūpa.
Rēkaṇṇapriyanāgināthа Basavaṇṇaninda badukidenu.

Again:

Look at the roles that this day brings
Caring for neither sense nor motion,
Nor state nor place, and trespassing
The rules the five have fashioned fast,
I play my many roles.
Rēkaṇṇapriya Nāginātha,
Thanks to Basavaṇṇa, I have been saved!

೬೪

ಮತ್ತಂ,

ಇನ್ನಾಡುವೆ ಜಂಗಮರೂಪ ಅಲ್ಲಮನಂತೆ.
ಆಡುವೆ ಬಹುರೂಪ ಅಜಗಣ್ಣನಂತೆ.
ಆಡುವೆ ಬಹುರೂಪ ಮುಖವಾಡದಯ್ಯಗಳಂತೆ.
ಆಡುವೆ ಬಹುರೂಪ ಪುರುಷಾಂಗಣ ಮೆಟ್ಟಿ,
ಆಡುವೆ ಬಹುರೂಪ.
ರೇಕಣ್ಣಪ್ರಿಯನಾಗಿನಾಥ ಬಸವಣ್ಣನಿಂದ
ಬದುಕಿತ್ತೀ ಲೋಕವೆಲ್ಲಾ !

mattaṁ,

innāḍuve jaṅgamarūpa Allamanante,
āḍuve bahurūpa Ajagaṇṇanante,
āḍuve bahurūpa mukhavāḍadayyagaḷante.
āḍuve bahurūpa puruṣāṅgaṇa meṭṭi,
āḍuve bahurūpa.
Rekaṇṇapriyanāginātha Basavaṇṇaninda
badukittī lōkavellā!

Again:

As Allama hence I play
The role of Jaṅgama;
As Ajagaṇṇa I play my role;
As Reverend Sirs beneath their masks
I play my many roles;
I play my roles
Strutting about the courtyard, yea,
My many roles I play.
Rēkaṇṇapriya Nāginātha,
Thanks to Basavaṇṇa, the entire world
Has all been saved!

ಮತ್ತಂ, ೬೫

ಶೂನ್ಯ ಸನ್ನಹಿತವಾದಲ್ಲಿ, ಶೂನ್ಯ ಪದಾರ್ಥವಾದಲ್ಲಿ,
ಬಸವನ ಪ್ರಸಾದವೆಂದು ಬಸವನ ಕೂಡೆ ಆಡುತ್ತಿರ್ದೆ.
ರೇಕಣ್ಣಪ್ರಿಯನಾಗಿನಾಥ ಬಸವಣ್ಣನಿಂದ
ಬದುಕಿತ್ತೀ ಲೋಕವೆಲ್ಲಾ !

mattaṁ,

śūnya sannahitavādalli, śūnya padārthavādalli,
Basavana prasādavendu Basavana kūḍe āḍuttirde.
Rēkaṇṇapriyanāginātha Basavaṇṇaninda
badukittī lōkavellā!

Again:

With Void possessing me, with Void become
An object, I have been playing
Together with Basavaṇṇa, taking it
To be Basavaṇṇa's grace.
Rēkaṇṇapriya Nāginātha,
Thanks to Basavaṇṇa, the entire world
Has all been saved!

೬೬

ಮತ್ತಂ,
ಶುದ್ಧವೆ ಜವನಿಕೆಯಾಗಿ, ಸಿದ್ಧವೆ ಸಿಂಹಾಸನವಾಗಿ,
ಪ್ರಸಿದ್ಧದ ಹೊದಕೆಯ ಹೊದ್ದು ನಾನಾಡುತ್ತಿರ್ದೆ ಬಹುರೂಪ.
ಶುದ್ಧವೋಡಿದಲ್ಲಿ
ಇದ್ದ ನಿಜ ನಾಸ್ತಿಯಾಯಿತ್ತೆನ್ನ ಬಹುರೂಪು.
ಸಿದ್ಧವೆಂಬ ಸಿಂಹಾಸನವಳಿದಲ್ಲಿ
ಬುದ್ಧಿಗೆಟ್ಟಾಡುತ್ತಿದ್ದುದಯ್ಯಾ ಎನ್ನ ಬಹುರೂಪು.
ಪ್ರಸಿದ್ಧದ ಹೊದಕೆ ಹಱಿದಲ್ಲಿ
ನಾ ಬಸವನ ಕೂಡೆ ಆಡುತ್ತಿರ್ದೆ ಕಾಣಾ.
ರೇಕಣ್ಣಪ್ರಿಯನಾಗಿನಾಥಾ,
ಬಸವಣ್ಣನಿಂದ ಬದುಕಿತ್ತೀ ಲೋಕವೆಲ್ಲಾ !

mattaṁ,
śuddhave javanikeyāgi, siddhave siṁhāsanavāgi,
prasiddhada hodakeya hoddu nānāḍuttirde bahurūpa.
śuddhavōḍidalli
idda nija nāstiyāyittenna bahurūpu.
siddhaveṁba siṁhāsanavaḷidalli
buddhigeṭṭāḍuttiddudayyā enna bahurūpu.
prasiddhada hodake haṟidalli
nā Basavana kūḍe āḍuttirde kāṇā.
Rēkaṇṇapriyanāgināthā,
Basavaṇṇaninda badukittī lōkavellā!

Again:
The Pure for curtain, the Perfect for the throne,
And dressed up in the Most Perfect's attire
I have been playing many roles.
When the Pure ran away, my role, that is
The real me has ceased to be.
What time the throne of the Perfect perished,
I played my role
In mad abandon; and when
The dress of the Most Perfect was torn,
I played, look you, with Basavaṇṇa.
Rēkaṇṇapriya Nāgināthā,
Thanks to Basavaṇṇa, the entire world
Has all been saved!

೬೭

ಮತ್ತಂ,

ಸರದೊಳಗೆ ಸರಗಟ್ಟಿ ಸರ ಹಱಿದವ ನಾನಯ್ಯಾ.
ಮಹದಲ್ಲಿ ಮನೆಗಟ್ಟಿ ಮನೆ ಬೆಂದವ ನಾನಯ್ಯಾ.
ಕಿಚ್ಚಿನೊಳಗೆ ಕಿಚ್ಚನೊಟ್ಟಿ ಕಾದವ ನಾನಯ್ಯಾ.
ಆ ಕಿಚ್ಚಿನೊಳಗೆ ಬಿದ್ದು ಉರಿದವ ನಾನಯ್ಯಾ,
ಬಸವಣ್ಣನು ಎನ್ನ ಬಹುರೂಪಕ್ಕೆ ಸೂತ್ರಧಾರಿಯಾದ.
ಸೂಕ್ಷ್ಮನಾಗಿ ಹೋದೆ ನಾ. ಬಸವಣ್ಣನಿಂದೆ ಕೆಟ್ಟೆ ಕಾಣಾ.
ರೇಕಣ್ಣಪ್ರಿಯನಾಗಿನಾಥಾ,
ಬಸವಣ್ಣನಿಂದ ಬದುಕಿತ್ತೀ ಲೋಕವೆಲ್ಲಾ !

mattaṁ,

saradoḷage saragaṭṭi sara haṟidava nānayyā.
mahadalli manegaṭṭi mane bendava nānayyā.
kiccinoḷage kiccanoṭṭi kādava nānayyā.
ā kiccinoḷage biddu uridava nānayyā.
Basavaṇṇanu enna bahurūpakke sūtradhāriyāda.
sūkṣmanāgi hōde nā, Basavaṇṇaninde keṭṭē kāṇā.
Rēkaṇṇapriyanāginātha,
Basavaṇṇaninda badukittī lōkavellā!

Again:

I'm one, Sir, who have torn
The string that was looped in the string;
Having built me a home in the Supreme,
I burnt my house; by piling fire on fire,
I scorched myself; and falling in that fire,
I burnt myself. Basavaṇṇa was the one
Who held the strings for this my role.
Thanks to Basavaṇṇa, I have grown
Subtle, I have perished, look!
Rēkaṇṇapriya Nāginātha,
Thanks to Basavaṇṇa, the entire world
Has all been saved!

ಹಡಪದಪ್ಪಣ್ಣಗಳ ಪರಾಮರಿಕೆ:

Haḍapadappaṇṇagaḷa parāmarike:

Haḍapada Appaṇṇa's prophecy:

೬೮

ಎನ್ನ ತನು ನಿಮ್ಮ ಸೇವೆಯಲ್ಲಿ ಸವೆದು,
ಎನ್ನ ಮನ ನಿಮ್ಮ ನೆನಹಿನಲ್ಲಿ ಸವೆದು,
ಎನ್ನ ಅಱಿವು ನಿಮ್ಮ ಘನದೊಳಗೆ ಸವೆದು ನಿಶ್ಚಲ ನಿಜೈಕ್ಯವಾಗಿ
ಬಸವಪ್ರಿಯ ಕೂಡಲಚೆನ್ನಸಂಗಯ್ಯಾ,
ನೀನಾನೆಂಬುದು ಏನಾಯಿತೆಂದಱಿಯೆ.

enna tanu nimma sēveyalli savedu,
enna mana nimma nenahinalli savedu,
enna aṟivu nimma ghanadoḷage savedu niścala nijaikyavāgi
Basavapriya Kūḍalacennasaṅgayyā,
nīnānembudu ēnāyitendaṟiye.

I've worn my body out in serving Thee;
I've worn my mind out for Thy love;
I've worn my knowledge out in praise of Thee.
And now, because I've merged
Within the still Reality,
Basavapriya Kūḍala Cennasaṅga,
I know not what befell
To what is known as Thou and I!

೬೯

ಮತ್ತಂ,
ಎನ್ನ ಆಚಾರ ವಿಚಾರ ಬಸವಣ್ಣಂಗರ್ಪಿತವಾದವು.
ಎನ್ನ ಅವಧಾನ ಅನುಭಾವ ಬಸವಣ್ಣಂಗರ್ಪಿತವಾದವು.
ಎನ್ನ ಸರ್ವಾಚಾರಸಂಪತ್ತು ಬಸವಣ್ಣನಲ್ಲಿ ವೇದ್ಯವಾಯಿತ್ತು.
ಬಸವಪ್ರಿಯ ಕೂಡಲಚೆನ್ನಸಂಗಮದೇವರಲ್ಲಿ
ನಿಜನಿವಾಸಿಯಾಗಿರ್ದೆನು.

mattaṁ,
enna ācāra vicāra Basavaṇṇaṅgarpitavādavu.
enna avadhāna anubhāva Basavaṇṇaṅgarpitavādavu.
enna sarvācārasampattu Basavaṇṇanalli vēdyavāyittu.
Basavapriya Kūḍalacennasaṅgamadēvaralli
nijanivāsiyāgirdenu.

Again:

My deeds and thoughts are made
An offering unto Basavaṇṇa;
My zeal and my experience too;
The hoarded heap of all my acts
Is all his own to have...
In Basavapriya Kūḍala Cennasaṅga,
I am a dweller in Reality.

೭೦

ಮತ್ತಂ,

ಹರಿದಂ ಹತ್ತಿ ಮುಟ್ಟಲಿಲ್ಲ. ಮುಟ್ಟಿ ಮರಳಿ ಇಳಿಯಲಿಲ್ಲ.
ಬೆರಸಿಹೆನೆಂದು ನೆನೆಯಲಿಲ್ಲ.
ಬಸವಪ್ರಿಯ ಕೂಡಲಚೆನ್ನಸಂಗಯ್ಯನಲ್ಲಿ
ಶಬ್ದಕ್ಕೆ ಇಂಬಿಲ್ಲದಿದ್ದೆನು.

mattaṁ,

haridu hatti muṭṭalilla. muṭṭi maraḷi iḷiyalilla.
berasihenendu neneyalilla.
Basavapriya Kūḍalacennasaṅgayyanalli
śabdakke iṁbilladiddenu.

Again:

I did not reach to Him
By chase and steep ascent;
Nor, having reached, have I
Come down;
I never thought of Him in order to unite...
Basavapriya Kūḍala Cennasaṅga
I lived beyond all speech.

ಸೊಡ್ಡಳ ಬಾಚರಸರ ಪರಾಮರಿಕೆ:

Soḍḍaḷa Bācarasara parāmarike:

Soḍḍaḷa Bācarasa's prophecy:

೭೧

ಎನ್ನ ಕಾಯವೆಂಬ ಸಿಂಹಾಸನದಲ್ಲಿ
ಪ್ರಾಣವೆಂಬ ಲಿಂಗವ ಮೂರ್ತಿಗೊಳಿಸಿ,
ಧ್ಯಾನವೆಂಬ ಹಸ್ತದಲ್ಲಿ ಮುಟ್ಟಿ ಪೂಜಿಸುತ್ತಿರಲು,
ಮೆಲ್ಲಮೆಲ್ಲನೆ ಸುತ್ತುಮುತ್ತಿದ ಸಂಸಾರ ಬಯಲ ಬೆರಸಿ,
ನೀನಾನೆಂಬ ಭೇದವಳಿದು,
ಮಹಾದಾನಿಸೊಡ್ಡಳನಲ್ಲಿ ನಿಜಲಿಂಗೈಕ್ಯವಾಯಿತ್ತು.

enna kāyaveṁba siṁhāsanadalli
prāṇaveṁba liṅgava mūrtigoḷisi,
dhyānaveṁba hastadalli muṭṭi pūjisuttiralu,
mella mellane suttumuttida saṁsāra bayala berasi,
nīnāneṁba bhēdavaḷidu,
Mahādānisoḍḍaḷanalli nijaliṅgaikyavāyittu.

When I installed
The Prāṇaliṅga on the Body's throne
And worshipped with the touch
Of Meditation's hand, by slow degrees
The world that enveloped me
Dissolved into the void, perished
The difference of Thou and I,
And union with the Real Liṅga occurred
In Mahādāni Soḍḍaḷa.

೭೨

ಮತ್ತಂ,
ಅಂಗ ಲಿಂಗಕ್ಕೆ ಗೂಡಾಯಿತ್ತು. ಲಿಂಗ ಅಂಗಕ್ಕೆ ಗೂಡಾಯಿತ್ತು.
ಅಂಗ ಲಿಂಗ ಸಂಗವೆಂಬ ಸಂದಳಿದು ನಿಜಲಿಂಗೈಕ್ಯವಾಯಿತ್ತು.
ಭಾವ ನಿರ್ಭಾವ ನಿಷ್ಪತಿಯಲ್ಲಿ,
ಮಹಾದಾನಿಸೊಡ್ಡಳಂಗೆ ಸರ್ವನಿರ್ವಾಣವಾಯಿತ್ತು.

mattaṁ,
aṅga liṅgakke gūḍāyittu, liṅga aṅgakke gūḍāyittu.
aṅga liṅga saṅgaveṁba sandaḷidu nijaliṅgaikyavāyittu.
bhāva nirbhāva niṣpatiyalli,
Mahādānisoḍḍaḷaṅge sarvanirvāṇavāyittu.

Again:

Aṅga is now a home to Liṅga,
Liṅga a home to aṅga;
The notion of these two
And of their union, too,
Having now perished, lo!
Union with the ultimate Reality
Has come to be;
With the extinction of the will
As well as will-lessness,
It is the absolute Void
For Mahādāni Soḍḍaḷa.

೭೩

ಮತ್ತಂ,

ಎನ್ನ ಅಷ್ಟವಿಧಾರ್ಚನೆ ಷೋಡಶೋಪಚಾರ ಹಂಗುಹಱಿದು,
ಸೋಹಂ ಸೋಹಂ ಎನುತ್ತಿದ್ದಿತ್ತು.
ಸೋಹಂ ಎಂಬ ಸುಖದ ಸವಿಯ
ಮಹಾದಾನಿ ಸೊಡ್ಡಳ ಆರೋಗಣೆಯ ಮಾಡಿ
ನಿಜ ನಿವಾಸಿಯಾದ ಕಾರಣ,
ನಾನು ನಾಮಸೀಮೆಗೆಟ್ಟೆನು.

mattaṁ,

enna aṣṭavidhārcane ṣōḍaśōpacāra haṅguhaṟidu,
sōhaṁ sōhaṁ enuttiddittu.
sōhaṁ eṁba sukhada saviya
Mahādānisoḍḍaḷa ārōgaṇeya māḍi
nija nivāsiyāda kāraṇa,
nānu nāmasīmegeṭṭēnu.

Again:

I have torn off all bonds
Of eightfold worship and
Sixteenfold discipline,
And keep on saying, 'I am He',
Because I have feasted on
The sweetness of the joy of 'I am He'
And made my home in the Reality,
I've shed all name and bound.

ಮತ್ತಂ ಅಕ್ಕನಾಗಾಯಿಗಳ ಪರವಶ:
mattaṁ Akkanāgāyigaḷa paravaśa:
Again: Akkanāgāyi's transcendence:

೭೪

ಎನ್ನ ತನು ಚೆನ್ನಬಸವಣ್ಣನ ಬಯಲ ಬೆರಸಿತ್ತು.
ಎನ್ನ ಮನ ಸಂಗನಬಸವಣ್ಣನ ನಿಜಪದವ ಬೆರಸಿತ್ತು.
ಎನ್ನ ಪ್ರಾಣ ಪ್ರಭುದೇವರ ಬಯಲ ಬೆರಸಿತ್ತು.
ಬಸವಪ್ರಿಯ ಚೆನ್ನಸಂಗನ ಶರಣರು ಒಬ್ಬರೊಂದ ಹಂಚಿಕೊಂಡ ಕಾರಣ,
ಎನಗೇನೂ ಇಲ್ಲದೆ ಮಹಾಘನದಲ್ಲಿ ನಿಜನಿವಾಸಿಯಾಗಿದ್ದೆನು.

enna tanu Cennabasavaṇṇana bayala berasittu
enna mana Saṅganabasavaṇṇana nijapadava berasittu.
enna prāṇa Prabhudēvara bayala berasittu.
Basavapriya Cennasaṅgana śaraṇaru obbaronda hañcikoṇḍa kāraṇa
enagēnū illade mahāghanadalli nijanivāsiyāgiddenu.

My body is made one
With Cennabasavaṇṇa's void;
My mind has been made one
With Saṅgana Basavaṇṇa's ultimate state;
My soul has been made one
With Prabhudēva's void.
Because the śaraṇas
Of Basavapriya Cennasaṅga
Have dealt me, part and part,
Among themselves, I am at last
A dweller in the Supreme,
And nought besides is left for me!

೭೫

ಮತ್ತಂ,
ಎನ್ನ ಕುಲಸೂತಕವನಳಿದ ಬಸವಣ್ಣ.
ಎನ್ನ ಛಲಸೂತಕವ ಕಳೆದ ಬಸವಣ್ಣ.
ಎನ್ನ ತನುಸೂತಕವ ಕಳೆದ ಬಸವಣ್ಣ.
ಎನ್ನ ಮನಸೂತಕವ ಕಳೆದ ಬಸವಣ್ಣ.
ಎನ್ನ ಪ್ರಾಣಸೂತಕವ ಕಳೆದ ಬಸವಣ್ಣ.
ಎನ್ನ ಭಾವಸೂತಕವ ಕಳೆದ ಬಸವಣ್ಣ.

ಎನ್ನಱಿವು ಮಱಹಿನ ಸಂದ ಬಿಡಿಸಿದ ಬಸವಣ್ಣ.
ಎನ್ನ ತನ್ನಲ್ಲಿ ಇಂಬಿಟ್ಟುಕೊಂಡ ಬಸವಣ್ಣ.
ತನ್ನ ಎನ್ನಲ್ಲಿ ಇಂಬಿಟ್ಟುಕೊಂಡ ಬಸವಣ್ಣ.
ನಿಜ ನಿರ್ವಯಲ ಸಮಾಧಿಯ
ನಿಜವಾಸದ ಬಾಗಿಲ ತೋಱಿದ ಬಸವಣ್ಣ.
ಬಸವಣ್ಣಪ್ರಿಯ ಚೆನ್ನಸಂಗಯ್ಯನ ಹೃದಯಕಮಲದಲ್ಲಿ
ಸಯವಾಗಿರಿಸಿದ ಎನ್ನ ತಂದೆ ಸಂಗನಬಸವಣ್ಣನು.

mattaṁ,
enna kulasūtakavanaḷida Basavaṇṇa.
enna chalasūtakava kaḷeda Basavaṇṇa.
enna tanusūtakava kaḷeda Basavaṇṇa.
enna manasūtakava kaḷeda Basavaṇṇa.
enna prāṇasūtakava kaḷeda Basavaṇṇa.
enna bhāvasūtakava kaḷeda Basavaṇṇa.
ennaṟivu maṟahina sanda biḍisida Basavaṇṇa.
enna tannalli iṁbiṭṭukoṇḍa Basavaṇṇa.
tanna ennalli iṁbiṭṭukoṇḍa Basavaṇṇa.
nija nirvayala samādhiya
nijavāsada bāgila tōṟida Basavaṇṇa.
Basavaṇṇapriya Cennasaṅgayyana hṛdayakamaladalli
sayavāgirisida enna tande Saṅganabasavaṇṇanu.

Again:

Basavaṇṇa has destroyed
My taint of caste;
Basavaṇṇa has effaced
My taint of pride;
Basavaṇṇa has effaced
My taint of body and mind,
My taint of breath and will...
Basavaṇṇa has removed the gap
Between awareness and ignorance.
Basavaṇṇa has harboured me
Within himself; and he himself has found
A lodgment within me.
Basavaṇṇa has shown the gate
Into the true abode
Of spaceless trance.

Father Basavaṇṇa has set me up
Within the lotus of the heart
Of Lord Basavapriya Cennasaṅga.

ಮೋಳಿಗೆ ಮಾರಯ್ಯಗಳ ವಚನ:

Mōḷigemārayyagaḷa vacana:
Mōḷige Mārayya's vacana:

೭೬

ಎನ್ನಱಿವು ಮಱಹು ಬಸವಣ್ಣಂಗರ್ಪಿತ.
ಎನ್ನ ಆಚಾರವಿಚಾರ ಬಸವಣ್ಣಂಗರ್ಪಿತ.
ಎನ್ನ ಭಾವನಿರ್ಭಾವ ಬಸವಣ್ಣಂಗರ್ಪಿತ.
ಎನ್ನಂತರಂಗ ಬಹಿರಂಗ ಬಸವಣ್ಣಂಗರ್ಪಿತ.
ನೀನಾನೆಂಬುದು ಬಸವಣ್ಣಂಗರ್ಪಿತ.
ಇಂತು ಎನ್ನನೆ ಬಸವಣ್ಣಂಗೆ ನಿವೇದಿಸಿ,
ಆವವಲಂಬವೂ ಇಲ್ಲದೆ, ನಿರಾಲಂಬದಲ್ಲಿ ನಿಜನಿವಾಸಿಯಾದೆನು
ಕಾಣಾ ನಿಃಕಳಂಕಮಲ್ಲಿಕಾರ್ಜುನಾ.

ennaṟivu maṟahu Basavaṇṇaṅgarpita.
enna ācāravicāra Basavaṇṇaṅgarpita.
enna bhāvanirbhāva Basavaṇṇaṅgarpita.
ennantaraṅga bahiraṅga Basavaṇṇaṅgarpita.
nīnānembudu Basavaṇṇaṅgarpita.
intu ennane Basavaṇṇaṅge nivēdisi,
āvavalambavū illade, nirālambadalli nijanivāsiyādenu
kāṇā Niḥkaḷaṅkamallikārjunā.

My consciousness and ignorance
Are offered to Basavaṇṇa;
My actions and my thoughts
Are offered unto him, and so
My will and will-lessness,
My inner and my outer self,
And what is known as 'I' and 'Thou'.
Thus, offering myself to Basavaṇṇa,
I have, without support,
Become a denizen
In the Unsupportedness;
Mark it, Niḥkaḷaṅkamallikārjuna!

೭೭

ಮತ್ತಂ,

'ಬ' ಎಂಬಲ್ಲಿ ಬಳಿಸಂದೆನು.

'ಸ' ಎಂಬಲ್ಲಿ ಸಯವಾದೆನು.

'ವ' ಎಂಬಲ್ಲಿ ನಿರವಯವಾದೆನು.

ನಿಃಕಳಂಕ ಮಲ್ಲಿಕಾರ್ಜುನಾ,

ಬಸವಣ್ಣನ ನಿಜಪದದಲ್ಲಿ ಸಂದಿಲ್ಲದೆ ಬೆರಸಿ,

ನಮೋ ನಮೋ ಎಂಬ ಹಂಗಳಿದುಳಿದೆನು.

mattaṁ,

'ba' emballi baḷisandenu.

'sa' emballi sayavādenu.

'va' emballi niravayavādenu.

Niḥkaḷaṅkamallikārjunā,

Basavaṇṇana nijapadadalli sandillade berasi,

namō namō emba haṅgaliduḷidenu.

Again:

In saying 'ba' I drew anear;
In saying 'sa' became the Self;
In saying 'va' I am now
The integral Absolute...
O Niḥkaḷaṅkamallikārjuna,
By being one, integrally,
Within Basavaṇṇa's ultimate state,
I have no longer need to say,
'Hail, O hail!

ಡೋಹರ ಕಕ್ಕಯ್ಯಗಳ ಪರವಶ:

Ḍōhara Kakkayyagaḷa paravaśa:

Ḍōhara Kakkayya's transcendence:

೭೮

ಎನ್ನ ಕಷ್ಟಕುಲದ ಸೂತಕ

ನಿಮ್ಮ ಹಸ್ತ ಮುಟ್ಟಿದಲ್ಲಿ ಬಯಲಾಯಿತ್ತು.

ಶುಕ್ಲಶೋಣಿತದಿಂದಾದ ಸೂತಕ

ಲಿಂಗ ಮುಟ್ಟಲೊಡನೆ ಬಯಲಾಯಿತ್ತು.

ತಟ್ಟಿದ ಮುಟ್ಟಿದ ಸುಖಂಗಳ ಲಿಂಗಮುಖಕ್ಕೆ ಅರ್ಪಿಸಿದೆನಾಗಿ,

ಎನ್ನ ಪಂಚೇಂದ್ರಿಯಂಗಳು ಬಯಲಾಯಿತ್ತು.

ಎನ್ನಂತರಂಗದಲ್ಲಿ ಜ್ಞಾನಜ್ಯೋತಿ ಎಡೆಗೊಂಡಿತ್ತಾಗಿ,
ಒಳಗೂ ಬಯಲಾಯಿತ್ತು.
ಸಂಸಾರಸಂಗವಾದ ಅವಸ್ಥೆ
ಮೀಱಿದ ಕ್ರೀಯಲ್ಲಿ ತರಹರವಾಯಿತ್ತಾಗಿ,
ಬಹಿರಂಗ ಬಯಲಾಯಿತ್ತು.
ಅಭಿನವಮಲ್ಲಿಕಾರ್ಜುನಾ,
ನಿಮ್ಮ ಮುಟ್ಟಿದ ಕಾರಣ ನಾನು ಬಯಲಾದೆನು.

enna kaṣṭakulada sūtaka
nimma hasta muṭṭidalli bayalāyittu.
śuklaśōṇitadindāda sūtaka
liṅga muṭṭaloḍane bayalāyittu.
taṭṭida muṭṭida sukhaṅgaḷa liṅgamukhakke arpisidenāgi,
enna pañcēndriyaṅgaḷu bayalāyittu.
ennantaraṅgadalli jñānajyōti eḍegoṇḍittāgi,
oḷagū bayalāyittu.
saṁsārasaṅgavāda avasthe
mīṟida krīyalli taraharavāyittāgi,
bahiraṅga bayalāyittu.
Abhinavamallikārjunā,
nimma muṭṭida kāraṇa nānu bayalādenu.

The taint of my base caste
At contact of thy hand is gone!
The taint from semen and from blood
At Liṅga's touch is gone!
Because I've offered unto Liṅga's mouth
The joys that I have touched and felt,
All my five senses are as nought!
Because the light of knowledge took
A seat within my heart,
My inner being is gone!
Because there's stillness in the acts
Transcending the state of worldliness,
My outer self is gone!
O Abhinavamallikārjuna, because
I've touched Thee, my sense of 'I'
Is gone!

೭೯

ಮತ್ತಂ,

ನೆನೆಯಲಱಿಯೆ, ನಿರ್ಧರಿಸಲರಿಯೆ,
ಮನವಿಲ್ಲಾಗಿ.
ಭಾವಿಸಲಱಿಯೆ, ಬಳಸಲಱಿಯೆ,
ಭಾವ ನಿರ್ಭಾವವಾಯಿತ್ತಾಗಿ.
ಧ್ಯಾನ ಮೌನವನಱಿಯೆ,
ಧ್ಯಾನಾತೀತ ತಾನೆಯಾಯಿತ್ತಾಗಿ.
ಜ್ಞಾತೃ ಜ್ಞಾನ ಜ್ಞೇಯಂಗಳೆಲ್ಲವೂ ಮೀಱಿ,
ಅಭಿನವಮಲ್ಲಿಕಾರ್ಜುನನಲ್ಲಿ ಪರಮಸುಖಿಯಾದೆನು.

mattaṁ,

neneyalaṟiye, nirdharisalariye,
manavillāgi.
bhāvisalaṟiye baḷasalaṟiye,
bhāva nirbhāvavāyittāgi.
dhyāna mounavanaṟiye,
dhyānātīta tāneyāyittāgi.
jñātṛ jñāna jñēyaṅgaḷellavū mīṟi,
Abhinavamallīkārjunanalli paramasukhiyādenu.

Again:

Because my mind is not, I do know
To recollect or to resolve;
Because my will is turned to will-lessness,
I cannot think or make converse;
Because I've got beyond
Meditation, I have forgot
Both meditation and silence too;
Having gone past
The knower, knowledge and the known,
In Abhinavamallikārjuna I taste
The highest bliss!

ಇಂತು ಎಲ್ಲಾ ಗಣಂಗಳು ತಮ್ಮ ತಮ್ಮ ನಿಜಪದದ ನಿಲುಕಡೆಯ ಹೇಳಿದ ತದನಂತರದಲ್ಲಿ, ಚೆನ್ನಬಸವರಾಜದೇವರು ಬಿನ್ನೈಸುವ ಅವಸಾನದ ಸೂಚನೆಯ ಪದಂಗಳು:

intu ellā gaṇaṅgaḷu tamma tamma nijapadada nilukaḍeya hēḷida tadanantaradalli, Cennabasavarājdēvaru binnaisuva avasānada sūcaneya padaṅgaḷu:

Thus the songs, suggesting the end, recited by Lord Cennabasavarāja after all the saints had told of the consummation of their several ultimate states:

ರಾಗ: ಶ್ರೀರಾಗ

ಏನ ಹೇಳುವೆನಕ್ಕ ಕನಸುವ
ಮಾನವರಿಗೆ ತಿಳಿವಡೆ ಸಾಧ್ಯತರವಲ್ಲ ‖ ಪಲ್ಲವಿ ‖

ನಾನೊಂದು ಕನಸ ಕಂಡೆನು ಕೇಳೆಲೆಯಕ್ಕ
ಮಾನದೊಳಗೆ ಒಂದಾನೆಯಾ
ಆನೆ ನಿಂದುರಿದು ಮಾವತಿಗ ಮಾನವ ಪೊಕ್ಕು
ಕಾನನದೊಳು ತೊಳಲ್ವುದ ಕಂಡೆ ‖ ೧ ‖

ದಾರಿವಿಡಿದು ಬರೆ ಬರೆ ಸರವರ ಕಂಡೆ
ಸರವರದೊಳಗೊಂದು ಕಮಲವಾ
ಸರವರ ಕಮಲಕರ್ಣಿಕೆಯ ಮಧ್ಯದೊಳೊಂದು
ಉರಿಯ ಬೀಜವ ಕಂಡೆನಿದಿರೊಳು ‖ ೨ ‖

ಉರಿಯ ಬೀಜವ ಸರಗೊಳಿಸಿ ಕೊರಳೊಳಿಟ್ಟು
ಪರಪೂರರಸ ಸಮ್ಮುಖಿಕಾಗಿ
ಬರುತ ಬರುತ ಬರೆ ಬರೆ ಘನದುರಿಯೆದ್ದು
ನೆರೆದ ಮನೆಯ ಹುಲ್ಲುರಿದುದಾ ‖ ೩ ‖

ನೆಲೆಗೆಟ್ಟು ಶೂನ್ಯದ ಸುಖವ ಬಯಸಿ ಬಂದು
ಹಲವು ಬಣ್ಣದ ನೂಲ ಹುರಿಮಾಡಿ
ತಲೆ ಕಾವಲೊಳಮೃತದ ಸೇದೆಯ ಬಾವಿ
ತೊಲಗಲೀಯದು ಜಾಲೆಗಾರನಾ ‖ ೪ ‖

ಬಟ್ಟಬಯಲ ತುಟ್ಟತುದಿಯ ಕೊನೆಯ ಮೇಲೆ
ಉಟ್ಟುದ ತೊಱೆದು ನಿಂದುದ ಕಂಡೆ
ಮುಟ್ಟಿ ಕೂಡಲಚೆನ್ನಸಂಗನ ಶರಣರು
ಹುಟ್ಟ ಮುಱಿದು ಹೋಹುದ ಕಂಡೆ ‖ ೫ ‖

ಪದ ಸಹ ವಚನ: ೬೪

rāga: śrīrāga

ēna hēḷuvenakka kanasuva
mānavarige tiḷivaḍe sādhyataravalla //*pallavi*//

nānondu kanasa kaṇḍenu kēḷeleyakka
mānadoḷage ondāneyā
āne ninduridu māvatiga mānava pokku
kānanadoḷu toḷalvuda kaṇḍe 1

dāriviḍidu bare bare saravara kaṇḍe
saravaradoḷagondu kamalavā
saravara kamalakarnikeya madhyadoḷondu
uriya bījava kaṇḍenidiroḷu 2

uriya bījava saragoḷisi koraḷoḷiṭṭu
paravūrarasa sammukhakāgi
baruta baruta bare bare ghanaduriyeddu
nereda maneya hulluridudā 3

nelegeṭṭu śūnyada sukhava bayasi bandu
halavu baṇṇada nūla hurimāḍi
tale kāvaloḷamṛtada sēdeya bāvi
tolagalīyadu jālegāranā 4

baṭṭabayala tuṭṭatudiya koneya mēle
uṭṭuda toṟeda ninduda kaṇḍe
muṭṭi Kūḍalacennasaṅgana śaraṇaru
huṭṭa muṟidu hōhuda kaṇḍe 5

O sister, what shall I say
Of the dream that is impossible (Refrain)
For human beings to understand?

Hear, sister, I dreamed a dream:
There was an elephant
Within a bushel; and he
Burnt as he stood; I saw

The driver, entering
The bushel, and wandering
Within a wood.

Walking along a path
I saw a lake;
And in that lake I saw
A lotus; and at the centre
Of that lake-lotus shell,
Before me, a seed of fire.

I strung those seeds of fire
And hung them round my neck;
The monarch of another place
Standing face to face,
A large fire, as he came, flared up
And the high stacked hay
In the house, burnt up.

As transcending his ground, he came
Yearning for the Void's delight
Twisting a many-coloured yarn,
The nectar drawing-well that lies
Within the channel in the head
Did not allow
The fisherman to quit.

Upon the absolute Void's
Sharp point of points, I saw
Them standing stripped of clothes;
Kūḍala Cennasaṅga's śaraṇas I saw,
Having attained their last desire,
Breaking their births and go!

ಆ ಪ್ರಸ್ತಾವದೊಳು ಪ್ರಭುದೇವರು ತಮ್ಮ ಪರಾಮರಿಕೆಯ ಹೇಳುವ ವಚನ:

ā prastāvadoḷu Prabhudēvaru tamma parāmarikeya hēḷuva vacana:

The vacana wherein Prabhudēva makes a prophecy about himself:

೮೫

ಮನದ ಕೊನೆಯ ಮೊನೆಯ ಮೇಲೆ
ನೆನೆದ ನೆನಹು ಜನನ ಮರಣವ ನಿಲಿಸಿ,
ಜ್ಞಾನಜ್ಯೋತಿಯ ಉದಯ ಭಾನುಕೋಟಿಯ ಮೀಱಿ,
ಸ್ವಾನುಭಾವದ ಉದಯ
ಜ್ಞಾನಶೂನ್ಯದಲಡಗಿದ ಘನವನೇನೆಂಬೆನು ಗುಹೇಶ್ವರಾ!

manada koneya mēle
neneda nenahu janana maraṇava nilisi,
jñānajyōtiya udaya bhānukōṭiya mīṟi,
svānubhāvada udaya
jñānaśūnyadalaḍagida ghanavanēnembenu Guhēśvarā.

What shall I say, Guhēśvara,
Of the Glory that absorbs
In spaceless Light the dawn of self-experience,
When the awareness at the sharpest point of mind
Has stayed both birth and death
And knowledge, dawning, transcends
A myriad suns?

೮೬

ಮತ್ತಂ,
ನಿರ್ವಿಕಲ್ಪವೆಂಬ ನಿಜದೊಳಗಯ್ಯಾ,
ನಿರಹಂಭಾವದಲ್ಲಿ ನಾನಿದ್ದೆನಯ್ಯಾ.
ನೋಡಿಹೆನೆಂದರೆ ನೋಡಲಿಲ್ಲ. ಕೇಳಿಹೆನೆಂದರೆ ಕೇಳಲಿಲ್ಲ.
ಘನನಿರಂಜನದ ಬೆಳಗಿಂದಲಾದುದನೇನೆಂಬೆನು ಗುಹೇಶ್ವರಾ !

mattaṁ,
nirvikalpavemba nijadoḷagayyā,
nirahambhāvadalli nāniddenayyā.
nōḍihenendare nōḍalilla. kēḷihenendare kēḷalilla.
ghananirañjanada beḷagindalādudanēnembenu Guhēśvarā!

Again:

In Reality beyond conceit,
Beyond self-consciousness,
O Lord, I have been.
There is nothing here to see,
There is nothing here to hear.
How shall I describe
O Guhēśvara,
One who is made
Of the splendour that proceeds
From the vast Immaculate?

೮೭

ಮತ್ತಂ,

ಘನವ ಕಂಡು ಮನವು ಗ್ರಹಿಸಿತ್ತು.

ಕಂಡು ಕಂಡು ಮನ ಮಹಾಘನವಾಯಿತ್ತು.

ತತ್ತಲ್ಲೀಯವಾಯಿತ್ತು. ತದುಗತವಾಯಿತ್ತು.

ಶಬ್ದ ಮುಗ್ಧವಾದುದನೇನೆಂಬೆ ಗುಹೇಶ್ವರಾ!

mattaṁ,

ghanava kaṇḍu manavu grahisittu.

kaṇḍu kaṇḍu mana mahāghanavāyittu.

tattallīyavāyittu. tadugatavāyittu.

śabda mugdhavādudanēnembe Guhēśvarā!

Again:

At sight of Majesty, my mind seized it;
And as it gazed and gazed, my mind
Was turned into the Absolute,
It was dissolved in It until
It was a part of It.
Guhēśvara, how shall I describe
The word transformed to silentness?

೮೮

ಮತ್ತಂ,

ಬಯಲ ಬೆಱಗಿನ ಸುಖದ ಸವಿಯ,

ಬೆಱಗಲ್ಲದೆ ಕಾಣೆ.

ಕಾಣೆನೆಂಬ ನುಡಿಗೆಡೆಯ ಕಾಣೆ.

ಕುಱುಹಳಿದು ಅಱಿವ ನೆಱೆಯಱಿದು,

ಬೆರಸಿದೆನೆಂಬ ಬಱುನುಡಿಯ ನುಡಿಗೆ

ನಾಚಿದೆನಯ್ಯಾ ಗುಹೇಶ್ವರಾ!

mattam,

bayala beṟagina sukhada saviya,

beṟagallade kāṇe.

kāṇenemba nuḍigēḍeya kāṇe.

kuṟuhaḷidu aṟiva neṟeyaṟidu,

berasidenemba baṟunuḍiya nuḍige

nācidenayyā Guhēśvarā!

Again:

Not without ecstasy I taste
The sweetness of the wondrous Void!
I cannot find the word to say
'I do not see' – Guhēśvara Lord,
Now that I fully know
The knowledge that can do without the sign,
I blush to use the hollow word that says
'I am absorbed'.

೮೯

ಉಪಮೆ ಉಪಮಿಸಲಱಿಯದೆ ಉಪಮಾತೀತವೆನುತ್ತಿದ್ದಿತ್ತು.
ಅಱಿವು ಅಱಿವಿನ ಮಱೆಯಲ್ಲಿದ್ದುದನಱಿಯದೆ,
ಅಱಿವು ಪರಾಪರವೆನುತ್ತಿದ್ದಿತ್ತು.
ಧ್ಯಾನ ಧ್ಯಾನಿಸಲಱಿಯದೆ
ಧ್ಯಾನರೂಪಾತೀತನೆಂದು ತದ್‌ಧ್ಯಾನಗೊಂಡಿತ್ತು.
ಜ್ಞಾತೃ ಜ್ಞಾನ ಜ್ಞೇಯಕ್ಕೆ ಇನ್ನಾವ ಜ್ಞಾನವು ?
ವೇದ ವಿಜ್ಞಾನವೆಂದುದಾಗಿ,
ತತ್ತ್ವಮಸಿ ವಾಕ್ಯಂಗಳೆಲ್ಲವು ಹುಸಿಯಾಗಿ ಹೋದವು.
ಸಚ್ಚಿದಾನಂದವೆಂದುದಾಗಿ,
ದ್ವೈತಾದ್ವೈತ ಬ್ರಹ್ಮವಾದಿಗಳೆಲ್ಲರೂ ಸಂಹಾರವಾಗಿ ಹೋದರು.
ಬಂದೂ ಬಾರದು, ಹೊಂದಿಯೂ ಹೊಂದದು.
ನಿಂದ ನಿರಾಳ ಗುಹೇಶ್ವರ !

upame upamisalaṟiyade upamātītavenuttiddittu.
aṟivu aṟivina maṟeyalliddudanaṟiyade,
aṟivu parāparavenuttiddittu.
dhyāna dhyānisalaṟiyade
dhyānarūpātītanendu taddhyānagoṇḍittu.
jñātṛ jñāna jñēyakke innāva jñānavu?
vēda vijñānavendudāgi,
tattvamasi vākyaṅgaḷellavu husiyāgi hōdavu.
saccidānandavendudāgi,
dvaitādvaita brahmavādigaḷellarū saṁhāravāgi hōdaru.
bandū bāradu, hondiyū hondadu.
ninda nirāḷa Guhēśvara!

Comparison, powerless to compare,
Declared it was beyond compare;
Awareness, unaware
That it was screened from knowledge
Declared it higher than the high'st;
And meditation not knowing to meditate
Was lost in meditating itself
Since he transcended
All efforts of meditation.
What other knowledge can there be
To knower, knowledge and the known?
The 'That Thou art' and other sentences
The Veda regards as knowledge,
Are turned to falsehood and are gone.
All who expound
Brahma—the dualists and the non-dualists—
As Being, Bliss and Consciousness
Are routed and destroyed.
He comes and does not come;
He joins and does not join;
Guhēśvara is one
The absolute tranquillity.

೯೦

ಮತ್ತಂ,
ಗುರುವಿನಿಂದಾದ ಕಾಯವ ಬೆರಸಿ,
ಗುರುವನಱಿಯದಾದೆನಯ್ಯಾ.
ಲಿಂಗದಿಂದಾದ ಜೀವವ ಬೆರಸಿ,
ಲಿಂಗವನಱಿಯದಾದೆನಯ್ಯಾ.
ಜಂಗಮದಿಂದಾದ ಮನವಬೆರಸಿ,
ಜಂಗಮುವನಱಿಯದಾದೆನಯ್ಯಾ.
ಈ ತ್ರಿವಿಧಭಕ್ತಿಯನಱುಹಿಸಿ ಕೊಟ್ಟ ಸಂಗನಬಸವಣ್ಣನ ಬೆರಸಿ,
ನೀನೂ ನಾನೂ ಬದುಕಿದೆವು ಕಾಣಾ ಗುಹೇಶ್ವರಾ!

mattaṁ,

guruvinindāda kāyava berasi,
guruvanaṟiyadādenayyā.
liṅgadindāda jīvava berasi,
liṅgavanaṟiyadādenayyā.
jaṅgamadindāda manava berasi,
jaṅgamavanaṟiyadādenayyā.
ī trividhabhaktiyanaṟuhisikoṭṭa Saṅganabasavaṇṇana berasi,
nīnū nānū badukidevu kāṇā Guhēśvarā!

Again:

Being one with the body, which the Guru had
Transformed, Guru is nothing now to me;
Being one with the soul, which Liṅga had
Transformed, Liṅga is nothing now to me;
Being one with the mind, which Jaṅgama had
Transformed, Jaṅgama is nothing now to me.
Being one with Saṅgana Basavaṇṇa,
Who taught me this triple piety,
We have been saved—both you and I:
Mark you, Guhēśvara!

೯೧

ಮತ್ತಂ,

ನಾನೆಂಬುದು ಪ್ರಮಾಣ. ನೀನೆಂಬುದು ಪ್ರಮಾಣ.
ಸ್ವಯವೆಂಬುದು ಪ್ರಮಾಣ. ಪರವೆಂಬುದು ಪ್ರಮಾಣ.
ಪ್ರಮಾಣವೆಂಬುದು ಪ್ರಮಾಣ.
ಗುಹೇಶ್ವರನೆಂಬುದು ಅಪ್ರಮಾಣ.

mattaṁ,

nānēṁbudu pramāṇa. nīneṁbudu pramāṇa.
svayaveṁbudu pramāṇa. paraveṁbudu pramāṇa.
pramāṇaveṁbudu pramāṇa.
Guhēśvaraneṁbudu apramāṇa.

Again:

'I' is a limitation;
'Thou' is a limitation;
The Self is limitation;

The supreme is limitation;
To speak of limitation itself
Is limitation. Guhēśvara alone
Is limitless.

ಇಂತು ಪ್ರಭುದೇವರು ತಮ್ಮ ಪರಾಮರಿಕೆಯ ಹೇಳಿ, ತಾವು ಲಿಂಗೈಕ್ಯವಾಗುವ ಅವಸ್ಥೆಯ ನಿರೂಪಿಸಿದ ವಚನ:

intu Prabhudēvaru tamma parāmarikeya hēḷi, tāvu liṅgaikya-vāguva avastheya nirūpisida vacana:

The Vacana wherein Prabhudēva, having thus uttered his prophecy, describes the state of his union with Liṅga:

೯೨

ಇಂದುವಿನ ಬೆಳಗಿನ ಸಂಪತ್ತನಿಂಬುಗೊಂಬ
ಚಕೋರನ ಧ್ಯಾನವೆಂತಿಪ್ಪುದು,
ಅಂತಾಗಿದ್ದೆ ನಾನು.
ಮಾತೆ ವಿಯೋಗವಾದ ಶಿಶುವಿನ ಧ್ಯಾನವೆಂತಿರ್ಪುದು,
ಅಂತಾಗಿದ್ದೆ ನಾನು.
ಬಂಧನದಲ್ಲಿ ಸಿಕ್ಕಿದ ಫಣಿಯ ಧ್ಯಾನವೆಂತಿರ್ಪುದು,
ಅಂತಾಗಿರ್ದೆ ನಾನು.
ರಾತ್ರಿಯೊಳ್ ಮುಗಿದ ಪದ್ಮದ ಭ್ರಮರನ ಧ್ಯಾನವೆಂತಿರ್ಪುದು,
ಅಂತಾಗಿದ್ದೆ ನಾನು.
ಸ್ವಪ್ನದಲ್ಲಿ ದುಷ್ಟಕೇಸರಿಯ ಧ್ಯಾನದ ಮದಹಸ್ತಿಯೆಂತಿರ್ಪುದು,
ಅಂತಾಗಿದ್ದೆ ನಾನು.
ನೋಟವಗಲಿದ ನೇಹದ ಧ್ಯಾನವೆಂತಿರ್ಪುದು,
ಅಂತಾಗಿದ್ದೆ ನಾನು.
ಬ್ರಹ್ಮಪಾಶ ವಿಷ್ಣು ಮಾಯುವನತಿಗಳೆದ ಛಲದಲ್ಲಿ
ಏನೆಂದಱಿಯದಿದ್ದೆ ನಾನು.
ಗುಹೇಶ್ವರಲಿಂಗಾ,
ಸಂಗನಬಸವಣ್ಣನೊಳಗೆ ಲೀಯವಹ ಭರದಲ್ಲಿ
ಏನೆಂದಱಿಯದಿರ್ದೆ ನಾನು.

induvina beḷagina saṁpttaniṁbugoṁba
cakōrana dhyānaventippudu.
antāgidde nānu.
māte viyōgavāda śiśuvina dhyanaventirpudu,
antāgidde nānu.
bandhanadalli sikkida phaṇiya dhyānaventirpudu,
antāgirde nānu.
rātriyoḷ mugida padmada bhramarana dhyānaventirpudu,
antāgidde nānu.
svapnadalli duṣṭakēsariya dhyānada madahastiyentirpudu,
antāgidde nānu.
nōṭavagalida nēhada dhyānaventirpudu,
antāgidde nānu.
brahmapāśa viṣṇu māyavanatigaḷeda chaladalli
ēnandaṟiyadidde nānu.
Guhēśvaraliṅgā,
Saṅganabasavaṇṇanoḷage līyavaha bharadalli
ēnendaṟiyadirde nānu.

What I am now is like
The thought of the cakōra seizing on
The moonlight's opulence;
What I am now is like
The thought of infant parted from her dam;
What I am now is like
The thought of snake caught in a trap;
What I am now is like
The thought of bee within a lotus flower
Shut for the night;
What I am now is like
The thought of elephant in heat
Seeing a furious lion in his dream;
What I am now is like
The thought of one remembering
The loved one out of sight;

In the pride of having undone
The noose of Brahma and Viṣṇu's lure,
I knew not what it was.
O Guhēśvaraliṅga, in the flush
Of dissolution in Saṅgana Basavaṇṇa,
I knew not what it was.

ಇಂತೀ ಶ್ರೀಮತ್‌ಸಕಲಗಣ ಪುರಾತನರೊಳ್ ಪ್ರಭುದೇವರು
ಮಹಾನುಭಾವಸದ್ಗೋಷ್ಠಿಯಂ ಮಾಡಿದ ಶೂನ್ಯಸಂಪಾದನೆಯೊಳ್
ಎಲ್ಲಾ ಪುರಾತನರ ಅವಸಾನದ ಪರಾಮರಿಕೆಗಂ
ವಿಂಶತ್ಯುಪದೇಶಂ ಸಮಾಪ್ತಂ
ಅಂತು ವಚನ ೧೪೬೪ ಕ್ಕಂ ಮಂಗಳಮಹಾ

ಶ್ರೀ

intī śrīmat saklagaṇa puratanaroḷ Prabhudēvaru
mahānubhāvasadgoṣṭhiyaṁ mādida śūnyasaṁpādaneyoḷ
ellā purātanara avasānada parāmarikegaṁ
viṁśatyupadēśaṁ samāptaṁ
antu vacana 1464 kkaṁ maṅgaḷamahā

śrī

Thus ends
The twentieth of the mystic discourses
of the *Śūnyasaṁpādane*
—Chapter on the prophecy of the śaraṇas' end—
held by Prabhu with the venerable saints

Thus it ends auspiciously with vacana No. 1464.

XXI

GŌRAKṢANĀTHA

Gōrakṣa was born in Paṭṭadakal, a historic town in the present Bijapur district. History tells us nothing about his parentage but records that he was king Naravarma's cowherd (This is clear from his name Gōrakṣa itself) and was the disciple of Matsēndranātha who was the chief protagonist of the Siddha sect. Gōrakṣa, as a disciple of the Siddhas, achieved some supernatural or occult powers. After some years, he went to the city of Kolhapur, in the present Maharāṣṭra State, and became famous by displaying his *siddhis*.

Once Rēvaṇasiddha, one of the well-known five Vīraśaiva ācāryas, went to Gōrakṣa's house for alms. Gōrakṣa, in his foolish pride, gave him a steel dagger, which Rēvaṇasiddha melted with his fire-eye and drank the molten steel. But the effect was that Gōrakṣa found the weapon thrust into his chest. But somehow, at the intercession of Mahālakṣmi, the chief local goddess, Rēvaṇasiddha made Gōrakṣa spit out the dagger.

Greatly humiliated, Gōrakṣa came to the Śrīśaila mountain, where through Haṭhayōga he was able to make his body as hard as diamond. When he was in high spirits about his unique achievement, Prabhudēva came down to Śrīśaila, where he met this great Siddha Gōrakṣa. As Śūnyasaṁpādane tells us, Gōrakṣa was utterly defeated by Prabhudēva and was initiated, at his earnest request, into the śaraṇa path. His glamour for occult powers having completely disappeared, Gōrakṣa achieved great heights in the śaraṇa spirituality. Few in number, his vacanas are mostly enigmatic in nature and contain some profound truths regarding the śaraṇa way of life. His vacanas end with the dedicatory phrase Gōrakṣapālaka Mahāprabhusiddha Sōmanāthaliṅga.

For details Vide: SSC, Pt. 1, pp. 68-72.

INTRODUCTION

to the

SAṀPĀDANE OF GŌRAKṢA'S ATTAINMENT AND EVERYBODY'S UNITIVE STATE

At last we come to the final act of this divine drama. The end of the śaraṇas was foreshadowed by Prabhudēva in Chapter XX.

Prabhudēva, having satisfied himself about the spiritual attainment of the śaraṇas, bids them end their lives in places dear to their hearts. For himself he chooses the plantain grove at Mount Śrīśaila. There is a ring of dissatisfaction in his words: true śaraṇas can no longer live in the age of Kali.

He seems to have a feeling that the world is not yet ready for the spiritual revolution the śaraṇas had intended to bring about. Yet, we cannot say that their mission had gone in vain. With them, as with every great religious movement, something new, something of inestimable value had come into the world which would never be effaced.

Bidding the śaraṇas goodbye, Prabhudēva leaves for Śrīśaila. On the way he meets a Siddha, Gōrakṣa by name, who had, by occult powers, made his body as hard as diamond (*vajradēha*), and lived in the belief that he had conquered death. What, Prabhudēva asks, if the body is made as hard as diamond? Nothing is indestructible except the indestructible One:

> How can one know the future that does not
> The past! The creatures born at dawn,
> Alas, have perished at the set of sun!
> Embodied creatures of but a day have gone
> Along the road they came. Good Sir,
> Guhēśvaraliṅga is not for any one!

Prabhudēva does not approve of any kind of yōga or *Siddhi* which removes the yōgi farther away from the one Reality; nothing else is of any avail—neither ambrosia, nor the philosopher's stone, nor the life-restoring plant:

> Go to, your yōga of trickery and fraud
> With roots and fibres, is no yōga!
> Go to, it is no yōga to have
> The trance of body, senses and the soul!
> The real and natural
> Is Guhēśvara!

Gōrakṣa is convinced of the utter futility of a yōga where the subject remains for ever separated from the object; and Prabhudēva, realising that Gōrakṣa is ripe for the Liṅga-initiation, instructs him in the Liṅga lore, and finding that the Siddha has rapidly matured for higher things, bestows on him the knowledge of the Absolute Void.

Then he proceeds to Śrīśaila. As he stands before the entrance of the grove, he gives us a glimpse of its dreadful nature. However, more dreadful still is the grove we call the body. The plantain grove on Mount Śrīśaila can be crossed and conquered; but it is well-nigh impossible to conquer the body. Prabhu crosses and conquers them both:

> I see no one who can
> Conquer the body's vast plantain grove:
> The seven seas of the world
> Encircle it. In life's vast wood
> The poisonous rain of the five senses pours.
> Anger's huge tiger roars and roars;
> The elephants of eight prides
> Are stamping about; the counter-shafted rain
> Of lust is pouring; jealousy,
> Enormous serpents, is spitting fire;
> That child of sin called greed
> Is chewing and eating; the triple pain,
> Like rain of fire, will not permit
> Your stepping out; mountains of self

Have fallen across the path;
You cannot face the fear of ghosts
Called the five elements;
Māya, the ogress, devours raw flesh;
The well of passions cannot be used;
Infatuation's creeper tangles your feet;
The sharp-edged sword of covetousness
Is not to be unsheathed... Unable to go
Into this plantain grove, gods, demons, men
Have all gone crazy and run off;
Those who have eyes upon their soles,
Those who have eyes all o'er themselves,
Have lost their heads and tails. But I
Have entered that plantain grove,
Have fought my way, and, never touched
By thorn or bramble, have won
By knowledge, the plantain grove,
And crossed it safe;
And dwelling in the ultimate trance
Of Guhēśvaraliṅga, lost in ecstasy,
I'm now more tranquil than tranquillity!

Thus ends the life divine of the super-eminent hero of this great drama, *Śūnyasampādane*.

Our editor tells us that, at this stage, Basavaṇṇa, knowing Prabhudēva's end intuitively, sings the glories of this Prabhu-Liṅga; while the more metaphysical Cennabasavaṇṇa remembers how incomprehensible Prabhudēva was in life. Maḍivāḷa Mācayya understands it as form returning to formlessness and compares him to a fruit which, having ripened, has left its stem. Soḍḍaḷa Bācarasa, on his part, thinks of him not only as the Reality returning from form to formlessness, but as the alchemic stone of love for those who are united with the Absolute. As Soḍḍaḷa Bācarasa, singing his last vacana, is released from this life and united with Liṅga, Basavaṇṇa declares that for such as he, or for that matter for all the śaraṇas, there is no such thing as death.

Now we have a picture of Basavaṇṇa himself during the last days of his life on earth. There is a note of deep regret in the thought

that all the good work the śaraṇas were destined to do should come to a premature end; as if the Lord had withdrawn his mandate from the śaraṇas to increase upon the earth devotion to Guru, Liṅga and Jaṅgama. His farewell to his companions is characteristically full of that humility that we have learnt to associate with him (Vs. 31-32).

The immediate cause of Basavaṇṇa's hurried departure from Kalyāna was, as we have noted in Vol.II, pp. 7-8, the mixed marriage between a cobbler's son and a Brāhmin girl, and King Bijjaḷa's violent reaction to it. According to the editor, Basavaṇṇa, on leaving for Kappaḍi Saṅgama, gave orders to Jagadēva and Molleya Brahmayya to put an end to Bijjaḷa's life. We are then given an account of his tragic end. However, this is not in perfect conformity with the facts of history as have since come to light (Vide Vol. II pp. 7-8).

Basavaṇṇa, coming to Kappaḍi Saṅgama for his final union with Liṅga, sends back Appaṇṇa to Kalyāṇa to bring his wife Nīlamma to Kappaḍi Saṅgama. Nīlamma, however, flatly refuses to go with him on the ground that Lord Saṅgama is indivisible and infinite. There is no need to change places to be united with Liṅga. Appaṇṇa brings back the message and Basavaṇṇa accepts her stand unreservedly.

Basavaṇṇa attains his consubstantial union in the heart of Lord Saṅgama. The similes given in this connection are worthy of notice: ....like breezes mingling with the wind; like forked lightnings that appear, flash and vanish in sky; like hailstones, born of water, which lose themselves in water... (Pr. to V. 49).

For the first time in the whole work we have a glimpse of Nīlalōcaneyamma's, or Nīlamma's, personality. The whole tenor of her vacanas—only thirteen in number including songs—is that she grew up to the Divine with the help of her lord Basavaṇṇa.

Basavaṇṇa had discovered for her the God-seed embedded in her heart. And she, as an "intelligent and hard-working farmer", grew up to God.[1] Her vacanas reflect her deep devotion, her imme-

1. Cf. Eckhart: The seed of God is in us. Given an intelligent and hard-working farmer, it will thrive and grow up to God, whose seed it is; and accordingly its fruits will be God-nature. Pear seeds grow into pear trees, nut seeds into nut trees, and God seed into God, (P. Ph, p, 49.)

diate and direct acquaintance with the divine Ground. The songs she sings when Appaṇṇa requested her to go to Kappaḍi Saṅgama, are an eloquent testimony to her magnanimity.

> Behold, behold, behold, behold, behold, O Liṅga!
> Behold the sport Basavaṇṇa makes!
> Although he tells me to go there,
> Is he not Saṅgayya here?
> Is it a virtue for a great wise soul
> To nurse the dual doubt of here and there?
>
> Along with all the bhaktas of the world,
> The gracious Guru's hidden in my hand.
> If I would harden my resolve and join,
> Is not this thing my Lord Saṅgamanātha?
>
> Greeting with lifted unreluctant hands
> The message of Saṅgana Basavaṇṇa,
> I say, 'This is Saṅgamanātha Himself' and merge
> Within the Liṅga on my palm!

When she learns of the passing away of her husband, her life-long spiritual teacher, this young lady of about thirty is plunged in profound grief:

> What's there for me, after my lord
> Has won the unitive state?
> I have no body, and no life.
> Now that the responsibility to the heart
> Is cancelled, I am
> But a partaker of the Bliss,
> O Saṅgayya!
>
> O Lord, the Liṅga on the palm
> Has vanished from my sight;
> The Liṅga on the palm is turned
> To Liṅga in my mind.. O Saṅgayya,
> Basava is gone his way beyond,
> And I am merging into you, my Lord!

She breathes her last giving utterance to her spiritual experience:

"Fading into that Void of voids, I taste
The beatific bliss. In Saṅgayya,
It has become a perfect Void of voids!"

At the loss of her brother, Akkanāgamma, Basavaṇṇa's elder sister, feels like an orphaned child. Basavaṇṇa in her eyes was an inexhaustible source of love and devotion. He was the very form of liberation, the very spirit of Liṅga and Jaṅgama, the light that kindled her entire being. Because of his grace she was saved, and when he is gone she feels that the breath of her life is following his. She gives vent to her deepest feelings:

Basavaṇṇa, when you came down to earth,
Devotion's crop spread everywhere!
Who knows, O brother, how great it is,
The harvest of your piety, on earth,
In heaven and in hell? If you have joined
Liṅga because the mission you were sent for
By the Moon-holder is complete,
Devotion too is gone with you!
Right discipline is gone with you!
The Innumerable ones are gone with you!
O brother! the Great House of this earth
Is emptied now, Basavaṇṇa!
Alas! you have gone, leaving me behind,
O incarnation of five alchemies!
Basavaṇṇa! you went away
As Prāṇaliṅga to Basavaṇṇapriya Lord Cennasaṅga,
O Saṅgana Basavaṇṇa!

Basavaṇṇa is gone, but (V. 62) he has left a fringe of his robe behind that the world may achieve the Divine union by holding on to it. Here we are reminded of Buddha. We are told that, crossing the threshold of Nirvāna, he looked back at the sorrow-ridden world and took a vow never to take that irrevocable step until the last vestiges of human suffering were wiped out. Singing the greatness of Basavaṇṇa, Akkanāgamma melts into the Absolute.

Now the scene seems to be shifted from Kalyāṇa to Uḷuve. Owing to the unquiet conditions at Kalyāṇa, Cennabasavaṇṇa, along

with Maḍivāḷa Mācayya and some other saints, left for Uḷuve. They had to fight heroically with the royal army which pursued them for their supposed involvement in the assassination of King Bijjaḷa.[1]

The loss of Basavaṇṇa has plunged both Cennabasavaṇṇa and Maḍivāḷa Mācayya in profound grief. They give expression to their deepest feelings and reverence for that mighty God-Man in songs and vacanas. According to Siddhavīraṇṇa, Cennabasavaṇṇa and Maḍivāḷayya breathed their last, or attained the Absolute, at Uḷuve.[2]

1. Vide SS, Vol. II, p. 4.
2. Vide Ch. XXI, Pr. to V. 78, p. 453.
Vide SS. Vol. III, p, 112.
In view of the differing historical evidence as to Maḍivāḷayya's final end at Uḷuve it is difficult to believe Siddhavīraṇṇa's statement in this regard.

ಏಕವಿಂಶತ್ಯುಪದೇಶ

ಗೋರಕ್ಷನ ಸಂಪಾದನೆ ಮತ್ತು ಎಲ್ಲಾ ಗಣಂಗಳ ಐಕ್ಯ

ಗೋರಕ್ಷಗೆ ನಿಜಪದಮಂ
ಓರಂತಿರದಿತ್ತು ಪ್ರಭುವು ನಿರ್ವಯಲಾಗಲು
ಭೂರಿ ಮಹಾಶರಣರುಗಳು
ಧಾರುಣಿಯೊಳಗಿರದೆ ಐಕ್ಯವಡೆದುದ ಪೇಳ್ವೆಂ

ĒKAVIṀŚATYUPADĒŚA

GŌRAKṢANA SAṀPĀDANE MATTU ELLĀ GAṆAṄGAḶA AIKYA

Gōrakṣage nijapadamaṁ
ōrantiradittu Prabhuvu nirvayalāgalu
bhūri mahāśaraṇarugaḷu
dhāruṇiyoḷagirade aikyavaḍeduda pēḷveṁ

THE TWENTY-FIRST LESSON

Gōrakṣa's Attainment and Everybody's Unitive State

I tell how, when Prabhudēva
Had given, as he had done before,
To Gōrakṣa the ultimate state
And himself become as Void,
Many great śaraṇas, weary of earth,
Attained the unitive state.

25

ಅದೆಂತೆಂದೊಡಾ ಪ್ರಭುದೇವರು ಬಸವರಾಜದೇವರು ಚೆನ್ನಬಸವರಾಜದೇವರು ಮಡಿವಾಳಮಾಚಿತಂದೆಗಳು ಮೊದಲಾದ ಅಸಂಖ್ಯಾತಮಹಾಗಣಂಗಳೆಲ್ಲರೂ ತಮ್ಮ ತಮ್ಮ ನಿಜಪದದ ನಿಜೈಕ್ಯಮಂ ಪೇಳಲು, ಪ್ರಭುದೇವರು ಕೇಳ್ದು ತಮ್ಮ ನಿಜಪದಮಂ ಪೇಳಿ, ಮತ್ತೆಲ್ಲಾ ಅಸಂಖ್ಯಾತರಿಗೆ ನಿರ್ವಾಹ ಸ್ಥಿತಿಗತಿಯ ನಿರೂಪಿಸುವ ಪ್ರಸ್ತಾವದ ವಚನ:

adentendoḍā Prabhudēvaru Basavarājadēvaru Cennabasavarājadēvaru Maḍivāḷamācitandegaḷu modalāda asaṅkhyātamahāgaṇaṅgaḷellarū tamma tamma nijapadada nijaikyamaṁ pēḷalu, Prabhudēvaru kēḷdu tamma nijapadamaṁ pēḷi, mattellā asaṅkhyātarige nirvāha sthitigatiya nirūpisuva prastāvada vacana:

For instance: The vacana which tells how, when the Innumerable Saints, including Lord Basavarāja, Lord Cennabasavarāja and Father Maḍivāḷa Māci, had told severally of their final union with the ultimate state, Prabhudēva, hearing them, told them of his own ultimate state, and again related to all the Innumerable Saints the circumstances of their final end:

೧

ಅವಧಿಯಳಿಯಿತ್ತು. ವ್ಯವಧಾನ ಉಳಿಯಿತ್ತು.
ನಿಜವೆ ನಿಜವನೊಡಗೂಡಿತ್ತು, ಕೇಳಾ ಬಸವಣ್ಣಾ.
ಕಲಿಯುಗದಲ್ಲಿ ಮುಂದೆ ಇರಬಾರದು ನಿಜಶರಣರಿಗೆ.
ನಡೆ ನೀನು, ಕಪ್ಪಡಿಯ ಸಂಗಯ್ಯನಲ್ಲಿ ಒಡಗೂಡು.
ಉಳುಮೆಯಲ್ಲಿ ನಿಜವನೆಯ್ದು ನಡೆ ಚೆನ್ನಬಸವಣ್ಣಾ.
ಮಹವನೊಡಗೂಡು ಮಡಿವಾಳಯ್ಯಾ.
ಸೊಡ್ಡಳಬಾಚರಸರು ಮೊದಲಾದ ಪ್ರಮಥರೆಲ್ಲರೂ
ನಿಜವನೈದುವದು ನಿರ್ವಯಲ ಸಮಾಧಿಯಲ್ಲಿ.
ಬಗಿದು ಹೋಗಿ ಲಿಂಗದೊಳಗೆ ಹೊಗುವರೆಲ್ಲರೂ.
ನಡೆಯಿರಿ ಕಾಯವೆರಸಿ ಕೈಲಾಸಕ್ಕೆ.
ಕಾಯಸಹಿತೈದುವದು ನಿಮಗೆಲ್ಲರಿಗೆಯೂ
ಉಪದೇಶ ಮಂತ್ರ ತಪ್ಪದು.
ನಮಗೆ ಕದಳಿಯಲ್ಲಿ ಹೊಕ್ಕು ನಿಜದಲ್ಲಿ ಒಡಗೂಡುವ ಪರಿಣಾಮ.
ಇದು ನಮ್ಮ ಗುಹೇಶ್ವರಲಿಂಗದಾಣತಿ ನಿಮಗೆಲ್ಲರಿಗೆಯೂ.

avadhiyaḷiyittu. vyavadhāna uḷiyittu.
nijave nijavanoḍagūḍittu, kēḷā Basavaṇṇā.
kaliyugadalli munde irabāradu nijaśaraṇarige.
naḍe nīnu, Kappaḍiya Saṅgayyanalli oḍagūḍu.

uḷumeyalli nijavaneydu naḍe Cennabasavaṇṇā.
mahavanoḍagūḍu Maḍivāḷayyā.
Soḍḍaḷabācarasaru modalāda pramatharellarū
nijavanaiduvadu nirvayala samādhiyalli.
bagidu hōgi liṅgadoḷage hoguvarellarū.
naḍeyiri kāyaverasi kailāsakke.
kāyasahitaiduvadu nimagellarigeyū
upadēśa mantra tappadu.
namage Kadaḷiyalli hokku nijadalli oḍagūḍuva pariṇāma.
idu namma Guhēśvaraliṅgadāṇati nimagellarigeyū.

Our time has lapsed; parting is all
That's left. Hear me, Basavaṇṇa,
The Real's one with the Reality,
In Kaliyuga, the true śaraṇas
Can be no more; go you, and join
Lord Saṅga at Kappaḍi; go,
Cennabasavaṇṇa, attain Reality
At Uḷuve; and you, Maḍivāḷayya,
Unite yourself with the Great Light.
Soḍḍaḷa Bācarasa, with all the Saints,
Should in a spaceless trance attain the Truth.
Go, penetrate your way into Liṅga who can.
Proceed to Kailāsa with your body of flesh.
This sacred counsel's meant for you,
That you arrive with your body of flesh.
For me the final peace must be
To enter the plantain grove and there unite
With the Absolute... This is
For all of you Guhēśvaraliṅga's behest.

ಇಂತು ಪ್ರಭುದೇವರು ಬಸವರಾಜದೇವರು ಮೊದಲಾದ ಅಸಂಖ್ಯಾತರೆಲ್ಲರಿಗೆ ನಿಜಸಮಾಧಿಯ ಹರಿವ ನಿರೂಪಿಸಿ ಬೀಳ್ಕೊಂಡು, ಕಲ್ಯಾಣಮಂ ಪೊಱಮಟ್ಟು, ಶ್ರೀಪರ್ವತಕ್ಕೆ ಬಿಜಯಂಗೈವುತ್ತಿರಲಲ್ಲಿ ಗೋರಕ್ಷನೆಂಬ ಸಿದ್ಧನಂ ಕಂಡು ಸಂಭಾಷಣೆಯಂ ಮಾಡಿ, ಅವನ ವಜ್ರದೇಹಮಂ ಅಸಿತಾಳಪತ್ರದಿಂ ಹೊಯಿದು ನೋಡಿ ಪರೀಕ್ಷೆಯಂ ಕಂಡು ನುಡಿವ ಪ್ರಸ್ತಾವದ ವಚನ:

intu Prabhudēvaru Basavarājadēvaru modalāda asaṅkhyātarellarige nijasamādhiya hariva nirūpisi bīḷkoṇḍu, Kalyāṇamaṁ poṟamaṭṭu,

śrīparvatakke bijayaṅgaivuttiralalli Gōrakṣanemba siddhanaṁ kaṇḍu saṁbhāṣaṇeyaṁ māḍi, avana vajradēhamaṁ asitāḷapatradiṁ hoyidu nōḍi parīkṣeyaṁ kaṇḍu nuḍiva prastāvada vacana:

The vacana which tells how, Prabhudēva, having related to the Innumerable Saints, including Lord Basavarāja, the way of the ultimate trance, and bidden them farewell, left Kalyāṇa; and how, as he was going towards the holy mountain, he met there an accomplished yōgi called Gōrakṣa; and, as they conversed together, he tested the latter's adamantine body with the stroke of a sharp sword and, seeing the result, spoke thus:

